> "3. ಈ ಹಿನ್ನಲೆಯಲ್ಲಿ, ಸಂಬಂಧಪಟ್ಟ ಇಲಾಖೆಗಳು ಈ ಕೂಡಲೇ ತಮ್ಮ ಇಲಾಖೆಯ ವೆಬ್‌ಸೈಟ್‌ನ ಮಾಹಿತಿಯು ಕನ್ನಡ ಭಾಷೆಯಲ್ಲಿ ಕಡ್ಡಾಯವಾಗಿ ಲಭ್ಯವಾಗುವಂತೆ ಕ್ರಮ ಕೈಗೊಂಡು, ಅಂತರ್ಜಾಲತಾಣವನ್ನು ಆಗಿಂದಾಗೇ ಇಂದೀಕರಿಸಲು ಸೂಚಿಸಿದೆ. ಇದಲ್ಲದೇ, ಆಯಾಯ ಇಲಾಖೆಯ ಅಂತರ್ಜಾಲತಾಣದ ಎಲ್ಲಾ ಲಿಂಕ್‌ಗಳನ್ನು ಸರಿಯಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳಲು ಹಾಗೂ ಮುಂದೆ ಇಂತಹ ದೂರುಗಳು ಮರುಕಳಿಸದಂತೆ ನೋಡಿಕೊಳ್ಳಬೇಕೆಂದು ಕೋರಿದೆ. "

XXX XXX XXX

2. ಅಂತರ್ಜಾಲತಾಣದಲ್ಲಿ ಒದಗಿಸಿರುವ ಮಾಹಿತಿಯನ್ನು ಕಡ್ಡಾಯವಾಗಿ ಕನ್ನಡದಲ್ಲೂ ಒದಗಿಸಬೇಕೆಂದು ಹಲವಾರು ವರ್ಷಗಳಿಂದ ಸೂಚನೆಗಳನ್ನು ನೀಡಲಾಗುತ್ತಿದ್ದು, ಅವುಗಳನ್ನು ಇನ್ನು ಪಾಲಿಸದೇ ಇರುವ ವಿಷಯವನ್ನು ಸರ್ಕಾರದ ಗಮನಕ್ಕೆ ತರಲಾಗಿದೆ. ಈ ವಿಷಯದಲ್ಲಿ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ರವರು ಮಾನ್ಯ ಮುಖ್ಯಮಂತ್ರಿಯವರಿಗೆ ಉದ್ದೇಶಿಸಿದ ದಿನಾಂಕ: 28.09.2012ರ ಅವರ ಪತ್ರ ಸಂ: ಕಅಪ್ರಾ/ಅ/268/2012–13ರನ್ವಯ ಈ ಕೆಳಕಂಡಂತೆ ಅವಲೋಕಿಸಿರುತ್ತಾರೆ:–

> "ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮ ಭಾಷೆ ಶಾಸ್ತ್ರೀಯ ಭಾಷೆಯ ಸ್ಥಾನ–ಮಾನ ದೊರೆತಿರುವ ಹಿನ್ನೆಲೆಯಲ್ಲಿ ಕನ್ನಡವನ್ನು ಆಡಳಿತದ ಎಲ್ಲಾ ಹಂತದಲ್ಲೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಜವಾಬ್ದಾರಿಯುಳ್ಳ ಅಧಿಕಾರಿಗಳು ಹೊಣೆಗಾರಿಕೆಯಿಂದ ವಿಮುಖರಾಗುತ್ತಿದ್ದು, ಇಂತಹ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಹಾಗೂ ಕಠಿಣ ಶಿಸ್ತು ಕ್ರಮ ಕೈಗೊಳ್ಳುವುದು ಅನಿವಾರ್ಯವೆಂದು ಭಾವಿಸುತ್ತೇನೆ.
>
> ಆಡಳಿತದಲ್ಲಿ ಕನ್ನಡ ಅನುಷ್ಠಾನಗೊಳಿಸುವಲ್ಲಿ ಹಾಗೂ ಅಂತರ್ಜಾಲತಾಣದಲ್ಲಿ ಸರ್ಕಾರದ ಯೋಜನೆಗಳ ಮಾಹಿತಿಯನ್ನು ಒದಗಿಸಲು ವಿಮುಖನೀತಿ ಅನುಸರಿಸುತ್ತಿರುವ ಅಧಿಕಾರಿಗಳನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಗಂಭೀರವಾಗಿ ಪರಿಗಣಿಸಿದೆ. ಸರ್ಕಾರದ ಅಂತರ್ಜಾಲತಾಣದಲ್ಲಿ ಎಲ್ಲ ಮಾಹಿತಿಯು ಕನ್ನಡದಲ್ಲಿ ಸುಲಭವಾಗಿ ದೊರೆಯುವಂತೆ ಅಂತರ್ಜಾಲತಾಣವನ್ನು ಅಭಿವೃದ್ಧಿಪಡಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಬೇಕಾಗಿ ಕೋರುತ್ತೇನೆ."

XXX XXX XXX

3. ಈ ಹಿನ್ನೆಲೆಯಲ್ಲಿ, ಸರ್ಕಾರದ ಎಲ್ಲಾ ಇಲಾಖೆಗಳು ಈ ಕೂಡಲೇ ಅಂತರ್ಜಾಲತಾಣದಲ್ಲಿ ಆಯಾಯ ಇಲಾಖೆಗೆ ಸಂಬಂಧಿಸಿದ ಮಾಹಿತಿಯು ಕಡ್ಡಾಯ ಹಾಗೂ ಸುಲಭವಾಗಿ ಕನ್ನಡದಲ್ಲಿ ದೊರೆಯುವಂತೆ ಅಂತರ್ಜಾಲತಾಣವನ್ನು ಅಭಿವೃದ್ಧಿಪಡಿಸಲು ಮತ್ತು ಅದನ್ನು ಇಂದೀಕರಿಸಲು ಕ್ರಮ ಕೈಗೊಳ್ಳಲು ಹಾಗೂ ಮುಂದೆ ಇಂತಹ ದೂರುಗಳಿಗೆ ಆಸ್ಪದವಾಗದಂತೆ ನೋಡಿಕೊಳ್ಳಬೇಕೆಂದು ಈ ಮೂಲಕ ಸೂಚಿಸಿದೆ.

ಹೆಚ್.ಆರ್. ನಾಗರಾಜ
ಪೀಠಾಧಿಕಾರಿ–1
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಇ–ಆಡಳಿತ)

P.R. 57

ಕಂದಾಯ ಸಚಿವಾಲಯ

ವಿಷಯ : ಶ್ರೀ ಅಗಸ್ತ್ಯ ಇಂಟರ್ ನ್ಯಾಷನಲ್ ಫೌಂಡೇಷನ್, ರಾಯಚೂರು ಇವರಿಗೆ ರಾಯಚೂರು ಜಿಲ್ಲೆ, ರಾಯಚೂರು ತಾಲ್ಲೂಕಿನ ರಾಯಚೂರು ಗ್ರಾಮದ ಸರ್ವೆ ನಂ. 1192 ರಲ್ಲಿನ ಜಮೀನು ಮಂಜೂರು ಮಾಡುವ ಬಗ್ಗೆ.

ಉಲ್ಲೇಖ :

1. ಸರ್ಕಾರದ ಕಾರ್ಯದರ್ಶಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ) ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅ.ಸ.ಪತ್ರ ಸಂಖ್ಯೆ : ಇಡಿ 411 ಎಂಸಿಡಿ 2009 ದಿನಾಂಕ : 19–10–2012.
2. ಜಿಲ್ಲಾಧಿಕಾರಿ, ರಾಯಚೂರು ಇವರ ಪತ್ರ ಸಂಖ್ಯೆ : ಕಂ. ಭೂಮಿ/1, 2012–13/121, ದಿನಾಂಕ : 30–4–2012.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಂತೆ ಸರ್ಕಾರದ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ ಇವರು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಅರೆ ಸರ್ಕಾರಿ ಪತ್ರ ಬರೆದು ಕರ್ನಾಟಕದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವಿಜ್ಞಾನ ಕಲಿಕೆ ಮತ್ತು ಬೋಧನೆಯನ್ನು ಸದೃಡಗೊಳಿಸಲು ಕರ್ನಾಟಕ ಸರ್ಕಾರವು ಅಗಸ್ತ್ಯ ಇಂಟರ್ ನ್ಯಾಷನಲ್ ಫೌಂಡೇಷನ್‌ರವರೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಸದರಿ ಒಡಂಬಡಿಕೆ ಅನುಸಾರ ರಾಯಚೂರಿನಲ್ಲಿ ಅಪೆಕ್ಸ್ ಕ್ರಿಯಾ ಶೀಲ ಕೇಂದ್ರ (Apex Creativeity Centre) ಸ್ಥಾಪಿಸಲು ಉದ್ದೇಶಿಸಲಾಗಿದ್ದು ಅದಕ್ಕಾಗಿ ರಾಯಚೂರ ಜಿಲ್ಲೆ. ರಾಯಚೂರ ತಾಲ್ಲೂಕಿನ ಸರ್ವೆ ನಂ. 1192ರಲ್ಲಿ ಲಭ್ಯವಿರುವ ಗಾಯರಾಣ ಜಮೀನಿನಲ್ಲಿ 15–00 ಎಕರೆ ಜಮೀನನ್ನು ಸರ್ಕಾರದ ಯೋಜನೆಗಾಗಿ ಮಂಜೂರು ಮಾಡುವಂತೆ ಕೋರಿದ್ದಾರೆ.

ಮೇಲೆ ಕ್ರಮ ಸಂಖ್ಯೆ (2) ರಂತೆ ಜಿಲ್ಲಾಧಿಕಾರಿ, ರಾಯಚೂರು ಜಿಲ್ಲೆ. ರಾಯಚೂರು ಇವರು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿ ರಾಯಚೂರು ಗ್ರಾಮದ ಸರ್ಕಾರಿ ಗಾಯರಾಣ ಜಮೀನಿನ ಸರ್ವೆ ನಂ. 1192 ರಲ್ಲಿನ ಸಮಗ್ರ ವಿಸ್ತೀರ್ಣ 49 ಎಕರೆ 36 ಗುಂಟೆ ಜಮೀನಿನ ಪೈಕಿ ನಿಖರವಾಗಿ ಲಭ್ಯವಾಗುವ ವಿಸ್ತೀರ್ಣ 36 ಎಕರೆ 36 ಗುಂಟೆ ಜಮೀನು. ಈ ಜಮೀನಿನ ಪೈಕಿ ರಾಯಚೂರು ವಿಜ್ಞಾನ ಕೇಂದ್ರಕ್ಕೆ ವಿಸ್ತೀರ್ಣ 10 ಎಕರೆ 10 ಗುಂಟೆ ಹಾಗೂ ಜಿಲ್ಲಾ ಬಾಲಭವನ ನಿರ್ಮಾಣಕ್ಕೆ ವಿಸ್ತೀರ್ಣ 3–00 ಎಕರೆ ಗುತ್ತಿಗೆ ನೀಡಲಾಗಿರುತ್ತದೆ. ಇದಲ್ಲದೆ 49 ಎಕರೆ 36 ಗುಂಟೆ ಜಮೀನಿನಲ್ಲಿ 16 ಎಕರೆ 36 ಗುಂಟೆ ಹಾಸು ಬಂಡೆ ತರಹ ಚಿಕ್ಕದಾದ ಗುಡ್ಡ ಇರುತ್ತದೆ. ಇದರ ನಿವ್ವಳ ವಿಸ್ತೀರ್ಣ 20–00 ಎಕರೆ, ಒಟ್ಟು ಕ್ರೋಢೀಕರಿಸಿದ ವಿಸ್ತೀರ್ಣ 36 ಎಕರೆ 36 ಗುಂಟೆ ಜಮೀನು ಲಭ್ಯವಿರುತ್ತದೆ.

ಕರ್ನಾಟಕ ಭೂ ಕಂದಾಯ ನಿಯಮಾವಳಿಗಳೂ 1966ರ ನಿಯಮ 97(1)ರಲ್ಲಿ ನಿರ್ದಿಷ್ಟಪಡಿಸಿರುವಂತೆ 100 ಜಾನುವಾರುಗಳಿಗೆ 30–00 ಎಕರೆ ವಿಸ್ತೀರ್ಣದಂತೆ ರಾಯಚೂರು ಪಟ್ಟಣದ ಜಾನುವಾರುಗಳ ಸಂಖ್ಯೆ : 2778 ಇದ್ದು ಈ ಜಾನುವಾರಗಳ ಸಂಖ್ಯೆಗೆ ಅನುಗುಣವಾಗಿ 834.00 ಎಕರೆ ಗಾಯರಾಣ ಜಮೀನಿನ ಅವಶ್ಯಕತೆ ಇರುತ್ತದೆ. ಅವಶ್ಯಕತೆಗೆ ಅನುಗುಣವಾಗಿ ರಾಯಚೂರು ಗ್ರಾಮದಲ್ಲಿ ಲಭ್ಯವಿರುವ ಗಾಯರಾಣ ಜಮೀನಿನ ವಿಸ್ತೀರ್ಣ 943–35 ಎಕರೆ. ಸದರಿ ಜಮೀನು ಅರಣ್ಯ ಜಮೀನಾಗಿರುವುದಿಲ್ಲ. ಈ ಜಮೀನು ನಗರ ವ್ಯಾಪ್ತಿಯಿಂದ 3.00 ಕಿ.ಮೀ. ಅಂತರದಲ್ಲಿದೆ. ರಾಯಚೂರು ಜಿಲ್ಲೆಯು ಹೈದರಾಬಾದ್ ಕರ್ನಾಟಕದ ಹಿಂದುಳಿದ ಪ್ರದೇಶವಾಗಿದ್ದು ಉದ್ದೇಶಿತ ಸಂಸ್ಥೆಯು ರಾಯಚೂರಿನಲ್ಲಿ ವಿಜ್ಞಾನ ಕಲಿಕೆ ಮತ್ತು ಬೋಧನೆಯನ್ನು ಸದೃಡಗೊಳಿಸುವ ಸಲುವಾಗಿ ಅಪೆಕ್ಸ್ ಕ್ರಿಯಾಶೀಲ ಕೇಂದ್ರ (Apex Creativeity Centre) ಸ್ಥಾಪಿಸುವ ಪರಿಕಲ್ಪನೆ ಹೊಂದಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಸೂಕ್ತವೆಂದು ಸರ್ಕಾರ ಮನಗಂಡು ರಾಯಚೂರು ಗ್ರಾಮದ ಸರ್ವೆ ನಂ. 1192ರಲ್ಲಿನ ಸಮಗ್ರ ವಿಸ್ತೀರ್ಣ 49 ಎಕರೆ 36 ಗುಂಟೆ ಗಾಯರಾಣ ಜಮೀನಿನ ಪೈಕಿ 16–00 ಎಕರೆ ಜಮೀನನ್ನು ಮಂಜೂರು ಮಾಡುವಂತೆ ಶಿಕ್ಷಣ ಇಲಾಖೆಯವರು ಕೋರಿದ್ದಾರೆ. ಈ ಗಾಯರಾಣ ಜಮೀನಿನಲ್ಲಿ 6 ಎಕರೆ ಸಮತಟ್ಟಾದ ಜಮೀನು ಹಾಗೂ ಕಲ್ಲುಬಂಡೆಗಳಿಂದ ಕೂಡಿದ 10–00 ಎಕರೆ ಜಮೀನು ಮಂಜೂರು ಮಾಡಲು ನಿರ್ಧರಿಸಲಾಯಿತು.

ಈ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ : 17 : ಎಲ್‌ಜಿಆರ್ : 2012 ಭಾಗ–1, ಬೆಂಗಳೂರು, ದಿನಾಂಕ : 22–12–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ರಾಯಚೂರ ಜಿಲ್ಲೆ, ರಾಯಚೂರು ತಾಲ್ಲೂಕಿನ, ರಾಯಚೂರು ಗ್ರಾಮದ ಸರ್ವೆ ನಂ. 1192 ರಲ್ಲಿನ 49 ಎಕರೆ 36 ಗುಂಟೆ ಗಾಯರಾಣ ಜಮೀನಿನ ಪೈಕಿ 6 ಎಕರೆ ಸಮತಟ್ಟಾದ ಜಮೀನು ಹಾಗೂ ಕಲ್ಲು ಬಂಡೆಗಳಿಂದ ಕೂಡಿದ 10–00 ಎಕರೆ ಜಮೀನು ಒಟ್ಟು 16–00 ಎಕರೆ ಜಮೀನನ್ನು ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97(4)ರಡಿಯಲ್ಲಿನ ಅವಕಾಶದಂತೆ ಗಾಯರಾಣ ಶೀರ್ಷಿಕೆಯಿಂದ ತಗ್ಗಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 20 (1)(ಬಿ) ರನ್ವಯ ರಾಯಚೂರಿನಲ್ಲಿ ವಿಜ್ಞಾನ ಕಲಿಕೆ ಮತ್ತು ಬೋಧನೆಯನ್ನು ಸದೃಡಗೊಳಿಸುವ ಸಲುವಾಗಿ ಅಪೆಕ್ಸ್ ಕ್ರಿಯಾಶೀಲ ಕೇಂದ್ರ (Apex Creativity Centre) ಸ್ಥಾಪಿಸಲು ಅಗಸ್ತ್ಯ ಇಂಟರ್‌ನ್ಯಾಷನಲ್ ಫೌಂಡೇಷನ್ ಇವರಿಗೆ ಉಚಿತವಾಗಿ ಮಂಜೂರು ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಜಿ. ಲಕ್ಷ್ಮೀನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಮಂಜೂರಾತಿ–3).

P.R. 58

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ: ಶ್ರೀ ಎಂ. ಮಹಮದ್ ರಫೀಕ್, ಹಿಂದಿನ ದ್ವಿತೀಯ ದರ್ಜೆ ಸಹಾಯಕರು, ಪ್ರಸ್ತುತ ಜೂನಿಯರ್ ವರ್ಕ್ ಇನ್ಸ್‌ಪೆಕ್ಟರ್, ಜಿಲ್ಲಾ ಪಂಚಾಯತ್ ಉಪ ವಿಭಾಗ, ಕೂಡ್ಲಗಿ, ಬಳ್ಳಾರಿ ಜಿಲ್ಲೆ ಇವರಿಗೆ ದಂಡನೆ ವಿಧಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ

ಓದಲಾಗಿದೆ:
1. ಕಾರಣ ಕೇಳುವ ನೋಟೀಸ್ ಸಂಖ್ಯೆ: ಸಿಆಸುಇ 07 ಎಸ್‌ಇಎನ್ 2002, ದಿನಾಂಕ: 3–5–2002
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 07 ಎಸ್‌ಇಎನ್ 2002, ದಿನಾಂಕ: 09–02–2007
3. ವಿಚಾರಣಾಧಿಕಾರಿಗಳ ವರದಿ ದಿನಾಂಕ: 18–05–2010
4. ಎರಡನೇ ಕಾರಣ ಕೇಳುವ ನೋಟೀಸ್ ದಿನಾಂಕ: 21–10–2010
5. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 220 ಕೆಇವಿ 2007, ದಿನಾಂಕ: 16–03–2012
6. ಸರ್ಕಾರದ ಪತ್ರ ಸಂಖ್ಯೆ: ಸಿಆಸುಇ 220 ಕೆಇವಿ 2007, ದಿನಾಂಕ: 08–05–2012, 21–06–2012 ಮತ್ತು 28–09–2012
7. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: PSC 32 CNS 12, ದಿನಾಂಕ: 8–11–2012

ಪ್ರಸ್ತಾವನೆ:

ಶ್ರೀ ಹನುಮಂತಪ್ಪ, ನಿವೃತ್ತ ಕೆ.ಎ.ಎಸ್. ಅಧಿಕಾರಿ, ಇವರು ಉಪ ಕಾರ್ಯದರ್ಶಿಯಾಗಿ, ಶ್ರೀ ಈರಪ್ಪ, ನಿವೃತ್ತ ಕೆ.ಎ.ಎಸ್. ಅಧಿಕಾರಿ, ಅವರು ಸಹಾಯಕ ಕಾರ್ಯದರ್ಶಿಯಾಗಿ, ಶ್ರೀ ದೊಡ್ಡ ಎರ್ರಣ್ಣ ಅವರು ಅಧೀಕ್ಷಕರಾಗಿ, ಶ್ರೀ ಜಿ. ಕೃಷ್ಣಮೂರ್ತಿ, ಶ್ರೀ ಎ. ವಿಜಯಕುಮಾರ್, ಶ್ರೀ ಕೆ.ಹೆಚ್. ವಿಶ್ವಜೀವನ್ ಕುಮಾರ್ ಅವರುಗಳು ಪ್ರಥಮ ದರ್ಜೆ ಸಹಾಯಕರಾಗಿ, ಶ್ರೀ ಎಂ. ಮಹಮದ್ ರಫೀಕ್ ಅವರು ದ್ವಿತೀಯ ದರ್ಜೆ ಸಹಾಯಕರಾಗಿ ಹಾಗೂ ಶ್ರೀಮತಿ ಎ.ಎನ್. ಶ್ರೀವಳ್ಳಿ ಅವರು ಬೆರಳಚ್ಚುಗಾರ್ತಿಯಾಗಿ ಈ ಹಿಂದೆ ಜಿಲ್ಲಾ ಪಂಚಾಯತ್ ಬಳ್ಳಾರಿ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ದಿನಾಂಕ: 01–07–1984ಕ್ಕಿಂತ ಪೂರ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ವಾಮನಮೂರ್ತಿ, ಶ್ರೀ ಮಹಮದ್ ಆಲಿ, ಶ್ರೀ ರಾಜಾಸಾಬ ಮತ್ತು ಶ್ರೀ ಎನ್. ಶರಣಪ್ಪ ಎಂಬ ದಿನಗೂಲಿ

ನೌಕರರನ್ನು ಸೇವೆಯಲ್ಲಿ ಸಕ್ರಮಗೊಳಿಸಲು ದಿನಾಂಕ: 23–11–2000ರ ಸರ್ಕಾರದ ಖೋಟಾ ಆದೇಶವನ್ನು ಸೃಷ್ಟಿಸಿ ಜಾರಿಗೊಳಿಸಿರುವ ಮತ್ತು ಇದರಿಂದಾಗಿ ಸರ್ಕಾರಕ್ಕೆ ರೂ. 5,77,110/–ಗಳ ಮೊತ್ತದ ಆರ್ಥಿಕ ನಷ್ಟವುಂಟುಮಾಡಿರುವ ಆರೋಪಗಳಿಗಾಗಿ ಶ್ರೀ ಎಂ. ಮಹಮದ್ ರಫೀಕ್ ಮತ್ತು ಇತರರಿಗೆ ಮೇಲೆ (1)ರಲ್ಲಿ ಓದಲಾದ ದಿನಾಂಕ: 03–05–2002ರ ನೋಟೀಸುಗಳನ್ನು ಜಾರಿ ಮಾಡಿ ಅವರುಗಳಿಂದ ಸಮಜಾಯಿಸಿ ಕೇಳುವ ಮೂಲಕ ಅವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಆಪಾದಿತ ಅಧಿಕಾರಿ/ನೌಕರರು ತಮ್ಮ ಮೇಲೆ ಹೊರಿಸಲಾದ ಆರೋಪಗಳನ್ನು ನಿರಾಕರಿಸಿ, ತಮ್ಮ ಲಿಖಿತ ಹೇಳಿಕೆಗಳನ್ನು ನೀಡಿದ್ದರಿಂದ, ಈ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯಲು ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ನಿರ್ಧರಿಸಿ ಮೇಲೆ (2)ರಲ್ಲಿ ಓದಲಾದ ದಿನಾಂಕ: 09–02–2007ರಲ್ಲಿ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11(2)ರ ಅಡಿಯಲ್ಲಿ ಶ್ರೀ ಎಂ. ಎಸ್. ನಟರಾಜಮೂರ್ತಿ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ನಿಯಮ 11(5)ರ ಅಡಿಯಲ್ಲಿ ಉಪ ಕಾರ್ಯದರ್ಶಿ (ಆಡಳಿತ), ಜಿಲ್ಲಾ ಪಂಚಾಯತ್, ಬಳ್ಳಾರಿ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿತ್ತು.

ವಿಚಾರಣಾಧಿಕಾರಿಯವರು ಪ್ರಕರಣದ ಸಮಗ್ರ ವಿಚಾರಣೆಯನ್ನು ನಡೆಸಿ ಮೇಲೆ (3)ರಲ್ಲಿ ಓದಲಾದ ದಿನಾಂಕ: 18–05–2010ರ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ವರದಿಯ ಪ್ರತಿಯನ್ನು ಆಪಾದಿತರಿಗೆ ಒದಗಿಸಿ ಮೇಲೆ (4)ರಲ್ಲಿ ಓದಲಾದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಸಿಆಸುಇ 220 ಕೆಇವಿ 2007, ದಿನಾಂಕ: 21–10–2010ನ್ನು ಜಾರಿ ಮಾಡಿ ಅವರಿಂದ ಸ್ಪಷ್ಟೀಕರಣವನ್ನು ಪಡೆಯಲಾಯಿತು.

ಎರಡನೆಯ ಕಾರಣ ಕೇಳುವ ನೋಟೀಸಿಗೆ ಆಪಾದಿತ ಅಧಿಕಾರಿ/ನೌಕರರು ತಮ್ಮ ಲಿಖಿತ ಹೇಳಿಕೆಗಳನ್ನು ಸಲ್ಲಿಸಿದ್ದು, ಆರೋಪಗಳನ್ನು ನಿರಾಕರಿಸಿರುತ್ತಾರೆ. ಶಿಸ್ತು ಪ್ರಾಧಿಕಾರಿಯಾದ ಸರ್ಕಾರವು ವಿಚಾರಣಾಧಿಕಾರಿಗಳ ವರದಿ ಮತ್ತು ಆಪಾದಿತ ಅಧಿಕಾರಿ/ನೌಕರರು ನೀಡಿರುವ ಲಿಖಿತ ಹೇಳಿಕೆಗಳಲ್ಲಿನ ಪ್ರತಿಯೊಂದು ಅಂಶಗಳನ್ನು ಪರಿಶೀಲಿಸಲಾಗಿ ಶ್ರೀ ಎಂ. ಮಹಮದ್ ರಫೀಕ್, ದ್ವಿತೀಯ ದರ್ಜೆ ಸಹಾಯಕ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ಮೇಲಿನ ಆರೋಪವು ಸಾಬೀತಾಗಿದೆಯೆಂದು ಹಾಗೂ ಉಳಿದ ಯಾವುದೇ ಅಧಿಕಾರಿ/ನೌಕರರು ತಪ್ಪಿತಸ್ಥರಲ್ಲವೆಂದು ಹಾಗೂ ಅವರುಗಳ ವಿರುದ್ಧದ ಆರೋಪಗಳು ಸಾಬೀತಾಗಿರುವುದುಲ್ಲವೆಂಬ ನಿರ್ಣಯವನ್ನು ಸರ್ಕಾರವು ಒಪ್ಪಿಕೊಂಡು ಅವರನ್ನು ಮೇಲೆ (5)ರಲ್ಲಿ ಓದಲಾದ ಆದೇಶದಲ್ಲಿ ಆರೋಪಗಳಿಂದ ದೋಷಮುಕ್ತರನ್ನಾಗಿಸಿದೆ ಮತ್ತು ಶ್ರೀ ಎಂ. ಮಹಮದ್ ರಫೀಕ್, ಹಿಂದಿನ ದ್ವಿತೀಯ ದರ್ಜೆ ಸಹಾಯಕ ಅವರು ಪ್ರಕರಣದ ಪ್ರಮುಖ ದೋಷಿಯಾಗಿದ್ದು, 4 ಜನ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಲು ಕಾರಣವಾಗಿರುವ ಖೋಟಿ ಆದೇಶವನ್ನು ಹೊರಡಿಸಲು ರುವಾರಿಯಾಗಿ ಸರ್ಕಾರಕ್ಕೆ ರೂ. 5,77,110/– ನಷ್ಟ ಉಂಟುಮಾಡಿ ಕ್ರಿಮಿನಲ್ ನಡತೆ ಎಸಗಿ ಸರ್ಕಾರಿ ನೌಕರರಾಗಲು ಅನರ್ಹರಾಗಿರುವುದರಿಂದ ಅವರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸುವ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಧರಿಸಿದ ಹಿನ್ನೆಲೆಯಲ್ಲಿ KPSC (Consultation) Regulation 2000ರ Regulation 5(1)(b) ಪ್ರಕಾರ ಶ್ರೀ ಎಂ. ಮಹಮದ್ ರಫೀಕ್, ಅಂದಿನ ದ್ವಿತೀಯ ದರ್ಜೆ ಸಹಾಯಕ, ಪ್ರಸ್ತುತ ಜೂನಿಯರ್ ವರ್ಕ್ ಇನ್ಸ್‌ಪೆಕ್ಟರ್, ಜಿಲ್ಲಾ ಪಂಚಾಯತ್ ಉಪವಿಭಾಗ, ಕೂಡ್ಲಗಿ, ಇವರನ್ನು ಸೇವೆಯಿಂದ ವಜಾಗೊಳಿಸುವ ಸರ್ಕಾರದ ಪ್ರಸ್ತಾವನೆಗೆ ಮೇಲೆ (6)ರಲ್ಲಿ ಓದಲಾದ ಪತ್ರಗಳಲ್ಲಿ ಕರ್ನಾಟಕ ಲೋಕಸೇವಾ ಆಯೋಗವನ್ನು ಸಹಮತಿ ನೀಡುವಂತೆ ಕೋರಲಾಗಿತ್ತು. ಮೇಲೆ (7)ರಲ್ಲಿ ಓದಲಾದ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ಸದರಿ ಆಪಾದಿತ ನೌಕರನಿಗೆ ಸರ್ಕಾರಿ ಸೇವೆಯಿಂದ ವಜಾಗೊಳಿಸುವ ದಂಡನೆ ವಿಧಿಸುವ ಸರ್ಕಾರದ ಪ್ರಸ್ತಾವನೆಗೆ ಸಹಮತಿ ನೀಡಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ ಮಾಡಲು ನಿರ್ಧರಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 220 ಕೆಇವಿ 2007, ಬೆಂಗಳೂರು, ದಿನಾಂಕ: 30ನೇ ನವೆಂಬರ್ 2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಶ್ರೀ ಎಂ. ಮಹಮದ್ ರಫೀಕ್, ಅಂದಿನ ದ್ವಿತೀಯ ದರ್ಜೆ ಸಹಾಯಕರು, ಪ್ರಸ್ತುತ ಜೂನಿಯರ್ ವರ್ಕ್ ಇನ್ಸ್‌ಪೆಕ್ಟರ್, ಜಿಲ್ಲಾ ಪಂಚಾಯತ್ ಉಪವಿಭಾಗ, ಕೂಡ್ಲಗಿ, ಇವರ ವಿರುದ್ಧದ ಆರೋಪಗಳು ಸಾಬೀತಾಗಿರುವುದರಿಂದ, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8 (viii)ರ ಪ್ರಕಾರ ಸದರಿ ನೌಕರರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸುವ ದಂಡನೆ ವಿಧಿಸಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರು ಈ ಬಗ್ಗೆ ಮುಂದಿನ ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ವಿಶ್ವನಾಥ್ ಪಿ. ಹಿರೇಮಠ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ. (ಸೇವೆಗಳು–2)

PR 3

ಶಿಕ್ಷಣ ಸಚಿವಾಲಯ

ವಿಷಯ: ಶ್ರೀ ಅಮೃತರಾವ ರಾಮಚಂದ್ರಪ್ಪ ಬಸಗುಂಡೆ, ಕ್ಷೇತ್ರ ಶಿಕ್ಷಣಾಧಿಕಾರಿ, ಚಿಂಚೋಳಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ಇವರ ವಿರುದ್ಧ ದಾಖಲಾಗಿರುವ ಟ್ರ್ಯಾಪ್ ಪ್ರಕರಣದಲ್ಲಿ ಅಭಿಯೋಜನಾ ಮಂಜೂರಾತಿ ನೀಡುವ ಬಗ್ಗೆ

ಓದಲಾಗಿದೆ:

1. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಜಿ–26/ಸಿಆರ್ 7/2011 ಗುಲ್ಬರ್ಗಾ, ದಿನಾಂಕ: 06–09–2012
2. ತನಿಖಾಧಿಕಾರಿಯವರ ಅಂತಿಮ ವರದಿ
3. ತನಿಖಾ ದಾಖಲೆಗಳ ನಕಲುಗಳಾದ ಫಿರ್ಯಾದು, ಪ್ರಥಮ ವರ್ತಮಾನ ಪತ್ರ, ಪ್ರಾಯೋಗಿಕ ಪಂಚನಾಮೆ, ಹಣ ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ದಾಖಲೆಗಳು

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಶ್ರೀ ಅಮೃತರಾವ ರಾಮಚಂದ್ರಪ್ಪ ಬಸಗುಂಡೆ, ಕ್ಷೇತ್ರ ಶಿಕ್ಷಣಾಧಿಕಾರಿ, ಚಿಂಚೋಳಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ಇವರ ವಿರುದ್ಧ ಅಪರ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಮೇಲೆ ಕ್ರಮಾಂಕ (2) ಮತ್ತು (3) ರಂತೆ ಗುನ್ನೆ ಸಂಖ್ಯೆ: 07/2011ರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಗುಲ್ಬರ್ಗಾ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯ ಅಂತಿಮ ವರದಿಯ ನಕಲು ಮತ್ತು ತನಿಖಾ ದಾಖಲಾತಿಗಳನ್ನು ಕಳುಹಿಸಿ, ಆಪಾದಿತರನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಬಿ) ರ ಅನ್ವಯ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ತಮ್ಮ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಜಿ–26/ಸಿಆರ್ 7/2011 ಗುಲ್ಬರ್ಗಾ, ದಿನಾಂಕ: 06–09–2012ರೊಂದಿಗೆ ಕಳುಹಿಸಿಕೊಟ್ಟಿರುವ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1. ಫಿರ್ಯಾದಿ ಶ್ರೀ ಭೀಮಾಶಂಕರ ತಂದೆ ರಾಮಚಂದ್ರಪ್ಪ ತಳವಾರ, 36 ವರ್ಷ, ಸಹ ಶಿಕ್ಷಕ, ಸರ್ಕಾರಿ ಪ್ರೌಢಶಾಲೆ, ಐನೊಳ್ಳಿ, ಚಿಂಚೋಳಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ರವರ ಸ್ವಲಿಖಿತ ದೂರಿನ ದಿನಾಂಕ: 02–05–2011.
2. ಗುಲ್ಬರ್ಗಾ ಲೋಕಯುಕ್ತ ಪೊಲೀಸ್ ಠಾಣೆ ಗುನ್ನೆ ಸಂಖ್ಯೆ: 07/2011 ಕಲಂ 7, 13(1)(ಡಿ) ಆಧಾರ 13(2) ಪಿಸಿ ಕಾಯ್ದೆ –1988 ಪ್ರಥಮ ವರ್ತಮಾನ ವರದಿ ದಿನಾಂಕ: 02–05–2011
3. ಪ್ರಾಯೋಗಿಕ ಪಂಚನಾಮೆ (ಎಂಟ್ರಸ್ಟ್‌ಮೆಂಟ್ ಮಹಜರ್) ದಿನಾಂಕ: 02–05–2011
4. ಹಣ ಜಪ್ತಿ ಪಂಚನಾಮೆ (ಟ್ರ್ಯಾಪ್ ಮಹಜರ್) ದಿನಾಂಕ: 02–05–2011
5. ಸಹಾಯಕ ರಸಾಯನಿಕ ಪರೀಕ್ಷಕರು, ಸಾರ್ವಜನಿಕ ಆರೋಗ್ಯ ಸಂಸ್ಥೆ, ಬೆಂಗಳೂರು ಇವರ ವರದಿ ಪತ್ರ ಸಂಖ್ಯೆ PHI/CME/LOK/26/11–12, ದಿನಾಂಕ: 21–05–2011
6. ಕೃತ್ಯ ನಡೆದ ಸ್ಥಳ
7. **ಸಾಕ್ಷಿಗಳ ಹೇಳಿಕೆಗಳು**

   1. ಶ್ರೀ ಭೀಮಾಶಂಕರ ತಂದೆ ರಾಮಚಂದ್ರಪ್ಪ ತಳವಾರ, 36 ವರ್ಷ, ಸಹ ಶಿಕ್ಷಕ, ಸರ್ಕಾರಿ ಪ್ರೌಢಶಾಲೆ, ಐನೊಳ್ಳಿ, ಚಿಂಚೋಳಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ (ಫಿರ್ಯಾದುದಾರರು)
   2. ಶ್ರೀ ಸಂಗಪ್ಪ ತಂದೆ ಬಸಲಿಂಗಪ್ಪ ಕಡಿ, 49 ವರ್ಷ, ಎಸ್.ಡಿ.ಸಿ., ಜಿಲ್ಲಾ ತರಬೇತಿ ಸಂಸ್ಥೆ, ಜೇವರ್ಗಿ ಕಾಲೋನಿ, ಗುಲ್ಬರ್ಗಾ (ಪಂಚ–1)
   3. ಶ್ರೀ ಮಹಮದ್ ಮುಕ್ತಾರ್ ಅಹ್ಮದ್, ತಂದೆ ಮಹ್ಮದ್ ಯಾಸೀನ್, 56 ವರ್ಷ, ಪ್ರ.ದ.ಸ. ಜಂಟಿ ನಿರ್ದೇಶಕರ ಕಛೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ, ಗುಲ್ಬರ್ಗಾ (ಪಂಚ–2)
   4. ಶ್ರೀ ಬಸವರಾಜ ತಂದೆ ಚನ್ನಮಲ್ಲಪ್ಪ ಮಳಖೇಡ, 40 ವರ್ಷ, ಬಸವೇಶ್ವರ ಲೇವಾ ದೇವಿ ಸಂಸ್ಥೆ, ಸುಲೆಪೇಟ್ ವೀರಭದ್ರೇಶ್ವರ ಗುಡಿಯ ಹತ್ತಿರ, ಸುಲೆಪೇಟ್ ತಾಲ್ಲೂಕು, ಚಿಂಚೋಳಿ
   5. ಶ್ರೀ ಅಶೋಕ ತಂದೆ ಸಂಗಪ್ಪ ಬಿರಾದಾರ, 38 ವರ್ಷ, ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸುಂಠಾಣ ತಾಲ್ಲೂಕು, ಚಿಂಚೋಳಿ ಕಲಕುಟಗಿ, ಗುಲ್ಬರ್ಗಾ ಜಿಲ್ಲೆ
   6. ಶ್ರೀಮತಿ ಪದ್ಮಾವತಿ, 53 ವರ್ಷ, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಚಿಂಚೋಳಿ
   7. ಶ್ರೀ ಶ್ರೀಕಾಂತ ತಂದೆ ಶಿವಬಸಪ್ಪ ಸಾದಕನೂರ, 48 ವರ್ಷ, ಪ್ರ.ದ.ಸ., ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಚಿಂಚೋಳಿ
   8. ಶ್ರೀ ಅರ್ಜುನ ತಂದೆ ಗೈಬಣ್ಣಾ ಮಾಲೀಕರ, 49 ವರ್ಷ, ಮುಖ್ಯೋಪಾಧ್ಯಾಯರು, ಸರ್ಕಾರಿ ಪ್ರೌಢಶಾಲೆ, ಐನೋಳ್ಳಿ, ಚಿಂಚೋಳಿ
   9. ಶ್ರೀ ಬಿ.ಎಸ್. ಪರಮೇಶ ತಂದೆ ಸುಬ್ಬೇಗೌಡ, 54 ವರ್ಷ, ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ
   10. ಶ್ರೀ ಪಂಡಿತ ತಂದೆ ರಾಮಣ್ಣ ಸಿಂಧೆ, 34 ವರ್ಷ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ
   11. ಶ್ರೀ ಗಿರಿರಾಜ, ಕಿರಿಯ ಅಭಿಯಂತರರು, ಲೋಕೋಪಯೋಗಿ ಉಪ ವಿಭಾಗ, ಚಿಂಚೋಳಿ
   12. ಶ್ರೀ ಲಿಂಗಣ್ಣ, ಹೆಚ್.ಸಿ., ಕರ್ನಾಟಕ ಲೋಕಾಯುಕ್ತ ಠಾಣೆ, ಗುಲ್ಬರ್ಗಾ
   13. ಶ್ರೀ ಕಾಶಿನಾಥ, ಪಿ.ಸಿ., ಕರ್ನಾಟಕ ಲೋಕಾಯುಕ್ತ ಠಾಣೆ, ಗುಲ್ಬರ್ಗಾ
   14. ಶ್ರೀ ಪ್ರಹ್ಲಾದ, ಪಿ.ಸಿ., ಕರ್ನಾಟಕ ಲೋಕಾಯುಕ್ತ ಠಾಣೆ, ಗುಲ್ಬರ್ಗಾ
   15. ಶ್ರೀ ಅನೀಲ್‌ಕುಮಾರ್, ಪಿ.ಸಿ., ಕರ್ನಾಟಕ ಲೋಕಾಯುಕ್ತ ಠಾಣೆ, ಗುಲ್ಬರ್ಗಾ
   16. ಶ್ರೀ ಪಾಂಡುರಂಗ, ಪಿ.ಸಿ., ಕರ್ನಾಟಕ ಲೋಕಾಯುಕ್ತ ಠಾಣೆ, ಗುಲ್ಬರ್ಗಾ
   17. ಶ್ರೀ ಶ್ರೀನಿವಾಸರೆಡ್ಡಿ, ಪಿ.ಸಿ., ಕರ್ನಾಟಕ ಲೋಕಾಯುಕ್ತ ಠಾಣೆ, ಗುಲ್ಬರ್ಗಾ
   18. ಶ್ರೀ ಅಶೋಕಕುಮಾರ್, ಪಿ.ಸಿ., ಕರ್ನಾಟಕ ಲೋಕಾಯುಕ್ತ ಠಾಣೆ, ಗುಲ್ಬರ್ಗಾ

8. **ಲಂಚ ಕೇಳಲು ಆಧಾರವಾದ ಕಡತ** :–ಶ್ರೀ ಭೀಮಾಶಂಕರ ತಂದೆ ರಾಮಚಂದ್ರಪ್ಪ ತಳವಾರ ಇವರು ಸರ್ಕಾರಿ ಪ್ರೌಢಶಾಲೆ, ಐನೋಳ್ಳಿಯಲ್ಲಿ ಸಹ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿ ಚಿಂಚೋಳಿ ಇವರು ತಾಲ್ಲೂಕಿನ ಹೆಚ್ಚುವರಿ ಶಿಕ್ಷಕರ

ತಾತ್ಕಾಲಿಕ ಪಟ್ಟಿಯನ್ನು ತಯಾರಿಸಿ ಫಿರ್ಯಾದಿಯ ಹೆಸರನ್ನು ಸೇರಿಸಿ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ರವರಿಗೆ ಸಲ್ಲಿಸಿದ್ದು, ಸದರಿ ತಾತ್ಕಾಲಿಕ ಪಟ್ಟಿಯಲ್ಲಿ ಫಿರ್ಯಾದಿಯು ತನ್ನ ಹೆಸರು ಇದ್ದ ಬಗ್ಗೆ ತಿಳಿದಿದ್ದರಿಂದ ಫಿರ್ಯಾದಿ ಆರೋಪಿತ ನೌಕರನಿಗೆ ತಮ್ಮ ಶಾಲೆಯ ಮಕ್ಕಳ ದಾಖಲಾತಿಯೊಂದಿಗೆ ಭೇಟಿಯಾಗಲು ತಿಳಿಸಿದ್ದು, ನಿನ್ನ ಹೆಸರು ಹೆಚ್ಚುವರಿ ಶಿಕ್ಷಕರ ಪಟ್ಟಿಯಿಂದ ಡಿ.ಡಿ.ಪಿ.ಐ.ಯವರಿಗೆ ಹೇಳಿ ತೆಗೆಸಿದ್ದೇನೆ. ಆದ್ದರಿಂದ ₹ 5,000/– ಲಂಚ ಕೊಡಬೇಕೆಂದು ಒತ್ತಾಯಿಸಿದ್ದ ಸಂಬಂಧ ಫಿರ್ಯಾದಿಯು ದಿನಾಂಕ: 30–04–2011ರಂದು ಗುಲ್ಬರ್ಗಾ ಲೋಕಾಯುಕ್ತ ಕಛೇರಿಗೆ ಬಂದು ತನಿಖಾಧಿಕಾರಿಯವರಿಗೆ ಮೌಖಿಕವಾಗಿ ತಿಳಿಸಿರುತ್ತಾರೆ. ಹಾಗೂ ದಿನಾಂಕ: 02–05–2011ರಂದು ಸ್ವಲಿಖಿತ ದೂರನ್ನು ಸಲ್ಲಿಸಿರುತ್ತಾರೆ.

9. **ಆಪಾದಿತರ ಸಮಜಾಯಿಸಿ ಹೇಳಿಕೆ ದಿನಾಂಕ: 02–05–2011 :**–ಆಪಾದಿತ ಅಧಿಕಾರಿ ಶ್ರೀ ಅಮೃತರಾವ ರಾಮಚಂದ್ರಪ್ಪ ಬಸಗುಂಡೆ, ಕ್ಷೇತ್ರ ಶಿಕ್ಷಣಾಧಿಕಾರಿ, ಚಿಂಚೋಳಿ ತಾಲ್ಲೂಕು ರವರು ತಮ್ಮ ವಿವರಣೆಯನ್ನು ಬರೆದುಕೊಟ್ಟಿದ್ದು, ಅದರಲ್ಲಿ ವಿಷಯ:–ನಾನು ಶ್ರೀ ಭೀಮಾಶಂಕರ ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಐನೊಳ್ಳಿ, ಇವರು ನನಗೆ ₹ 5,000/– (₹ ಐದು ಸಾವಿರ ಮಾತ್ರ) ನನಗೆ ಸ್ವ ಇಚ್ಛೆಯಿಂದ ಕೊಟ್ಟಿರುತ್ತಾರೆ. ಇದಕ್ಕೆ ಕಾರಣವೇನೆಂದರೆ, ಶ್ರೀ ಭೀಮಾಶಂಕರ ಸಹ ಶಿಕ್ಷಕ ಇವರ ತಮ್ಮ ಹೆಚ್ಚುವರಿ ಪಟ್ಟಿಯಲ್ಲಿ ಹೆಚ್ಚುವರಿಯಾಗಿದ್ದು ಅವರ ಹೆಸರನ್ನು ನಿಯಮಾನುಸಾರವಾಗಿ ತೆಗೆದು ಹಾಕಿದ್ದಕ್ಕೆ, ಸ್ವ ಇಚ್ಛೆಯಾಗಿ ಖುಷಿಯಾಗಿ ನೀಡಲು ಬಯಸಿದ್ದರಿಂದ ಇಂದು ಆ ಹಣವನ್ನು ವಿಶ್ವಾಸ ದ್ರೋಹ (ಲೋಕಾಯುಕ್ತರ ಗಮನಕ್ಕೆ ತಂದು) ಮಾಡಿದ್ದಾರೆ ಎಂದು ನನ್ನ ಅಭಿಪ್ರಾಯ.

ತನಿಖಾಧಿಕಾರಿಗಳಾದ ಶ್ರೀ ಮಹೇಶ್ವರಗೌಡ ಎಸ್.ಯು. ಅರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಗುಲ್ಬರ್ಗಾ ಇವರು ಶ್ರೀ ಅಮೃತರಾವ ರಾಮಚಂದ್ರಪ್ಪ ಬಸಗುಂಡೆ, ಕ್ಷೇತ್ರ ಶಿಕ್ಷಣಾಧಿಕಾರಿ, ಚಿಂಚೋಳಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ಇವರ ವಿರುದ್ಧ ದಂಡಾರ್ಹ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಮೊ. ಸಂಖ್ಯೆ: 07/2011ರಲ್ಲಿ ಲಂಚ ಪ್ರತಿಬಂಧಕ ಕಾಯ್ದೆ 1988ರ ಕಲಂ–7, 13(1)(ಡಿ) ಜೊತೆಯಲ್ಲಿ 13(2)ರ ಅಡಿಯಲ್ಲಿ ದಾಖಲಿಸಿರುತ್ತಾರೆ.

ಆಪಾದಿತರಾದ ಶ್ರೀ ಅಮೃತರಾವ ರಾಮಚಂದ್ರಪ್ಪ ಬಸಗುಂಡೆ, ಕ್ಷೇತ್ರ ಶಿಕ್ಷಣಾಧಿಕಾರಿ, ಚಿಂಚೋಳಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ಇವರು ಫಿರ್ಯಾದಿದಾರ ಶ್ರೀ ಭೀಮಾಶಂಕರ ತಂದೆ ರಾಮಚಂದ್ರಪ್ಪ ತಳವಾರ, 36 ವರ್ಷ, ಸಹ ಶಿಕ್ಷಕ, ಸರ್ಕಾರಿ ಪ್ರೌಢಶಾಲೆ, ಐನೊಳ್ಳಿ, ಚಿಂಚೋಳಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ಇವರ ಹೆಸರನ್ನು ತಾಲ್ಲೂಕಿನ ಹೆಚ್ಚುವರಿ ಶಿಕ್ಷಕರ ತಾತ್ಕಾಲಿಕ ಪಟ್ಟಿಯಲ್ಲಿ ಸೇರಿಸಿ ಉಪ ನಿರ್ದೇಶಕರಿಗೆ ಸಲ್ಲಿಸಿದ್ದು, ಸದರಿ ತಾತ್ಕಾಲಿಕ ಪಟ್ಟಿಯಲ್ಲಿ ಫಿರ್ಯಾದಿಯು ತನ್ನ ಹೆಸರು ಇದ್ದ ಬಗ್ಗೆ ತಿಳಿಸಿದ್ದರಿಂದ ಫಿರ್ಯಾದಿ ಆರೋಪಿತ ಅಧಿಕಾರಿಗೆ ತಮ್ಮ ಶಾಲೆಯ ಮಕ್ಕಳ ದಾಖಲಾತಿಗಳೊಂದಿಗೆ ಭೇಟಿಯಾದಾಗ ಆರೋಪಿತರು ನಿನ್ನ ಹೆಸರನ್ನು ಹೆಚ್ಚುವರಿ ಶಿಕ್ಷಕರ ಪಟ್ಟಿಯಿಂದ ಡಿ.ಡಿ.ಪಿ.ಐ. ಯವರಿಗೆ ಹೇಳಿ ತೆಗೆಸಿದ್ದೇನೆ. ಎಂದು ಹೇಳಿ ₹ 5,000/– ಲಂಚ ಕೊಡಬೇಕೆಂದು ಸುಮಾರು ಒಂದು ವಾರದವರೆಗೆ ಆರೋಪಿತ ನೌಕರ ಫಿರ್ಯಾಧಿಯನ್ನು ಸತಾಯಿಸಿ ಲಂಚದ ಬೇಡಿಕೆಯನ್ನು ಇಟ್ಟಿದ್ದರಿಂದ ಫಿರ್ಯಾದಿದಾರನಿಗೆ ಬೇಜಾರಾಗಿ ದಿನಾಂಕ: 30–04–2011ರಂದು ಗುಲ್ಬರ್ಗಾ ಲೋಕಾಯುಕ್ತ ಕಛೇರಿಗೆ ಬಂದು ತನಿಖಾಧಿಕಾರಿಯವರಿಗೆ ಮೌಖಿಕವಾಗಿ ಹೇಳಿರುತ್ತಾರೆ. ದಿನಾಂಕ: 02–05–2011ರಂದು ಸಾಯಂಕಾಲ 5–45 ಗಂಟೆಗೆ ಆರೋಪಿತ ನೌಕರ ಸುಲೇಪೇಟ್ ಬಸ್ ನಿಲ್ದಾಣದ ಗೇಟ್ ಹತ್ತಿರ ಇರುವ ಕಾಂಪೌಂಡ್ ಗೋಡೆಯ ಪಕ್ಕದಲ್ಲಿರುವ ಡಬ್ಬ ಅಂಗಡಿಯ ಪಕ್ಕದಲ್ಲಿ ಫಿರ್ಯಾಧಿಯಿಂದ ಲಂಚದ ಹಣ ₹ 5,000/–ಗಳನ್ನು ತೆಗೆದುಕೊಂಡು ಬಸ್ ನಿಲ್ದಾಣದ ಎದುರುಗಡೆ ಇರುವ ದೇಸಾಯಿ ಕಾಂಪ್ಲೇಕ್ಸ್‌ನಲ್ಲಿರುವ ಬಸವರಾಜ ಮಳಖೇಡ ಇವರ ವಾಸವಿರುವ ಬಾಡಿಗೆ ಕೋಣೆಯಲ್ಲಿ ಟ್ರ್ಯಾಪ್ ಮಾಡಿದ್ದು, ಸದರಿ ಕೋಣೆಯಲ್ಲಿ ಆರೋಪಿತ ನೌಕರನ ಎರಡು ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳಿಸಿದಾಗ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿ ಸಕಾರಾತ್ಮಕ ಫಲಿತಾಂಶ ನೀಡಿದ್ದರಿಂದ ಮತ್ತು ಲಂಚದ ಹಣವನ್ನು ಆರೋಪಿತ ನೌಕರನು ತನ್ನ ಪ್ಯಾಂಟಿನ ಮುಂಭಾಗದ ವಾಚ್ ಪ್ಯಾಕೆಟ್‌ನಲ್ಲಿಟ್ಟುಕೊಂಡಿದ್ದರಿಂದ ಲಂಚದ ಹಣ ಪಂಚ ಸಾಕ್ಷದಾರರ ಮೂಲಕ ಜಪ್ತಿ ಮಾಡಿಕೊಂಡಿರುತ್ತದೆ.

ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚ ನಿರೋಧಕ ಕಾಯ್ದೆ 1988ರ ಕಲಂ–7, 13(1)(ಡಿ) ಜೊತೆಯಲ್ಲಿ ಓದಲಾದ 13(2) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಮನವರಿಕೆಯಾಗಿದೆ. ಆದ್ದರಿಂದ ಇವರನ್ನು ಲಂಚ ನಿರೋಧಕ ಕಾಯ್ದೆ 1988ರ ಅನ್ವಯ ಕಲಂ–7, 13(1)(ಡಿ) ಜೊತೆಯಲ್ಲಿ ಓದಲಾದ 13(2) ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯ ಎಂದು ಸರ್ಕಾರ ಮನಗಂಡಿದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತರನ್ನು ಕೆಲಸದಿಂದ ವಜಾ ಮಾಡುವ ಅಧಿಕಾರವನ್ನು ಹೊಂದಿದ್ದು, ಲಂಚ ನಿರೋಧಕ ಕಾಯ್ದೆ 1988 ಕಲಂ–19(1)(ಬಿ)ರ ಅಡಿ ಆಪಾದಿತ ನೌಕರರಾದ ಶ್ರೀ ಅಮೃತರಾವ ರಾಮಚಂದ್ರಪ್ಪ ಬಸಗುಂಡೆ, ಕ್ಷೇತ್ರ ಶಿಕ್ಷಣಾಧಿಕಾರಿ, ಚಿಂಚೋಳಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ಇವರನ್ನು ಕಲಂ–7, 13(1)(ಡಿ) ಜೊತೆಯಲ್ಲಿ ಓದಲಾದ 13(2) ಅಡಿಯಲ್ಲಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಸರ್ಕಾರದ ಮಂಜೂರಾತಿ ನೀಡಲು ತೀರ್ಮಾನಿಸಿ ಅದರಂತೆ ಈ ಕೆಳಕಂಡಂತೆ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಇಡಿ 22 ಡಿಜಿಓ 2011, ಬೆಂಗಳೂರು ದಿನಾಂಕ: 18ನೇ ಡಿಸೆಂಬರ್, 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರವು ಆರೋಪಿಯಾದ ಶ್ರೀ ಅಮೃತರಾವ ರಾಮಚಂದ್ರಪ್ಪ ಬಸಗುಂಡೆ, ಕ್ಷೇತ್ರ ಶಿಕ್ಷಣಾಧಿಕಾರಿ, ಚಿಂಚೋಳಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ಇವರನ್ನು ಲಂಚ ನಿರೋಧಕ ಕಾಯ್ದೆ 1988ರ ಕಲಂ–7, 13(1)(ಡಿ) ಜೊತೆಯಲ್ಲಿ ಓದಲಾದ 13(2) ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುವುದು ದೃಢಪಟ್ಟಿರುವುದರಿಂದ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಸರ್ಕಾರ ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

ಮುಂದುವರೆದು, ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ 1977ರ ನಿಯಮ 18ರ ಪ್ರಕಾರ ಸರ್ಕಾರದ ಪರವಾಗಿ ಅಥವಾ ಸರ್ಕಾರದಿಂದ ಹೊರಡಿಸಲಾದ ಎಲ್ಲಾ ಆದೇಶಗಳನ್ನು ಅಥವಾ ಅಧಿಸೂಚನೆಗಳನ್ನು ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಬೇಕಿರುತ್ತದೆ.

ಸದರಿ ನಿಯಮಾವಳಿಯ ನಿಯಮ–19(1)(ಬಿ)ರ ಪ್ರಕಾರ ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಿರುವ ಆದೇಶಗಳು ಮತ್ತು ಅಧಿಸೂಚನೆಗಳು ಒಬ್ಬ ಅಧೀನ ಕಾರ್ಯದರ್ಶಿಯ ಸಹಿಯಿಂದ ಅಧಿಕೃತಗೊಳ್ಳಬೇಕು ಹಾಗೂ ಅಂತಹ ಸಹಿಯು ಅಂತಹ ಆದೇಶ ಅಥವಾ ಲೇಖನವನ್ನು ಸರಿಯಾಗಿ ಅಧಿಕೃತಗೊಳಿಸುತ್ತದೆ.

ಆದ್ದರಿಂದ ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿಗಳು 1977ರ ಈ ಮೇಲ್ಕಂಡ ಆದೇಶವನ್ನು ಸರ್ಕಾರದ ಪರವಾಗಿ ಕಛೇರಿಯ ಮೊಹರು ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿಯ ಸಹಿಯ ಅಡಿಯಲ್ಲಿ ದಿನಾಂಕ: 18–12–2012ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಶ್ರೀಪಾದು ಹೆಚ್.ಎನ್.
ಸರ್ಕಾದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಸಮಿತಿಗಳು)

PR. 14

ಶಿಕ್ಷಣ ಸಚಿವಾಲಯ

ವಿಷಯ : ಶ್ರೀ ವಿಶ್ವಾಸ ಗಣಪತಿ ಪೋಳ, ಕ್ಷೇತ್ರ ಶಿಕ್ಷಣಾಧಿಕಾರಿ, ಕಾಗವಾಡ, ಬೆಳಗಾವಿ ಜಿಲ್ಲೆ, ಹಾಲಿ ಉಪನ್ಯಾಸಕರು, ಸಿ.ಟಿ.ಇ. ಗುಲ್ಬರ್ಗಾ ಇವರ ಮೇಲಿನ ಆರೋಪಗಳಿಗೆ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯವರನ್ನು ನೇಮಿಸುವ ಬಗ್ಗೆ

ಓದಲಾಗಿದೆ :

1. ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಎಲ್–88/ಸಿಆರ್–30/1996/ಬಿಜಿಎಂ, ದಿನಾಂಕ: 30–01–2010
2. ಸರ್ಕಾರದ ಪತ್ರ ಸಂಖ್ಯೆ: ಇಡಿ 51 ಡಿಜಿಎಂ 2010, ದಿನಾಂಕ: 07–04–2012
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರ ಪತ್ರ ಸಂಖ್ಯೆ: ಸಿ5/ವಿಜಿಪಿ/ದೂರು/2012–13, ದಿನಾಂಕ: 03–08–2012
4. ಸರ್ಕಾರದ ಕಾರಣ ಕೇಳುವ ನೋಟಿಸು ಸಂಖ್ಯೆ: ಇಡಿ 51 ಡಿಜಿಎಂ 2010, ದಿನಾಂಕ: 01–10–2012
5. ಶ್ರೀ ವಿಶ್ವಾಸ ಗಣಪತಿ ಪೋಳ, ಉಪನ್ಯಾಸಕರು, ಸಿ.ಟಿ.ಇ. ಗುಲ್ಬರ್ಗಾ ಇವರ ಪ್ರತಿ ರಕ್ಷಣಾ ಹೇಳಿಕೆ ದಿನಾಂಕ: 11–10–2012

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರಲ್ಲಿ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದಲ್ಲಿ ಶ್ರೀ ವಿಶ್ವಾಸ ಗಣಪತಿ ಪೋಳ, ಕ್ಷೇತ್ರ ಶಿಕ್ಷಣಾಧಿಕಾರಿ, ಕಾಗವಾಡ, ಬೆಳಗಾವಿ ಜಿಲ್ಲೆ ಇವರು ಈ ಹಿಂದೆ ವಿಷಯ ಪರಿವೀಕ್ಷಕರು, ಸಹ ನಿರ್ದೇಶಕರವರ ಕಛೇರಿ, ಬೆಳಗಾವಿ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ದಿನಾಂಕ: 09–12–1996ರಂದು ಫಿರ್ಯಾದುದಾರರಾದ ಶ್ರೀ ಗಂಗಾಬಾಯಿ ಕೋಂ ದಶರತ ಜಾಧವ, ತೆಲಸಂಗ ಗ್ರಾಮ, ಅಥಣಿ ತಾಲ್ಲೂಕು ಇವರು ಜಮೀನು ಪ್ರಕರಣಕ್ಕೆ ಸಂಬಂಧಪಟ್ಟಂತೆ ಲೋಕಾಯುಕ್ತರಿಗೆ ದೂರು ನೀಡಿದ ಪ್ರಕರಣದಲ್ಲಿ ಲೋಕಾಯುಕ್ತ ಜಾಲಕ್ಕೆ ಸಿಲುಕಿದ ಆಪಾದಿತರಾದ ಶ್ರೀ ಅಶೋಕ ದುಂಡಪ್ಪ ಕೊಪರ್ಡೆ, ಉಪ ತಹಶೀಲ್ದಾರ್, ತೆಲಸಂಗ ಗ್ರಾಮ ಬೆಳಗಾವಿ ಜಿಲ್ಲೆ ಇವರಿಗೆ ಸಂಬಂಧಿಸಿದಂತೆ ತನಿಖಾಧಿಕಾರಿಗಳ ಸಮಕ್ಷಮದಲ್ಲಿ ಅಭಿಯೋಜನೆ ಪರವಾಗಿ ಸಾಕ್ಷ್ಯವನ್ನು ನೀಡಿರುತ್ತೀರಿ. ಆದರೆ ವಿಚಾರಣೆ ಕಾಲದಲ್ಲಿ ಘನ ನ್ಯಾಯಾಲಯದ ಮುಂದೆ ಪೂರ್ಣವಾಗಿ ಅಭಿಯೋಜನೆಗೆ ವಿರುದ್ಧವಾಗಿ ವ್ಯತಿರಿಕ್ತ ಹೇಳಿಕೆಯನ್ನು ನೀಡಿದ್ದು, ವಿಶೇಷ ಸಾರ್ವಜನಿಕ ಅಭಿಯೋಜಕರು ತಾವು ನೀಡಿರುವ ಹೇಳಿಕೆಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿರುತ್ತಾರೆ. ನೀವು ಒಬ್ಬ ಸರ್ಕಾರಿ ಅಧಿಕಾರಿಯಾಗಿ ಪ್ರತಿಕೂಲ ಸಾಕ್ಷ್ಯ ನೀಡುವ ಮೂಲಕ ಕೆ.ಸಿ.ಎಸ್. (ನಡತೆ) ನಿಯಮ (3) (ದುರ್ನಡತೆ) ಉಲ್ಲಂಘಿಸಿರುವುದರಿಂದ ಕರ್ತವ್ಯಚ್ಯುತಿ ಎಸಗಿದ್ದು ಇವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಜರುಗಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ಶ್ರೀ ವಿಶ್ವಾಸ ಗಣಪತಿ ಪೋಳ, ಕ್ಷೇತ್ರ ಶಿಕ್ಷಣಾಧಿಕಾರಿ, ಕಾಗವಾಡ, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಸಲುವಾಗಿ ದೋಷರೋಪಣಾ ಪಟ್ಟಿಯನ್ನು ಅನುಬಂಧ 1 ರಿಂದ 4 ಅನ್ನು ತಯಾರಿಸಿ ಕಳುಹಿಸುವಂತೆ ಕೋರಲಾಗಿ ಮೇಲೆ ಓದಲಾದ ಕ್ರಮಾಂಕ (3)ರ ಪತ್ರದಲ್ಲಿ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರು ಶ್ರೀ ವಿಶ್ವಾಸ ಗಣಪತಿ ಪೋಳ, ಕ್ಷೇತ್ರ ಶಿಕ್ಷಣಾಧಿಕಾರಿ, ಕಾಗವಾಡ, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರಡು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ ಕ್ರಮಾಂಕ (4)ರಂತೆ ಆಪಾದಿತ ಅಧಿಕಾರಿಯಾದ ಶ್ರೀ ವಿಶ್ವಾಸ ಗಣಪತಿ ಪೋಳ, ಕ್ಷೇತ್ರ ಶಿಕ್ಷಣಾಧಿಕಾರಿ, ಕಾಗವಾಡ, ಬೆಳಗಾವಿ ಜಿಲ್ಲೆ ಇವರಿಗೆ ಅನುಬಂಧಗಳೊಡನೆ ದೋಷರೋಪಣಾ ಪಟ್ಟಿಯನ್ನು ಲಗತ್ತಿಸಿ, ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳ ನಿಯಮ 11 ಮತ್ತು 13ರಡಿ ಕಾರಣ ಕೇಳುವ ನೋಟಿಸ್ ಜಾರಿ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ: (5)ರಲ್ಲಿ ಶ್ರೀ ವಿಶ್ವಾಸ ಗಣಪತಿ ಪೋಳ, ಕ್ಷೇತ್ರ ಶಿಕ್ಷಣಾಧಿಕಾರಿ, ಕಾಗವಾಡ, ಬೆಳಗಾವಿ ಜಿಲ್ಲೆ ಹಾಲಿ ಉಪನ್ಯಾಸಕರು, ಸಿ.ಟಿ.ಇ. ಗುಲ್ಬರ್ಗಾ ಇವರು ರಕ್ಷಣಾ ಹೇಳಿಕೆಯಲ್ಲಿ ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಿರುತ್ತಾರೆ.

ಶ್ರೀ ವಿಶ್ವಾಸ ಗಣಪತಿ ಪೋಳ, ಕ್ಷೇತ್ರ ಶಿಕ್ಷಣಾಧಿಕಾರಿ, ಕಾಗವಾಡ, ಬೆಳಗಾವಿ ಜಿಲ್ಲೆ ಇವರ ಮೇಲಿನ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗುವಂತೆ ಕಂಡು ಬಂದ ಹಿನ್ನೆಲೆಯಲ್ಲಿ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯುವ ಸಲುವಾಗಿ ಕೂಲಂಕುಷವಾಗಿ ವಿಚಾರಣೆ ನಡೆಸುವುದು ಸೂಕ್ತವೆಂದು ತೀರ್ಮಾನಿಸಿ ಸರ್ಕಾರವು ಈ ಸಂಬಂಧ ವಿಚಾರಣೆ ನಡೆಸಲು ವಿಚಾರಣಾಧಿಕಾರಿಗಳನ್ನಾಗಿ ಶ್ರೀ ವಸಂತ್ ಹೆಚ್. ಮುಳಸಾವಗಿ, ನಿವೃತ್ತ ನ್ಯಾಯಾಧೀಶರು, ಬೆಂಗಳೂರು ರವರನ್ನು ಹಾಗೂ ಶಿಕ್ಷಣಾಧಿಕಾರಿ, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾಂ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಇಡಿ 51 ಡಿಜಿಎಂ 2010, ಬೆಂಗಳೂರು, ದಿನಾಂಕ: 17ನೇ ಡಿಸೆಂಬರ್, 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ವಿಶ್ವಾಸ ಗಣಪತಿ ಪೋಳ, ಕ್ಷೇತ್ರ ಶಿಕ್ಷಣಾಧಿಕಾರಿ, ಕಾಗವಾಡ, ಬೆಳಗಾವಿ ಜಿಲ್ಲೆ ಹಾಲಿ ಉಪನ್ಯಾಸಕರು, ಸಿ.ಟಿ.ಇ., ಗುಲ್ಬರ್ಗಾ ಇವರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11 ರಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಶ್ರೀ ವಸಂತ್ ಹೆಚ್. ಮುಳಸಾವಗಿ, ನಿವೃತ್ತ ನ್ಯಾಯಾಧೀಶರು, ಬೆಂಗಳೂರು ಅವರನ್ನು ಈ ಪ್ರಕರಣದ ವಿಚಾರಣಾಧಿಕಾರಿಯಾಗಿಯೂ ಹಾಗೂ ನಿಯಮ 11(5)(ಸಿ) ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶಿಕ್ಷಣಾಧಿಕಾರಿ, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾಂ, ಇವರನ್ನು ಮಂಡನಾಧಿಕಾರಿಯನ್ನಾಗಿಯೂ ನೇಮಿಸಿ ಆದೇಶಿಸಿದೆ.

ವಿಚಾರಣೆ ನಡೆಸಲು ಸ್ಥಳವಕಾಶವನ್ನು ನೀಡಲು ಹಾಗೂ ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಸೇವೆಯನ್ನು ವಿಚಾರಣಾಧಿಕಾರಿಗಳಿಗೆ ಒದಗಿಸಲು ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸೂಚಿಸಿದೆ.

ವಿಚಾರಣೆ ನಂತರ ವಿಚಾರಣಾಧಿಕಾರಿಗಳು ವರದಿ ಸಲ್ಲಿಸಿದ ನಂತರ ಅವರಿಗೆ 15,000/– ಸಂಭಾವನೆ (ವಾಹನ ಭತ್ಯೆಯೂ ಸೇರಿರುತ್ತದೆ.) ಪಾವತಿಸಲು ಸೂಚಿಸಿದೆ.

ವಿಚಾರಣಾಧಿಕಾರಿಗಳು ಪ್ರತಿ ಆರೋಪದ ಬಗ್ಗೆ ನಿಯಮಾನುಸಾರ ವಿಚಾರಣೆ ನಡೆಸಿ, ಸ್ಪಷ್ಟ ನಿರ್ಣಯಗಳನ್ನೊಳಗೊಂಡ ವಿಚಾರಣಾ ವರದಿಯನ್ನು ಈ ಆದೇಶ ತಲುಪಿದ 2 ತಿಂಗಳೊಳಗೆ ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಶ್ರೀಪಾದು ಹೆಚ್.ಎನ್.

ಸರ್ಕಾದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ (ಸಮಿತಿಗಳು)

PR. 15

HOME SECRETARIAT

Sub : Safe Corridor Demonstration Programme, SCDP under WB funding of KSHIP-II - reg.

Read : Safe Corridor Demonstration Programme, SCDP under WB funding of KSHIP-II meeting held on 9.11.2012. .

PREAMBLE:

Road Safety is a responsibility of several agencies, the Police being one among them. It was decided in the meeting on 'Safe Corridor Demonstration Programme' that a Road Safety Cell be established which will have members from the PWD, Transport, Health and other departments, including Police.

It was decided in the meeting to nominate State Level Nodal Officers and District Level Nodal Officers for co-ordination with other departments. Hence the Order.

Government Order No. HD 533 SST 2012, Bangalore, dated: 01-01-2013

Government are pleased to designate the following officers as Nodal Officers for the jurisdiction as shown in the table below. The State Level Nodal Officer shall be in touch with the officers of the Road Safety Cell and officers of the entire State.

An Assistant Commissioner of Police/Deputy Superintendent of Police rank officer-.-of Traffic to be nominated by Commissioner of Police/Superintendent of Police of the Commissioner ate/District shall be co-opted in· the Road Safety. Cell and shall function in coordination with the Road Safety Cell. He shall liaise with officers of the Police and other Departments.

Sl. No.	Officers	Jurisdiction
1.	Additional Director General of Police/Commissioner for Traffic and Road Safety o/o DC & IGP, Kamataka State, Bangalore	State
2.	Superintendent of Police Or Additional Superintendent of Police	Rural areas/District
3.	Deputy Commissioner of Police (Traffic)	Bangalore City
4.	Assistant Commissioner of Police/ Deputy Superintendent of Police, For other City Commissionerates/Districts	Road Safety Cell, Public Works, Ports and Inland Water Transport Department/Police Commissionerates / Districts

By Order and in the name of the Governor of Karnataka,

PRAKASH Y.K.

Under Secretary to Government,

Home Department (Law & Order)

P R 19

ಶಿಕ್ಷಣ ಸಚಿವಾಲಯ

ವಿಷಯ : ಶ್ರೀ ಎಸ್.ವಿ. ಅಲೆಗಾವಿ, ನಿವೃತ್ತ ಉಪ ನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, (ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಗ್ರಾಮೀಣ ವಲಯ, ಬಿಜಾಪುರ) ಇವರು ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆ, ಬಿಜಾಪುರ ಜಿಲ್ಲೆಯಲ್ಲಿ ನಡೆಸಿದ್ದಾರೆ ಎನ್ನಲಾದ ಅವ್ಯವಹಾರ/ಆರೋಪಗಳ ಮೇಲಿನ ಶಿಸ್ತು ಕ್ರಮದಲ್ಲಿನ ಅಂತಿಮ ಆದೇಶ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಇಡಿ 102 ಡಿಜಿಡಿ 1999 (ಭಾಗ–3), ದಿನಾಂಕ : 05–05–2004.
2. ಸರ್ಕಾರದ ಆದೇಶ ಸಂಖ್ಯೆ : ಇಡಿ 102 ಡಿಜಿಡಿ 1999 ದಿನಾಂಕ : 20–01–2005.
3. ಸರ್ಕಾರದ ಆದೇಶ ಸಂಖ್ಯೆ : ಇಡಿ 102 ಡಿಜಿಡಿ 1999 ದಿನಾಂಕ : 01–08–2006.
4. ಶ್ರೀ ಬಿ.ಎಲ್. ಶ್ರೀಕಂಠಯ್ಯ, ನಿವೃತ್ತ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶರು, ಇವರ ವಿಚಾರಣಾ ವರದಿ ದಿನಾಂಕ : 01–10–2007.
5. ಶ್ರೀ ಎಸ್.ವಿ. ಅಲೆಗಾವಿ, ನಿವೃತ್ತ ಉಪ ನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಗ್ರಾಮೀಣ ವಲಯ, ಬಿಜಾಪುರ, ಇವರ ಮನವಿ ಪತ್ರ ದಿನಾಂಕ : 29–09–2011.
6. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಇವರ ಪತ್ರ ಸಂಖ್ಯೆ: ಜಿ12 : ಖಾ.ಶಿ.ಅ. : ಶಿ.ಕ್ರ : 76/2010–11/4603, ದಿನಾಂಕ : 07–03–2012.

ಪ್ರಸ್ತಾವನೆ :

1. ಬಿಜಾಪುರ ಜಿಲ್ಲೆಯ ಖಾಸಗಿ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಣ ಸಂಸ್ಥೆಗಳಲ್ಲಿನ ಶಿಕ್ಷಕರ ನೇಮಕಾತಿಯಲ್ಲಿ ಅವ್ಯವಹಾರ ನಡೆದಿದೆ ಎನ್ನಲಾದ ಆರೋಪಕ್ಕೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆಯ 24 ಅಧಿಕಾರಿಗಳ ವಿರುದ್ಧ ಮೇಲೆ (1) ರಲ್ಲಿ ಓದಲಾದ ದಿನಾಂಕ : 05–05–2004ರ ಆದೇಶದಲ್ಲಿ ಶ್ರೀ ವೈ.ಆರ್. ಸಾಹುಕಾರ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಂಗಳೂರು, ಇವರನ್ನು ವಿಚಾರಣಾಧಿಕಾರಿಯೆಂದು ನೇಮಿಸಲಾಗಿತ್ತು. ನಂತರ ಮೇಲೆ (2)ರಲ್ಲಿ ಓದಲಾದ ದಿನಾಂಕ : 20–01–2005ರ ಆದೇಶದಲ್ಲಿ 24 ಅಧಿಕಾರಿಗಳ ಜಂಟಿ ಇಲಾಖಾ ವಿಚಾರಣೆಯನ್ನು ಮಾರ್ಪಡಿಸಿ, 24 ಪ್ರತ್ಯೇಕ ಪ್ರಕರಣಗಳೆಂದು ಆದೇಶಿಸಿದೆ. ಶ್ರೀ ವೈ.ಆರ್. ಸಾಹುಕಾರ್‌ರವರನ್ನು ಇಲಾಖಾ ವಿಚಾರಣೆ ನಡೆಸುವ ಅಧಿಕಾರಿಗಳ ಪಟ್ಟಿಯಿಂದ ತೆಗೆದುಹಾಕಿದ ಕಾರಣದಿಂದ ಮೇಲೆ (3)ರಲ್ಲಿ ಓದಲಾದ ದಿನಾಂಕ : 01–08–2006ರ ಆದೇಶದಲ್ಲಿ ಶ್ರೀ ಬಿ.ಎಲ್. ಶ್ರೀಕಂಠಯ್ಯ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಬೆಂಗಳೂರು, ಇವರನ್ನು ವಿಚಾರಣಾಧಿಕಾರಿ ಎಂದು ನೇಮಿಸಲಾಗಿತ್ತು. ಸದರಿ ಆದೇಶದಲ್ಲಿ ಶ್ರೀ ಎಸ್.ವಿ. ಅಲೆಗಾವಿ, ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ನಿವೃತ್ತ ಉಪ ನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಗ್ರಾಮೀಣ ವಲಯ, ಬಿಜಾಪುರ, ಇವರು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಸ್ವಾಭಾವಿಕ ಬೆಳವಣಿಗೆ ಮೇರೆಗೆ ವಾಸ್ತವಿಕವಾಗಿ ನಡೆಯದೇ ಇರುವ ತರಗತಿಗಳಿಗೆ ಅಂದರೆ 5, 6, ಮತ್ತು 7ನೇ ತರಗತಿಗಳಿಗೆ ನೇಮಕವಾದ 8 ಶಾಲೆಗಳಲ್ಲಿ ಪ್ರತಿ ಶಾಲೆಗೆ 3 ಶಿಕ್ಷಕರನ್ನು ಆಡಳಿತ ಮಂಡಳಿಯಿಂದ ನೇಮಕವಾದ 24 ಜನ ಶಿಕ್ಷಕರಿಗೆ ದಿನಾಂಕ : 01–06–1995 ರಿಂದ 31–05–1997ರ ವರೆಗೆ ವೇತನ ನೀಡಿ ಸರ್ಕಾರದ ಬೊಕ್ಕಸಕ್ಕೆ ರೂ. 13,43,408/– (ಹದಿಮೂರು ಲಕ್ಷದ ನಲವತ್ತಮೂರು ಸಾವಿರದ ನಾಲ್ಕುನೂರ ಎಂಟು ರೂಪಾಯಿ)ಗಳ ಆರ್ಥಿಕ ಹಾನಿ ಉಂಟು ಮಾಡಿರುವ ಆರೋಪವು ಸದರಿ ಅಧಿಕಾರಿಯ ಮೇಲೆ ಇರುತ್ತದೆ. ಮೇಲೆ (4) ರಲ್ಲಿ ಓದಲಾದ ದಿನಾಂಕ : 01–10–2007ರ ವಿಚಾರಣಾ ವರದಿಯಲ್ಲಿ ವಿಚಾರಣಾಧಿಕಾರಿಗಳು ತಮ್ಮ ತೀರ್ಪಿನಲ್ಲಿ ಆರೋಪಿತ ಅಧಿಕಾರಿಯ ಮೇಲೆ ಹೂಡಿರುವ ಇಲಾಖಾ ವಿಚಾರಣೆಯು ಲಿಮಿಟೇಷನ್ ಪ್ರಕಾರ ನಿಲ್ಲತಕ್ಕದಲ್ಲ ಮತ್ತು ಈ ಕಾರಣದಿಂದ ದೋಷಾರೋಪಣಾ ಪಟ್ಟಿಯು ಬಾರ್ಡ್ ಬೈ ಲಿಮಿಟೇಷನ್ ಎಂದು ನಿರ್ಧರಿಸಿದ್ದೇನೆ ಎಂದು ತಿಳಿಸಿರುತ್ತಾರೆ.

2. ಮೇಲೆ (5)ರಲ್ಲಿ ಓದಲಾದ ದಿನಾಂಕ : 29–09–2011ರ ಸರ್ಕಾರಕ್ಕೆ ಸಲ್ಲಿಸಿರುವ ಮನವಿಯಲ್ಲಿ ಇಲಾಖೆಯ ವಿಚಾರಣಾಧಿಕಾರಿಗಳ ವರದಿಯಲ್ಲಿ ದೋಷ ಮುಕ್ತನಾಗಿದ್ದು ಹಾಗೂ ಈ ಕುರಿತು ಬಿಜಾಪುರದಲ್ಲಿ ಗೋಲ್‌ಗುಂಬಸ್ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 104/2004, ದಿನಾಂಕ : 05–09–2011 ರಂದು 14 ಅಧಿಕಾರಿಗಳ ಮೇಲೆ ಮೊಕದ್ದಮೆ ದಾಖಲಾಗಿದ್ದು, ಅದರಲ್ಲಿ ತಾನು ಇರುವುದಿಲ್ಲ ಹಾಗೂ ಸಾಕ್ಷಿ ಪುರಾವೆಗಳು ಆಗದೇ ಇರುವುದರಿಂದ ದೋಷಾರೋಪಣೆ ಪತ್ರದಿಂದ ಕೈಬಿಡಲಾಗಿದೆ ಎಂಬ ಪ್ರತ್ಯೇಕ ಪುರವಣೆಯಲ್ಲಿ 18 ಜನರ ಹೆಸರಿನಲ್ಲಿ ಕ್ರಮ ಸಂಖ್ಯೆ : 3 ರಲ್ಲಿ ತನ್ನ ಹೆಸರು ಇರುತ್ತದೆ ಎಂದು, ಈ ಕಾರಣದಿಂದ ತಾನು ಎಲ್ಲಾ ಇಲಾಖಾ ವಿಚಾರಣೆ, ದೋಷಾರೋಪಣಾ ಪತ್ರದಿಂದ ಕೈಬಿಟ್ಟಿರುವುದರಿಂದ, ಆರೋಪ ಮುಕ್ತನಾಗಿರುವುದರಿಂದ ನಿವೃತ್ತಿ ಸಮಯದಲ್ಲಿ ತಡೆಹಿಡಿಯಲಾದ ಎಲ್ಲಾ ಹಣಕಾಸು ಸೌಲಭ್ಯಗಳನ್ನು ಬಿಡುಗಡೆ ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

3. ಮೇಲೆ (6)ರಲ್ಲಿ ಓದಲಾದ ದಿನಾಂಕ : 07–03–2012ರ ಪತ್ರದಲ್ಲಿ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ , ಇವರು ಪೊಲೀಸ್ ಠಾಣೆಯ ಮುಖಾಂತರ ದೋಷಾರೋಪಣಾ ಪಟ್ಟಿಯನ್ನು ದಾಖಲಿಸಿರುವ ಪ್ರತಿಯನ್ನು ಒದಗಿಸಿ, ಬಿಜಾಪುರದ 3ನೇ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ದಾಖಲಾಗಿರುವ ಸಿಸಿ ಸಂಖ್ಯೆ : 1907/2011ರ ದಿನಾಂಕ : 15–09–2011ರ ಆದೇಶದಂತೆ ಶ್ರೀ ಎಸ್.ವಿ. ಅಲೆಗಾವಿಯವರಿಗೆ ಲಭ್ಯವಾಗಬೇಕಾದ ಹಣಕಾಸಿನ ಸೌಲಭ್ಯವನ್ನು ಬಿಡುಗಡೆ ಮಾಡಲು ಯಾವುದೇ ಅಭ್ಯಂತರವಿರುವುದಿಲ್ಲವೆಂದು ಈ ಬಗ್ಗೆ ಸರ್ಕಾರವು ಸೂಕ್ತ ಕ್ರಮ ಜರುಗಿಸಿ ಸದರಿಯವರಿಗೆ ನೀಡಬೇಕಾದ ಹಣಕಾಸಿನ ಸೌಲಭ್ಯವನ್ನು ಬಿಡುಗಡೆ ಮಾಡಲು ವಿನಂತಿಸಿದ್ದಾರೆ. ಈ ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 12 ಡಿಜಿಪಿ 2011, ಬೆಂಗಳೂರು, ದಿನಾಂಕ: 17ನೇ ಆಗಸ್ಟ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ವಿಚಾರಣಾಧಿಕಾರಿಗಳ ವರದಿಯಲ್ಲಿ ವಿಚಾರಣಾಧಿಕಾರಿಗಳು "ಆರೋಪಿತ ಅಧಿಕಾರಿಯ ಮೇಲೆ ಹೂಡಿರುವ ಇಲಾಖಾ ವಿಚಾರಣೆಯು ಲಿಮಿಟೇಷನ್ ಪ್ರಕಾರ ನಿಲ್ಲತಕ್ಕದ್ದಲ್ಲ ಮತ್ತು ಈ ಕಾರಣದಿಂದ ದೋಷಾರೋಪಣಾ ಪಟ್ಟಿಯು ಬಾರ್ಡ್ ಬೈ

ಲಿಮಿಟೇಷನ್ " ಎಂದು ತೀರ್ಪಿತ್ತಿರುವ ಹಿನ್ನೆಲೆಯಲ್ಲಿ ಮತ್ತು ಬಿಜಾಪುರದ 3ನೇ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ದಾಖಲಾಗಿರುವ ಸಿಸಿ ಸಂಖ್ಯೆ : 1907/2011ರ ಪ್ರಕರಣದಲ್ಲಿ ಬರಬಹುದಾದ ಅಂತಿಮ ತೀರ್ಪಿನ ಷರತ್ತಿಗೆ ಒಳಪಟ್ಟು, ಶ್ರೀ ಎಸ್.ವಿ. ಅಲೆಗಾವಿ, ನಿವೃತ್ತ ಉಪ ನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಗ್ರಾಮೀಣ ವಲಯ, ಬಿಜಾಪುರ, ಇವರನ್ನು ದಿನಾಂಕ : 20–01–2005, ಸಂಖ್ಯೆ : ಇಡಿ 102 ಡಿಜಿಡಿ 99ರ ಸರ್ಕಾರಿ ಆದೇಶದಲ್ಲಿ ನಮೂದಿಸಿರುವ ಆಪಾದನೆಗಳಿಂದ ದೋಷಮುಕ್ತರನ್ನಾಗಿಸಿ ಆದೇಶಿಸಲಾಗಿದೆ ಮತ್ತು ಈ ವಿಚಾರಣೆ ನಡೆಯದಿದ್ದಲ್ಲಿ, ಆರೋಪಿತ ಅಧಿಕಾರಿಯಾದ ಶ್ರೀ ಎಸ್.ವಿ. ಅಲೆಗಾವಿ, ನಿವೃತ್ತ ಉಪ ನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಗ್ರಾಮೀಣ ವಲಯ, ಬಿಜಾಪುರ, ಇವರು ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿದ್ದರೋ, ಅಂತಹ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ ಎಂದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಶ್ರೀಪಾದು ಹೆಚ್. ಎನ್.

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ಆಡಳಿತ)

P.R - 2209

ಶಿಕ್ಷಣ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ :ಇಡಿ 58 ಡಿಜಿಪಿ 2010 ಬೆಂಗಳೂರು, ದಿನಾಂಕ : 04–09–2012

ಸರ್ಕಾರದ ಆದೇಶ ಸಂಖ್ಯೆ : ಇಡಿ 58 ಡಿಜಿಪಿ 2010, ದಿನಾಂಕ : 17–04–2012ರ ಆದೇಶದ ಭಾಗದ ಕಂಡಿಕೆ–2ರ 2 ಮತ್ತು 3ನೇ ಸಾಲಿನಲ್ಲಿ "ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ" ಎಂದಿರುವುದನ್ನು "ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು" ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಶ್ರೀಪಾದು ಹೆಚ್. ಎನ್.

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ಆಡಳಿತ)

PR - 2165

ಒಳಾಡಳಿತ ಸಚಿವಾಲಯ

ತಿದ್ದುಪಡಿ

ಸಂಖ್ಯೆ :ಹೆಚ್‌ಡಿ 75 ಪಿಓಪಿ 2012 ಬೆಂಗಳೂರು, ದಿನಾಂಕ : 04–08–2012

ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 122 ಪಿಓಪಿ 2011, ದಿನಾಂಕ : 04–07–2011ರಲ್ಲಿ 1ನೇ ಸಾಲಿನ "ಕೇಂದ್ರಿಯ ಗುಪ್ತಚಾರ ವಿಭಾಗ, ಗೃಹ ಕಛೇರಿ, ನಂ. 25 ಇನ್‌ಫೆಂಟ್ರಿ ರಸ್ತೆ ಮತ್ತು ಕಾವೇರಿ ಭವನ, ಬೆಂಗಳೂರು ಇಲ್ಲಿಗೆ ಒದಗಿಸಿರುವ ಸಶಸ್ತ್ರ ರಕ್ಷಣಾ ಪಡೆಯ ಎಹೆಚ್‌ಸಿ–1 ಮತ್ತು ಎಪಿಸಿ–4 ಹುದ್ದೆಗಳನ್ನು" ಎಂಬುದರ ಬದಲಾಗಿ ಕೇಂದ್ರಿಯ ಗುಪ್ತಚಾರ ವಿಭಾಗ, ಗೃಹ ಕಛೇರಿ, ನಂ. 25, ಇನ್‌ಫೆಂಟ್ರಿ ರಸ್ತೆ ಮತ್ತು ಕಾವೇರಿ ಭವನ, ಬೆಂಗಳೂರು ಇಲ್ಲಿಗೆ ಒದಗಿಸಿರುವ ಸಶಸ್ತ್ರ ರಕ್ಷಣಾ ಪಡೆಯ "ಎಹೆಚ್‌ಸಿ–2 ಮತ್ತು ಎಪಿಸಿ–8 ಹುದ್ದೆಗಳನ್ನು" ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್. ಆರ್. ಪುಟ್ಟೇಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ

(ಪೊಲೀಸ್ ವೆಚ್ಚಗಳು)

P.R - 2154

ಒಳಾಡಳಿತ ಸಚಿವಾಲಯ

ವಿಷಯ : ದಿನಾಂಕ 15–08–1994 ರಂದು ಹುಬ್ಬಳ್ಳಿಯಲ್ಲಿ ನಡೆದ ಪೊಲೀಸ್ ಗೋಲಿಬಾರ್‌ನಲ್ಲಿ ಗಾಯಗೊಂಡ ಹಾಗೂ ಮೃತರಾದವರಿಗೆ ಪರಿಹಾರ ಮಂಜೂರಾತಿ ಕೋರಿರುವ ಬಗ್ಗೆ.

ಓದಲಾಗಿದೆ :

1. ಅಧಿಸೂಚನೆ ಸಂಖ್ಯೆ ಒಇ 57 ಪಿಸಿಇ 1994 ದಿನಾಂಕ 21–10–1994.
2. ಜಿಲ್ಲಾಧಿಕಾರಿ ಧಾರವಾಡ ಜಿಲ್ಲೆ ಧಾರವಾಡ ಇವರ ಪತ್ರ ಸಂಖ್ಯೆ ಎಂಎಜಿ/ಶಾಸು/ವಹಿ–264/2007–08, ದಿನಾಂಕ 06–08–2011.
3. ಸರ್ಕಾರದ ಆದೇಶ ಸಂಖ್ಯೆ ಒಇ 75 ಎಸ್‌ಎಸ್‌ಟಿ 1993 ದಿನಾಂಕ 21–10–2008.
4. ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿರವರ ಪತ್ರ ಸಂಖ್ಯೆ ಪಿಎಸ್‌ಸಿಎಂ/ಎಫ್ 5137/2012 ದಿನಾಂಕ 16–07–2012.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಅಧಿಸೂಚನೆಯಲ್ಲಿ ದಿನಾಂಕ 15–08–1994ರಂದು ಹುಬ್ಬಳ್ಳಿಯಲ್ಲಿ ನಡೆದ ಪೋಲೀಸ್ ಗೋಲಿಬಾರ್‌ನಲ್ಲಿ ಗಾಯಗೊಂಡ ಹಾಗೂ ಮೃತಪಟ್ಟಿರುವ ಬಗ್ಗೆ ತನಿಖೆ ನಡೆಸಲು ನ್ಯಾಯಮೂರ್ತಿ ಶ್ರೀ ಎಸ್.ಪಿ. ರಾಜಶೇಖರಮೂರ್ತಿ ರವರನ್ನು ವಿಚಾರಣೆ ನಡೆಸಲು ಏಕ ಸದಸ್ಯ ವಿಚಾರಣಾ ಆಯೋಗರನ್ನಾಗಿ ನೇಮಿಸಲಾಗಿತ್ತು. ಸದರಿ ಪ್ರಕರಣದಲ್ಲಿ ವಿಚಾರಣೆಯನ್ನು ನಡೆಸಿ ಆಯೋಗವು ಹುಬ್ಬಳ್ಳಿಯಲ್ಲಿ ನಡೆದ ಗೋಲಿಬಾರ್‌ನಲ್ಲಿ ಗಾಯಗೊಂಡ ಮತ್ತು ಮೃತಪಟ್ಟವರಿಗೆ ಪರಿಹಾರ ನೀಡಲು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2)ರ ಜಿಲ್ಲಾಧಿಕಾರಿಯವರ ಪತ್ರದಲ್ಲಿ ಸದರಿ ಘಟನೆಯಲ್ಲಿ ಗುಂಡೇಟಿನಿಂದ ಗಾಯಗೊಂಡವರಿಗೆ/ಮೃತಪಟ್ಟ ಕುಟುಂಬದವರಿಗೆ/ಅಂಗವಿಕಲತೆ ಹೊಂದಿದವರಿಗೆ ಸರ್ಕಾರದ ಆದೇಶ ಸಂಖ್ಯೆ ಒಇ 75 ಎಸ್‌ಎಸ್‌ಟಿ 1993ರಲ್ಲಿ ನಿಗದಿಗೊಳಿಸಿದಂತೆ ಪರಿಹಾರ ಹಣವನ್ನು ವಿತರಿಸಲಾಗಿದೆ. (1) ಶ್ರೀ ಫಕೀರಪ್ಪ ಯಲ್ಲಪ್ಪ ಶಿರಗುಪ್ಪ (ಮೃತಳ ಕುಟುಂಬ), (2) ಶ್ರೀ ಉಮೇಶ ತಂದೆ ಸಂಜೀವ ಶೆಟ್ಟಿ ಸಾ॥ ಪ್ರಸಾದ ಕಾಲನಿ, ಸಾ: ರಾಜೇಂದ್ರ ಗಾಯಾಳು ಮತ್ತು (3) ಶ್ರೀ ಮೇಘರಾಜ ತಂದೆ ಅರ್ಜುನ ಸಾ: ಶಿದ್ಲಿಂಗ್ ಗಾಯಾಳು ಸಾ: ಹುಬ್ಬಳ್ಳಿ ಈ ಮೂರು ಜನರೂ ಸಹ ಹೆಚ್ಚಿನ ಪರಿಹಾರಕ್ಕೆ ಅರ್ಹರಿರುವುದರಿಂದ, ಮಾನ್ಯ ನ್ಯಾಯಮೂರ್ತಿಗಳು ಶ್ರೀ ಎಸ್.ಆರ್. ರಾಜಶೇಖರಮೂರ್ತಿ **ವಿಚಾರಣಾ ಆಯೋಗದ ಮುಂದೆ ಹಾಜರಾದವರಿಗೆ ಶಿಫಾರಸ್ಸು ಮಾಡಿದಂತೆ ಇವರುಗಳಿಗೂ ಸಹ ಹೆಚ್ಚಿನ ಪರಿಹಾರ ಧನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.**

ಮೇಲೆ ಓದಲಾದ (3)ರ ಆದೇಶದನ್ವಯ ಈಗಾಗಲೇ ಸಂತ್ರಸ್ಥರಿಗೆ ಪರಿಹಾರ ಧನವನ್ನು ಈ ಕೆಳಕಂಡಂತೆ ವಿತರಿಸಲಾಗಿದೆ.

1)	ಶ್ರೀ ಫಕೀರಪ್ಪ ಯಲ್ಲಪ್ಪ ಶಿರಗುಪ್ಪಿ (ಮೃತಳ ಕುಟುಂಬ)	–ರೂ. 1 ಲಕ್ಷ
2)	ಶ್ರೀ ಉಮೇಶ ತಂದೆ ಸಂಜೀವ ಶೆಟ್ಟಿ ಸಾ: ರಾಜೇಂದ್ರ ಗಾಯಾಳು	– ರೂ. 1,500/–
3)	ಶ್ರೀ ಮೇಘರಾಜ ತಂದೆ ಅರ್ಜುನ ಸಾ: ಶಿದ್ಲಿಂಗ್ ಗಾಯಾಳು ಸಾ: ಹುಬ್ಬಳ್ಳಿ	– ರೂ. 1,500/–

ಮೇಲೆ ಓದಲಾದ (4)ರ ಆದೇಶದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸದರಿ ಸಂತ್ರಸ್ತರಿಗೆ ಹೆಚ್ಚಿನ ಪರಿಹಾರ ನೀಡಲು ಸೂಚಿಸಿದ್ದಾರೆ.

ಸರ್ಕಾರವು ಮೇಲ್ಕಂಡ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 27 ಪಿಸಿಇ 2011, ಬೆಂಗಳೂರು, ದಿನಾಂಕ: 21ನೇ ಸೆಪ್ಟೆಂಬರ್ 2012

ಸರ್ಕಾರವು ಈ ಕೆಳಕಂಡ ಸಂತ್ರಸ್ಥರಿಗೆ ದಿನಾಂಕ 15–08–1994ರ ಈದ್ಗಾ ಪ್ರಕರಣದಲ್ಲಿ ನಡೆದ ಪೋಲೀಸ್ ಗೋಲಿಬಾರ್ ಗಲಭೆಯಲ್ಲಿ ಗಾಯಾಳು/ಮೃತಪಟ್ಟಿರುವ ಇವರಿಗೆ ಹೆಚ್ಚಿನ ಪರಿಹಾರವನ್ನು ಈ ಕೆಳಗೆ ನಮೂದಿಸಿದಂತೆ ನೀಡಲಾಗಿದೆ.

1)	ಶ್ರೀ ಫಕೀರಪ್ಪ ಯಲ್ಲಪ್ಪ ಶಿರಗುಪ್ಪಿ (ಮೃತಳ ಕುಟುಂಬ)	– ರೂ. 50,000/–
2)	ಶ್ರೀ ಉಮೇಶ ತಂದೆ ಸಂಜೀವ ಶೆಟ್ಟಿ ಸಾ: ರಾಜೇಂದ್ರ ಗಾಯಾಳು	– ರೂ. 15,000/–
3)	ಶ್ರೀ ಮೇಘರಾಜ ತಂದೆ ಅರ್ಜುನ ಸಾ: ಶಿದ್ಲಿಂಗ್ ಗಾಯಾಳು ಸಾ: ಹುಬ್ಬಳ್ಳಿ	– ರೂ. 10,000/–

ಪ್ರಸ್ತಾಪಿತ ಪರಿಹಾರವನ್ನು ಲೆಕ್ಕ ಶೀರ್ಷಿಕೆ 2235–60–200–3–01–100ರ ಯೋಜನೇತರ ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಮಾನ್ಯ ಮುಖ್ಯಮಂತ್ರಿಯವರ ಅದೇಶ ಸಂಖ್ಯೆ PSCM/F 5137/2012, ದಿನಾಂಕ : 16–07–2012ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪ್ರಕಾಶ್ ವೈ.ಕೆ.
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಕಾನೂನು ಮತ್ತು ಸುವ್ಯವಸ್ಥೆ)

P.R - 2155

ಒಳಾಡಳಿತ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಹೆಚ್‌ಡಿ 11838 : ಹೆಚ್‌ಸಿಪಿ–1 : 2012 ಬೆಂಗಳೂರು, ದಿನಾಂಕ : 03–10–2012

ಸರ್ಕಾರದ ಆದೇಶ ಸಂಖ್ಯೆ : ಒಇ 381 ಪಿಪಿಇ 2007, ದಿನಾಂಕ : 25–09–2007ರ ಆದೇಶದಲ್ಲಿ ಈ ಮುಂದಿನಂತೆ ತಿದ್ದುಪಡಿ ಹಾಗೂ ಸೇರ್ಪಡೆಯನ್ನು ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಆದೇಶ ಭಾಗದ ಉಪಕಂಡಿಕೆ (1)ರ ಎರಡು ಮತ್ತು ಮೂರನೇ ಸಾಲಿನಲ್ಲಿ "ಅಭಿಯೋಗ ಉಪನಿರ್ದೇಶಕರು" ಎಂದಿರುವುದರ ಬದಲಾಗಿ "ಕಾನೂನು ಅಧಿಕಾರಿ (ಹಿರಿಯ) ಇವರು ವಲಯ ಮಟ್ಟದ ಆರಕ್ಷಕ ಮಹಾನಿರೀಕ್ಷಕರ ಅಭಿಪ್ರಾಯ ಪಡೆದು" ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಆದೇಶ ಭಾಗದ ಉಪಕಂಡಿಕೆ (2)ರ ಎರಡನೇ ಸಾಲಿನಲ್ಲಿ "ಅಭಿಯೋಗ ಉಪನಿರ್ದೇಶಕರು ನಿರ್ಣಯ ತೆಗೆದುಕೊಳ್ಳುವುದು" ಎಂದಿರುವುದರ ಬದಲಾಗಿ "ವಲಯ ಮಟ್ಟದ ಕಾನೂನು ಅಧಿಕಾರಿ (ಹಿರಿಯ) ಇವರು ವಲಯ ಮಟ್ಟದ ಆರಕ್ಷಕ ಮಹಾನಿರೀಕ್ಷಕರ ಅಭಿಪ್ರಾಯ ಪಡೆದು ಕಡತಗಳನ್ನು ಅಭಿಯೋಗ ನಿರ್ದೇಶಕರಿಗೆ ಕಳುಹಿಸುವುದು" ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಆದೇಶ ಭಾಗದ ಉಪಕಂಡಿಕೆ (2)ರ ನಂತರದಲ್ಲಿ (3) ವಲಯ ಮಟ್ಟದಲ್ಲಿ, ಆರಕ್ಷಕ ಮಹಾನಿರೀಕ್ಷಕರು ಕಾನೂನು ಅಧಿಕಾರಿ (ಹಿರಿಯ) ಇವರಿಂದ ಸ್ವೀಕರಿಸಿದ ಪ್ರಕರಣಗಳ ಕಡತಗಳನ್ನು ಪರಿಶೀಲಿಸಿ ತಮ್ಮ ಅಭಿಪ್ರಾಯದೊಂದಿಗೆ ಮೂರು ದಿನಗಳ ಒಳಗಾಗಿ ಅವರಿಗೆ ಹಿಂದಿರುಗಿಸತಕ್ಕದ್ದು" ಎಂದು ಹೊಸ (3)ಸಿ ಉಪಕಂಡಿಕೆಯನ್ನು ಸೇರ್ಪಡೆ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಆದೇಶ ಭಾಗದ ಉಪಕಂಡಿಕೆ (3)ರ ಒಂದನೇ ಸಾಲಿನ ಪ್ರಾರಂಭದಲ್ಲಿ "(3)" ಎಂದಿರುವುದನ್ನು "(4)" ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಉಳಿದಂತೆ ಸರ್ಕಾರದ ಸದರಿ ಆದೇಶ ಸಂಖ್ಯೆ : ಒಇ 381 ಪಿಪಿಇ 2007, ದಿನಾಂಕ : 25–09–2007ರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಜಿ.ಎಸ್.ಪ್ರಶೀಲ ಕುಮಾರಿ
1ನೇ ಅಪರ ವಾದೇಕ್ಷಕರು ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ (ಪ್ರ)
ಒಳಾಡಳಿತ ಇಲಾಖೆ

P.R - 2157

ಒಳಾಡಳಿತ ಸಚಿವಾಲಯ

ತಿದ್ದುಪಡಿ

ಸಂಖ್ಯೆ :ಹೆಚ್‌ಡಿ 90 ಪಿಓಪಿ 2011 ಬೆಂಗಳೂರು, ದಿನಾಂಕ : 26–07–2012

ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 192 ಪಿಓಪಿ 2009, ದಿನಾಂಕ : 17–07–2009ರ ಅನುಬಂಧ–II ರಲ್ಲಿನ ಕ್ರಮ ಸಂಖ್ಯೆ–IIರ ಕಲಂ–3ರಲ್ಲಿ ಕೋಲಾರ ಜಿಲ್ಲೆಗೆ ಮಂಜೂರಾದ ಶ್ವಾನ ದಳದ ಎಪಿಸಿ–ಹ್ಯಾಂಡ್ಲರ್–06, ಅಡಿಗೆಯವರು–01 ಮತ್ತು ಸ್ವೀಪರ್–01 ಹುದ್ದೆಗಳ ವಿವರಗಳನ್ನು ಕಲಂ–7 ರಲ್ಲಿಯು ಸಹ ನಮೂದಿಸಿದಂತೆ ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್. ಆರ್. ಪುಟ್ಟೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚಗಳು)

P.R - 2163

ಒಳಾಡಳಿತ ಸಚಿವಾಲಯ

ವಿಷಯ : SIMI ವಿರುದ್ಧ ಕಾನೂನು ಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ನ್ಯಾಯಮಂಡಳಿಯಲ್ಲಿ ಸರ್ಕಾರದ ಪರವಾಗಿ ವಾದ ಮಂಡಿಸಿದ ಶ್ರೀ ಹೆಚ್.ಎನ್. ನಿಲೋಗಲ್, ವಕೀಲರು, ವಿಶೇಷ ಅಭಿಯೋಜಕರು ಇವರಿಗೆ ಸಂಭಾವನೆ ಮಂಜೂರು ಮಾಡುವ ಕುರಿತು.

ಓದಲಾಗಿದೆ :
1. ದಿನಾಂಕ : 13–04–2012ರ ಸರ್ಕಾರದ ಅಧಿಸೂಚನೆ ಸಂಖ್ಯೆ : ಹೆಚ್‌ಡಿ 302 ಎಸ್‌ಎಸ್‌ಟಿ 2011.
2. ಶ್ರೀ ಹೆಚ್.ಎನ್.ನಿಲೋಗಲ್, ವಕೀಲರು ವಿಶೇಷ ಸರ್ಕಾರಿ ಅಭಿಯೋಜಕರು ಅವರ ದಿನಾಂಕ : 16–08–2012ರ ಮನವಿ.
3. ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 302 ಎಸ್‌ಎಸ್‌ಟಿ 2011, ಬೆಂಗಳೂರು ದಿನಾಂಕ : 18–08–2012.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ : 13–04–2012ರ ಸರ್ಕಾರದ ಅಧಿಸೂಚನೆಯಲ್ಲಿ ಸಿಮಿ ಪ್ರಕರಣಗಳನ್ನು ನಡೆಸಲು ಶ್ರೀ ಹೆಚ್. ಎನ್. ನಿಲೋಗಲ್, ವಕೀಲರು, ಬೆಂಗಳೂರು ಇವರನ್ನು ವಿಶೇಷ ಅಭಿಯೋಜಕರಾಗಿ ನೇಮಿಸಲಾಗಿದೆ. ಮೇಲೆ (2)ರಲ್ಲಿ ಓದಲಾದ ದಿನಾಂಕ : 16–08–2012ರಲ್ಲಿ ಶ್ರೀ ಹೆಚ್. ಎನ್. ನಿಲೋಗಲ್, ವಕೀಲರು, ಬೆಂಗಳೂರು ಇವರು SIMI ಸಂಸ್ಥೆಗಳ ವಿರುದ್ಧ ರಾಜ್ಯ ಸರ್ಕಾರದ ಪರವಾಗಿ ದಿನಾಂಕ: 02–06–2012 ರಂದು ನ್ಯಾಯಾಲಯಕ್ಕೆ ಹಾಜರಾದ ಸಂಭಾವನೆಯ ವೆಚ್ಚ ಒಟ್ಟು ರೂ. 37,000/– ಗಳನ್ನು ಮಂಜೂರು ಮಾಡುವಂತೆ ಬಿಲ್ಲನ್ನು ಕಳುಹಿಸಿರುತ್ತಾರೆ. ಮೇಲೆ (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಶ್ರೀ ಹೆಚ್.ಎನ್. ನಿಲೋಗಲ್, ವಕೀಲರು, ಬೆಂಗಳೂರು ಇವರಿಗೆ ಸಂಭಾವನೆಯನ್ನು ನಿಗದಿಗೊಳಿಸಲಾಗಿದೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 302 ಎಸ್‌ಎಸ್‌ಟಿ 2011 ಬೆಂಗಳೂರು, ದಿನಾಂಕ: 16ನೇ ಅಕ್ಟೋಬರ್ 2012

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಹೆಚ್.ಎನ್. ನಿಲೋಗಲ್, ವಕೀಲರು, ಬೆಂಗಳೂರು ಇವರು SIMI ವಿರುದ್ಧದ ಪ್ರಕರಣದಲ್ಲಿ ಕಾನೂನು ಬಾಹಿರ ಚಟುವಟಿಕೆಗಳು (ತಡೆಗಟ್ಟುವಿಕೆ) ನ್ಯಾಯಮಂಡಳಿಯ ಮುಂದೆ ರಾಜ್ಯ ಸರ್ಕಾರದ ಪರವಾಗಿ ವಿಶೇಷ ಅಭಿಯೋಜಕರಾಗಿ ಕರ್ತವ್ಯ ನಿರ್ವಹಿಸಿದ್ದಕ್ಕಾಗಿ ಈ ಕೆಳಕಂಡಂತೆ ಸಂಭಾವನೆಯನ್ನು ಮಂಜೂರು ಮಾಡಿದೆ.

ಕ್ರ.ಸಂ.	ಸಂಭಾವನೆಯ ವಿವರ	ಮೊತ್ತ
1	Reading Fee	20000–00
2	Effective hearing on 02-06-2012 in Bangalore	2000–00
3	Miscellaneous expenses	5000–00
	ಒಟ್ಟು ಮೊತ್ತ (ರೂಪಾಯಿ ಇಪ್ಪತ್ತೇಳು ಸಾವಿರ ಮಾತ್ರ)	27000–00

ಸದರಿ ವೆಚ್ಚವನ್ನು "ಲೆಕ್ಕ ಶೀರ್ಷಿಕೆ 2014, Administration of Justice-114, Legal Advisors and Counsels-01, Advocate General, Payment for Professional and Special Services in the Budget" ರಡಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಆಇ 3 ಟಿಎಫ್‌ಪಿ 2011, ದಿನಾಂಕ : 27–01–2012 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಿದ ರೀತ್ಯಾ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪ್ರಕಾಶ ವೈ.ಕೆ.

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಕಾನೂನು ಮತ್ತು ಸುವ್ಯವಸ್ಥೆ)

P.R - 2164

ಒಳಾಡಳಿತ ಸಚಿವಾಲಯ

ವಿಷಯ : ರಾಜ್ಯದಲ್ಲಿ ಮಕ್ಕಳ ಅಪೌಷ್ಠಿಕತೆ ತಡೆಗಟ್ಟುವ ಬಗ್ಗೆ – ದೂರುಗಳ ಪರಿಶೀಲನೆಗಾಗಿ Vigilance Cellನ ಮುಖ್ಯಸ್ಥರನ್ನು ನೇಮಿಸುವ ಬಗ್ಗೆ.

ಓದಲಾಗಿದೆ :
1. ರಿಟ್ ಅರ್ಜಿ ಸಂಖ್ಯೆ : 38157/2011 ರಲ್ಲಿ ದಿನಾಂಕ : 12–04–2012ರ ಆದೇಶ.
2. ಕೋರ್ ಕಮಿಟಿಯ ದಿನಾಂಕ : 23–08–2012ರ ವರದಿ.
3. ರಿಟ್ ಅರ್ಜಿ ಸಂಖ್ಯೆ : 38157/2011 ರಲ್ಲಿ ದಿನಾಂಕ : 18–10–2012ರ ಆದೇಶ.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್ ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಅಪೌಷ್ಠಿಕತೆ ತಡೆಗಟ್ಟುವ ಬಗ್ಗೆ ಈ ಕೆಳಗೆ ನಮೂದಿಸಿದ ಸದಸ್ಯರನ್ನೊಳಗೊಂಡ ಕೋರ್ ಕಮೀಟಿಯನ್ನು ರಚಿಸಲಾಗಿತ್ತು :–

1. Justice N.K. Patil - Chairman
2. Director, Health and Family Welfare Services, Government of Karnataka
3. Joint Director, ICDS, Department of Women and Child Development, Government of Karnataka
4. Mrs. Nina Nayak, Chairperson, Karnataka State Commission for Protection of Child Rights
5. Dr. Maya Olga Mascarenhas, MYRADA
6. Mr. Mariswamy, Representative of Samjika Parivarthana Janandolana
7. Mr. Clifton D' Rozario, Advocate
8. Director or Paediatric Nutritionist/Dietician, Indira Gandhi Institute of Child Health, Bangalore
9. Member Secretary, KSLSA - Convenor

ಮೇಲೆ ಓದಲಾದ (2)ರಲ್ಲಿ ಕೋರ್ ಕಮೀಟಿಯು ತನ್ನ ವರದಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ದಿನಾಂಕ : 23–08–2012 ರಂದು ಸಲ್ಲಿಸಿರುತ್ತಾರೆ. ಮೇಲೆ ಓದಲಾದ (3)ರ ಆದೇಶದಲ್ಲಿ ಕೋರ್ ಕಮೀಟಿಯು ಮಾಡಿರುವ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಹಾಗೂ ಈ ಸಂಬಂಧ ನಡೆಯುತ್ತಿರುವ ಕಾರ್ಯದ ಬಗ್ಗೆ ನಿಗಾವಹಿಸುವಂತೆ ಆದೇಶಿಸಿರುತ್ತದೆ.

ರಾಜ್ಯದಲ್ಲಿ ಮಕ್ಕಳ ಅಪೌಷ್ಠಿಕತೆ ತಡೆಗಟ್ಟುವ ಬಗ್ಗೆ ರಚಿಸಲಾಗಿರುವ ಸಮಿತಿಗೆ ಸ್ವೀಕೃತವಾಗುವ ದೂರುಗಳ ಪರಿಶೀಲನೆಗಾಗಿ ಹಾಗೂ ಸಮಿತಿಯು ಮಾಡಿರುವ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಕುರಿತು ಮೇಲ್ವಿಚಾರಣೆ (monitor) ಮಾಡಲು ಒಬ್ಬ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್ ದರ್ಜೆಯ ಅಧಿಕಾರಿಯ ನೇತೃತ್ವದಲ್ಲಿ Vigilance Cellಅನ್ನು ರಚಿಸುವಂತೆ ಕೋರ್ ಸಮಿತಿ ಅಧ್ಯಕ್ಷರಾದ ಮಾನ್ಯ ನ್ಯಾಯಮೂರ್ತಿ ಎನ್.ಕೆ. ಪಾಟೀಲ್‌ರವರು ಪ್ರಧಾನ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ಇವರಿಗೆ ಸೂಚಿಸಿರುತ್ತಾರೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಒಇ 524 ಪೊಸಿಪ 2012 ಬೆಂಗಳೂರು, ದಿನಾಂಕ: 23ನೇ ನವೆಂಬರ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಮಾಲಿನಿ ಕೃಷ್ಣಮೂರ್ತಿ, ಐ.ಪಿ.ಎಸ್., ಐ.ಜಿ.ಪಿ., ಕೆ.ಎಸ್.ಆರ್.ಪಿ., ಬೆಂಗಳೂರು ಇವರನ್ನು Vigilance Cellನ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಸದರಿ ಅಧಿಕಾರಿಯು ಕೋರ್ ಸಮಿತಿಯ ಅಧ್ಯಕ್ಷರಾದ ಮಾನ್ಯ ನ್ಯಾಯಮೂರ್ತಿ ಎನ್.ಕೆ. ಪಾಟೀಲ್‌ರವರ ನಿರ್ದೇಶನದಂತೆ ಕಾರ್ಯ ನಿರ್ವಹಿಸತಕ್ಕದ್ದು.

ಸದರಿ ಕೆಲಸವನ್ನು ನಿರ್ವಹಿಸಲು ಅಗತ್ಯ ಪೊಲೀಸ್ ಸಿಬ್ಬಂದಿಯವರನ್ನು ಪೊಲೀಸ್ ಇಲಾಖೆಯು ಒದಗಿಸತಕ್ಕದ್ದು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್. ಕೆ. ನಿಂಗಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

P.R - 2309

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಸೇರ್ಪಡೆ ಅದೇಶ

ಸಂಖ್ಯೆ: ಆಕುಕ 140 ಎಂಎಂಇ 2011, ಬೆಂಗಳೂರು, ದಿನಾಂಕ 18–10–2012

ಸರ್ಕಾರದ ಆದೇಶ ಸಂಖ್ಯೆ ಆಕುಕ 140 ಎಂಎಂಇ 2011, ದಿನಾಂಕ 16–06–2012ರ ಆದೇಶ ಭಾಗಕ್ಕೆ ಮುಂದುವರಿದಂತೆ "ಹಾಗೂ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ರಾಜ್ಯಮಟ್ಟದಲ್ಲಿ ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿಯ ವತಿಯಿಂದ ವೈದ್ಯಕೀಯ ಶಿಕ್ಷಣ ನಿರ್ದೇಶಕರ ನೇತೃತ್ವದಲ್ಲಿ ನಡೆಸತಕ್ಕದ್ದು" ಎಂಬುದನ್ನು ಸೇರ್ಪಡಿಸಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ವಿ. ಸಾಯಿಬಾಬಾ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

P.R - 2167

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಆಕುಕ 30 ಎಂಎಸ್‌ಎಫ್ 2011, ಬೆಂಗಳೂರು, ದಿನಾಂಕ 07–11–2012

ಸರ್ಕಾರದ ಆದೇಶ ಸಂಖ್ಯೆ ಆಕುಕ 39 ಎಂಎಸ್‌ಎಫ್ 2011, ದಿನಾಂಕ 02–07–2012ರ ರಲ್ಲಿನ ಆದೇಶ ಭಾಗದಲ್ಲಿ ಕ್ಲಿನಿಕಲ್ ಶುಲ್ಕದ ಪರಿಷ್ಕೃತ ದರಗಳು ಕೋಷ್ಟಕದ ನಂತರ ಈ ಕೆಳಕಂಡ ವಾಕ್ಯವನ್ನು ಸೇರಿಸಿಕೊಂಡು ಓದಿಕೊಳ್ಳತಕ್ಕದ್ದು.

"ಸರ್ಕಾರದ ಆಯ್ಕೆ ಸಮಿತಿಯಿಂದ ಉಚಿತ ಸೀಟಿನಡಿಯಲ್ಲಿ (ಮೆರಿಟ್) ಆಯ್ಕೆಯಾಗಿ ಖಾಸಗಿ ಸಂಘ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಮೇಲ್ಕಂಡ ಶುಲ್ಕದಿಂದ ವಿನಾಯಿತಿ ನೀಡಿದೆ"

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ವಿ. ಸಾಯಿಬಾಬಾ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

P.R - 2185

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ಶ್ರೀ ಎಂ. ಗಂಗಾಧರ ರೆಡ್ಡಿ, ದ್ವಿತೀಯ ದರ್ಜೆ ಸಹಾಯಕ, ಚಿಗಟೇರಿ ಆಸ್ಪತ್ರೆ, ದಾವಣಗೆರೆ ಇವರ ಜನ್ಮ ದಿನಾಂಕ ತಿದ್ದುಪಡಿ ಮಾಡುವ ಬಗ್ಗೆ.–

ಓದಲಾಗಿದೆ:
1) ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಅರ್ಜಿ ಸಂ: 3086/2007 ರಲ್ಲಿನ ನ್ಯಾಯಾಲಯದ ಆದೇಶ ದಿನಾಂಕ 29–07–2008.
2) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಪತ್ರ ಸಂ: ಲಿಪಿಕ (1) 97/07–08, ದಿನಾಂಕ 30–10–2008.
3) ಸರ್ಕಾರದ ಆದೇಶ ಸಂಖ್ಯೆ: ಆಕುಕ 367 ಹೆಚ್‌ಎಸ್‌ಎಂ 2010, ದಿನಾಂಕ 11–08–2010.

ಪ್ರಸ್ತಾವನೆ:

ಮೇಲೆ ಕ್ರಮಾಂಕ (3)ರಲ್ಲಿ ಓದಲಾದ ದಿನಾಂಕ 11–08–2010ರ ಸರ್ಕಾರದ ಆದೇಶದಲ್ಲಿ ಶ್ರೀ ಗಂಗಾಧರ ರೆಡ್ಡಿ, ದ್ವಿ.ದ.ಸ. ಚಿಗಟೇರಿ ಆಸ್ಪತ್ರೆ, ದಾವಣಗೆರೆ ಇವರ ಜನ್ಮ ದಿನಾಂಕವನ್ನು ನಿರ್ಧರಿಸಲು ಕರ್ನಾಟಕ ಸರ್ಕಾರಿ ನೌಕರರ (ಜನ್ಮ ದಿನಾಂಕ ನಿರ್ಧರಣ ಕಾಯ್ದೆ 1974ರ ಉಪಖಂಡ 5 (3)ರಡಿ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಅಪರ ಕಾರ್ಯದರ್ಶಿ–3 ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಅದೇ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ, (ವ್ಯಾಜ್ಯಗಳು–7) ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿತ್ತು.

ಪ್ರಸ್ತುತ ಪ್ರಕರಣದಲ್ಲಿ ನೇಮಕಗೊಂಡಿರುವ ಮಂಡನಾಧಿಕಾರಿಯವರು ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್‌ಎಸ್‌ಆರ್ 94 ದಿನಾಂಕ 15–03–1994ರ ಪ್ರಕಾರ ವಾದೇಕ್ಷಕರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿರುವುದರಿಂದ ಅಪರ ಕಾನೂನು ಕಾರ್ಯದರ್ಶಿ–3 ಇವರನ್ನು ಜನ್ಮ ದಿನಾಂಕ ಬದಲಾವಣೆ ಕುರಿತಂತೆ ವಿಚಾರಣಾಧಿಕಾರಿಯಾಗಿ ನೇಮಿಸುವುದು ದಿನಾಂಕ 15–03–1994ರ ಸರ್ಕಾರಿ ಅಧಿಸೂಚನೆಗೆ ವ್ಯತಿರಿಕ್ತವಾಗುತ್ತಿದೆ ಎಂದು ತಿಳಿಸುತ್ತಾ, ಇಂತಹ ಹಲವಾರು ಪ್ರಕರಣಗಳಲ್ಲಿ 1994ರ ಸರ್ಕಾರಿ ಅಧಿಸೂಚನೆ ರೀತ್ಯಾ ವಾದೇಕ್ಷಕರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆಂದು ಅದೇ ಪ್ರಕಾರ ಸದರಿಯವರನ್ನೇ ವಿಚಾರಣಾಧಿಕಾರಿಯನ್ನಾಗಿ ಮಾಡುವುದು ಸೂಕ್ತವೆಂದು ಅದರಂತೆ ದಿನಾಂಕ 11–08–2010ರ ಸರ್ಕಾರಿ ಅದೇಶವನ್ನು ಮಾರ್ಪಡಿಸಿ ಆದೇಶ ಹೊರಡಿಸಲು ಕಾನೂನು ಇಲಾಖೆಯು ಸೂಚಿಸಿರುತ್ತದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 367 ಹೆಚ್ಎಸ್ಎಂ 2007, ಬೆಂಗಳೂರು, ದಿನಾಂಕ 05–11–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಶ್ರೀ ಗಂಗಾಧರ ರೆಡ್ಡಿ, ದ್ವಿತೀಯ ದರ್ಜೆ ಸಹಾಯಕ, ಚಿಗಟೇರಿ ಆಸ್ಪತ್ರೆ, ದಾವಣಗೆರೆ ಇವರ ಜನ್ಮ ದಿನಾಂಕ ಬದಲಾಯಿಸುವ ಸಂಬಂಧ ಕರ್ನಾಟಕ ಸರ್ಕಾರಿ ನೌಕರರ (ಜನ್ಮ ದಿನಾಂಕ ನಿರ್ಧರಣ ಕಾಯ್ದೆ 1974ರ ಉಪಖಂಡ 5 (3)ರಡಿ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಅಪರ ಕಾರ್ಯದರ್ಶಿ–3 ಇವರನ್ನು ವಿಚಾರಣಾಧಿಕಾರಿಯನ್ನಾಗಿ ಸರ್ಕಾರದ ಆದೇಶ ಸಂಖ್ಯೆ: ಆಕುಕ 367 ಹೆಚ್ ಎಸ್ ಎಂ 2010 ದಿನಾಂಕ 11–08–2010ರಲ್ಲಿ ನೇಮಿಸಿರುವುದನ್ನು ಮಾರ್ಪಡಿಸಿ, ವಾದೇಕ್ಷಕರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಈ ಹಿಂದೆ ದಿನಾಂಕ 11–08–2010ರ ಆದೇಶದಂತೆ ಅದೇ ಇಲಾಖೆಯ ಸರ್ಕಾರದ ಆಧೀನ ಕಾರ್ಯದರ್ಶಿ, (ವಾಜ್ಯಗಳು–7) ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿರುವುದನ್ನು ಮುಂದುವರೆಸಿ ಆದೇಶ ಹೊರಡಿಸಿದೆ.

ಈ ಆದೇಶವನ್ನು ಕಾನೂನು ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಲಾ 1 ಜದಿವಿ 2010, ದಿನಾಂಕ 8–07–2010ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಐ. ಹೇಮನಾಥ್
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೃಂದ ಮತ್ತು ನೇಮಕಾತಿ)

P.R - 2192

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: 2012–13ನೇ ಸಾಲಿನಲ್ಲಿ ಪ್ರಥಮ ಎಂಬಿಬಿಎಸ್/ಬಿಡಿಎಸ್/ಆಯುರ್ವೇದ/ಯುನಾನಿ/ ನ್ಯಾಚುರೋಪತಿ/ಯೋಗ ಹಾಗೂ ಹೋಮಿಯೋಪತಿ ಕೋರ್ಸುಗಳಿಗೆ ಸಿ.ಇ.ಟಿ.ಯಿಂದ ಆಯ್ಕೆಯಾದ ವಿದ್ಯಾರ್ಥಿಗಳ ಪರಸ್ಪರ ವರ್ಗಾವಣೆ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.–

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಆಕುಕ 217 ಆರ್‌ಜಿಯು 2012, ದಿನಾಂಕ 6–9–2012

2) ಪರಸ್ಪರ ವರ್ಗಾವಣೆಗಾಗಿ ರಚಿಸಲಾಗಿದ್ದ ಸಮಿತಿಯ ದಿನಾಂಕ 26–9–2012ರ ಸಭಾ ನಡವಳಿ.

ಪ್ರಸ್ತಾವನೆ:

ಮೇಲ್ಕಂಡ ಆದೇಶದಲ್ಲಿ 2012–13ನೇ ಶೈಕ್ಷಣಿಕ ವರ್ಷದಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ ಸರ್ಕಾರ ಮತ್ತು ಖಾಸಗಿ ವೈದ್ಯಕೀಯ ಮತ್ತು ದಂತ ಕಾಲೇಜುಗಳಿಗೆ ಎಂಬಿಬಿಎಸ್/ಬಿಡಿಎಸ್/ಆಯುರ್ವೇದ/ಯುನಾನಿ/ನ್ಯಾಚುರೋಪತಿ/ಯೋಗ ಕೋರ್ಸುಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಒಂದು ವೈದ್ಯಕೀಯ ಕಾಲೇಜಿನಿಂದ ಮತ್ತೊಂದು ವೈದ್ಯಕೀಯ ಕಾಲೇಜಿಗೆ ಪರಸ್ಪರ ವರ್ಗಾವಣೆ ಪಡೆಯಲು ಕೆಲವೊಂದು ಷರತ್ತುಗಳಿಗೆ ಒಳಪಟ್ಟು ಅನುಮತಿ ನೀಡಲಾಗಿದೆ ಹಾಗೂ ಪರಸ್ಪರ ವರ್ಗಾವಣೆ ಪ್ರಕ್ರಿಯೆಗೆ 3 ಸದಸ್ಯರುಗಳ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ದಿನಾಂಕ 26–9–2012ರಂದು ಸಭೆ ನಡೆಸಿ, ಪರಸ್ಪರ ವರ್ಗಾವಣೆ ಬಯಸಿರುವ ವಿದ್ಯಾರ್ಥಿಗಳ ಸಂದರ್ಶನ ನಡೆಸಿ, ದಾಖಲೆಗಳನ್ನು ಪರಿಶೀಲಿಸಿ, ಅನುಬಂಧ–1ರಲ್ಲಿ ನಮೂದಿಸಿರುವ ವಿದ್ಯಾರ್ಥಿಗಳಿಗೆ ಅವರ ಹೆಸರಿನ ಮುಂದೆ ಸೂಚಿಸಿರುವ ವೈದ್ಯಕೀಯ/ದಂತ ಕಾಲೇಜುಗಳಿಗೆ ಪರಸ್ಪರ ವರ್ಗಾವಣೆ ಅನುಮತಿಸಲು ಶಿಫಾರಸ್ಸು ಮಾಡಿರುತ್ತದೆ. ಸಮಿತಿಯ ಶಿಫಾರಸ್ಸಿನಂತೆ ಪರಸ್ಪರ ವರ್ಗಾವಣೆಗೆ ಅನುಮತಿ ನೀಡಲು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 217 ಆರ್‌ಜಿಯು 2012, ಬೆಂಗಳೂರು, ದಿನಾಂಕ 26–09–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2012–13ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ ಸರ್ಕಾರಿ/ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆದು, ಪರಸ್ಪರ ವರ್ಗಾವಣೆ ಕೋರಿರುವ ಅನುಬಂಧ–1ರಲ್ಲಿ ನಮೂದಿಸಿರುವ 18 ವೈದ್ಯಕೀಯ ವಿದ್ಯಾರ್ಥಿಗಳಿಗೆ ಮತ್ತು 01 ದಂತ ವಿದ್ಯಾರ್ಥಿಗೆ, ಸಮಿತಿಯ ಶಿಫಾರಸ್ಸಿನಂತೆ ಪರಸ್ಪರ ವರ್ಗಾವಣೆಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅನುಮತಿ ನೀಡಲಾಗಿದೆ.

ಷರತ್ತುಗಳು ಮತ್ತು ನಿಬಂಧನೆಗಳು:–

1. ಪರಸ್ಪರ ವರ್ಗಾವಣೆಯನ್ನು ಪಡೆದಿರುವ ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಸ್ವಂತ ಜವಾಬ್ದಾರಿಯ ಮೇಲೆ ಈಗಾಗಲೇ ಪ್ರವೇಶ ಪಡೆದಿರುವ ವೈದ್ಯಕೀಯ/ದಂತ ಕಾಲೇಜಿನಿಂದ ಬಿಡುಗಡೆ ಹೊಂದಿ ಅನುಮತಿಸಿರುವ ಕಾಲೇಜಿನಲ್ಲಿ ದಿನಾಂಕ 28–9–2012ರೊಳಗೆ ಪುನರ್ ಪ್ರವೇಶ ಪಡೆಯತಕ್ಕದ್ದು. ಯಾವುದೇ ಕಾರಣಕ್ಕೂ ಪರಸ್ಪರ ವರ್ಗಾವಣೆ ಕಾಲಮಿತಿಯನ್ನು ವಿಸ್ತರಿಸಲಾಗುವುದಿಲ್ಲ.
2. ಪುನರ್ ಪ್ರವೇಶ ಪಡೆದ ನಂತರ ಯಾವುದೇ ಕಾರಣಕ್ಕಾಗಿ ಸೀಟನ್ನು ಅಧ್ಯರ್ಪಿಸಲು ಅವಕಾಶವಿರುವುದಿಲ್ಲ. ಸೀಟನ್ನು ಅಧ್ಯರ್ಪಿಸಿದಲ್ಲಿ ಸಂಬಂಧಪಟ್ಟ ವಿದ್ಯಾರ್ಥಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.
3. ಒಮ್ಮೆ ಪರಸ್ಪರ ವರ್ಗಾವಣೆ ಪಡೆದ ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಮತ್ತೊಮ್ಮೆ ಪರಸ್ಪರ ವರ್ಗಾವಣೆಗಾಗಲೀ ಅಥವಾ ಯಾವುದೇ ಸ್ವರೂಪದ ವರ್ಗಾವಣೆಗಾಗಲೀ ಅರ್ಹರಿರುವುದಿಲ್ಲ.

4. ಪರಸ್ಪರ ವರ್ಗಾವಣೆಯ ಸಂಬಂಧದಲ್ಲಿ ಆಗತಕ್ಕ ಶುಲ್ಕ ವ್ಯತ್ಯಾಸಕ್ಕೆ ವಿದ್ಯಾರ್ಥಿಗಳೇ ಹೊಣೆಗಾರರಾಗಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಮೆಹಬೂಬ್ ಖಾನ್

ಸರ್ಕಾರದ ಅಧೀನ ಕಾರ್ಯದರ್ಶಿ–2

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ವೈದ್ಯಕೀಯ ಶಿಕ್ಷಣ)

Annexure-1

Attendance sheet of Mutual Transfer candidates of MBBS course seats for the academic year 2012-13

Sl. No.	*Name of the Candidates*		*CET Rank No.*	*Cate-gory*	*College in which seat allotted*	*College to which mutual transfer required*
01	a	Nyruthya, K.M.	1831	GM	Khaja Bandenawaj Medical College, Gulbarga	Tadikela Subbaiah Medical College, Shimoga
	b.	Wafa Tahseen	4100	2A-G	Tadikela Subbaiah Medical College, Shimoga	Khaja Bandenawaj Medical College, Gulbarga
02	a	Meghana Prakash	5299	ST-G	MVJ Medical College, Bangalore	JJM Medical College, Davangere
	b	Ravali Polepaka	6249	SC-G	JJM Medical College, Davangere	MVJ Medical College, Bangalore
03	a	Deepa, S	296	GM	Mysore Medical College & Research Institute, Mysore	Bangalore Medical College & Research Institute, Bangalore
	b	Dhanya, S.B.	1257	ST-G	Bangalore Medical College & Research Institute, Bangalore	Mysore Medical College & Research Institute, Mysore
04	a	Rohini S. Patil	2701	SA-G	Navodaya Medical College, Raichur	Khaja Bandenawaj Medical College, Gulbarga
	b	Umesh, J	3932	3A-R	Khaja Bandenawaj Medical College, Gulbarga	Navodaya Medical College, Raichur
05	a	Aishwarya, Y.S.	1471	GM	Bidar Institute of Medical Science, Bidar	Hassan Institute of Medical Sciences, Hassan
	b	Niraj Singh	2950	2A-G	Hassan Institute of Medical Sciences, Hassan	Bidar Institute of Medical Science, Bidar
06	a	Arshiya Sultana	2579	I-G	Raichur Institute of Medical Sciences, Raichur	Bidar Institute of Medical Science, Bidar
	b	Mohammed Emad Hussain	1716	2B-G	Bidar Institute of Medical Sciences, Bidar	Raichur Institute of Medical Sciences, Raichur
07	a	Raghunandan Kanekal	810	GM	Belgaum Institute of Medical Sciences, Belgaum	SDM Medical College, Dharwad
	b	Rajat P. Magdum	1109	3B-G	SDM Medical College, Dharwad	Belgaum Institute of Medical Sciences, Belgaum
08	a	Vijetha Chanabasanavar	1384	GM	Bidar Institute of Medical Science, Bidar	Karnataka Institute of Medical Science, Hubli
	b	Prashanth Kumar	4608	SC-R	Karnataka Institute of Medical Science, Hubli	Bidar Institute of Medical Science, Bidar

Sl. No.	***Name of the Candidates***		***CET Rank No.***	***Cate-gory***	***College in which seat allotted***	***College to which mutual transfer required***
09	a	Abhinandan Dorle	4061	2A-G	SS Institute of Medical Sciences, Davangere	S. Nijalingappa Medical College, Bagalkot
	b	Anup S.I.	1694	GM	S. Nijalingappa Medical College, Bagalkot	SS Institute of Medical Sciences, Davangere
10	a	Vinay A.	343	GM	Karnataka Institute of Medical Sciences, Hubli	Bangalore Medical College & Research Institute, Bangalore
	b	Aishwarya Malode	80	GM	Bangalore Medical College & Research Institute, Bangalore	Karnataka Institute of Medical Sciences, Hubli
11	a	Samreen Shabnam	2295	2B-G	KVG Medical College, Sullia	Khaja Bandenawaj Medical College, Gulbarg
	b	Pooja S.P.	8164	SC-G	Khaja Bandenawaj Medical College, Gulbarga	KVG Medical College, Sullia
12	a	Roselin	2254	I-G	MR Medical College, Gulbarga	Bidar Institute of Medical Science, Bidar
	b	Payal Umesh Telkar	3229	2A-G	Bidar Institute of Medical Science, Bidar	MR Medical College, Gulbarga
13	a	Jagadeesh S. Nemagoudra	5512	2A-R	Rajarajeshwari Medical College, Bangalore.	Navodaya Medical College, Raichur
	b	Raksha Makam	1751	GM	Navodaya Medical College, Raichur	Rajarajeshwari Medical College, Bangalore.
14	a	Gagan M.C.	1388	GM	Bidar Institute of Medical Science, Bidar	Mandya Institute of Medical Sciences, Mandya
	b	Shamshoddin	4338	I-R	Mandya Institute of Medical Sciences, Mandya	Bidar Institute of Medical Science, Bidar
15	a	Aarpith Kamath M.	1381	GM	Yenepoya Medical College, Mangalore	Rajarajeshwari Medical College, Bangalore.
	b	Roshini Pamela D. Souza	1730	3-BG	Rajarajeshwari Medical College, Bangalore.	Yenepoya Medical College, Mangalore
16	a	Mohammed Nadeem Ahmed	2659	2A-G	Vydehi Institute of Medical Sciences & Research Centre, Bangalore	M. R. Medical College, Gulbarga
	b	Sachin B.R.	7003	3A-R	M. R. Medical College, Gulbarga	Vydehi Institute of Medical Sciences & Research Centre, Bangalore
17	a	Rudrappa G. Kuligod	4476	2A-R	M. R. Medical College, Gulbarga	S. Nijalingappa Medical College, Bagalkot
	b	Syed Lateef	4506	2B-R	S. Nijalingappa Medical College, Bagalkot	M. R. Medical College, Gulbarga
18	a	Sharana Goud Honnagol	2049	3A-G	B. R. Ambedkar Medical College, Bangalore	S. Nijalingappa Medical College, Bagalkot
	b	Gagan N.	1897	3A-G	S. Nijalingappa Medical College, Bagalkot	B. R. Ambedkar Medical College, Bangalore

Attendance sheet of Mutual Transfer candidates of BDS course seats for the academic year 2012-13

Sl. No.	Name of the Candidates		CET Rank No.	Cate-gory	College in which seat allotted	College to which mutual transfer required
01	a	Pooja Biradar	14703	3B-G	Al-Badar Dental College, Gulbarga	HKE Societie's Dental College, Gulbarga
	b.	Khateeja	8912	2B-G	HKE Societie's Dental College, Gulbarga	Al-Badar Dental College, Gulbarga

ಮೆಹಬೂಬ್ ಖಾನ್
ಸರ್ಕಾರದ ಅಧೀನ ಕಾರ್ಯದರ್ಶಿ–2
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

P.R - 2216

HEALTH AND FAMILY WELFARE SECRETARIAT

Sub: Establishment of seven new government medical colleges in the districts of Tumkur, Chamarajanagar, Kodagu (Madikeri), Chitradurga, Koppal, Gadaga and Haveri from the academic year 2013-14-according sanction-regarding.

Read:
1. No. ACA/F/M-65/2013-14, No. ACA/F/M-87/2013-14, No. ACA/F/M-88/2013-14, No. ACA/F/M-89/2013-14, No. ACA/F/M-90/2013-14, No. ACA/F/M-91/2013-14 and No. ACA/F/M-92/2013-14 all dated 29-09-2012 from the Registrar of Rajiv Gandhi University of Health Sciences, Bangalore.
2. Letter No. HFW 146 MPS 2012, dated 27-09-2012 from the Secretary to Government of Karnataka, Health and Family Welfare Department (Medical Education), Bangalore.

Preamble:

Karnataka State has been the pioneer in the field of Professional Education especially in Medical Education. In Karnataka, there are already 10 Government Autonomous Medical Colleges functioning in the 10 Districts of Bangalore, Mysore, Bellary, Hubli, Bidar, Raichur, Belgaum, Shimoga, Hassan and Mandya. It is experienced that there has been great demand for the services of doctors. Government of Karnataka have noticed the dearth of hands in medical services commensurate with the ration of population of India. In order to overcome this deficiency and to encourage meritorious poor and backward students in the field of Medical Education in the State, it is found essential to establish some more new Government Colleges with a minimum intake of 100 seats in each college in another 07 districts of Tumkur, Chamarajanagar, Kodagu (Madikeri), Chitradurga, Koppal, Gadaga and Haveri from the academic year 2013-14 where, at present, there are no Government Medical Colleges.

The Rajiv Gandhi University of Health Sciences, Bangalore vide references read at (1) above has agreed in principle to affiliate the proposed course of MBBS with an intake of 150 (One Hundred and Fifty) seats to be opened at the above new Government Medical Colleges for the year 2013-14 subject to grant of permission by the Government of India, Ministry of Health and Family Welfare, New Delhi under Section 10 (A) of the Indian Medical Council Act, 1956 (102 of 1956)

The Government of Karnataka vide reference read at (2) above have issued Essentiality Certificate and Feasibility Certificate for establishment of the above 07 New Government Medical Colleges.

Providing budgetary provisions in pursuit of fulfillment of the requirement and norms of the Medical Council of India prescribed for establishment of Medical Colleges so as to enable Medical Council of India to cause inspection of the site in order to start the Medical Colleges has been considered by the Government of Karnataka, Government of Karnataka has decided to allocate initially an outlay of Rs. 35.00 crores during the financial year 2012-13 to take up the civil works for construction of 07 New Government Medical Colleges at Rs. 5.00 cores each.

It has been estimated that the capital expenditure for establishment of each Government Medical College shall be Rs. 150.00 crores and for an attached Teaching Hospital Rs. 110.00 crores, which includes civil works for construction of college building, Girls and Boys hostels, quarters for the Staff, Library etc., and for procurement of Medical Equipments. The remaining funds will be released in a staggered manner for each Medical College over the next three years i.e., 2013-14, 2014-15 and 2015-16.

The clinical facilities for the proposed new 07 Government Medical Colleges will be availed in the existing 07 Government District Hospitals by entering into a MoU with the Department of Health and Family Welfare Service of the State Government.

It is absolutely essential to adopt and enforce the time schedule prescribed by Government of India and Medical Council of India in order to establish the new Medical Colleges as per the requirements of the Medical Council of India. Further, to start the admissions to the medical courses in the academic session, 2013-14 there should complete compliance with the Medical Council of India

Regulations, Rules and norms. Therefore a budgetary provision has to be made in the current financial year 2012-13 to take up the construction work etc., immediately.

Government Order No. HFW 146 MPS 2012, dated 07-12-2012

Sanction is accorded for the establishment of 07 new Government Medical Colleges in the Districts of Tumkur, Chamarajanagar, Kodagu (Madikeri), Chitradurga, Koppal, Gadaga and Haveri from the academic year 2013-14.

Orders of Government releasing a budgetary outlay of Rs. 35.00 crores at the rate of Rs. 5.00 crores per college in the current financial year 2012-13 shall be issued separately.

This order is being issued as per proviso to rule 17 (2) of the Karnataka Government (Transaction of Business) Rules 1977.

K. S. Prabhakara
Secretary to Government
Health and Family Welfare Department
(Medical Education)

P.R - 2247

ಕಂದಾಯ ಸಚಿವಾಲಯ

ವಿಷಯ : ಸಿ.ಜೆ. ಕೃಷ್ಣಕುಮಾರ್, ತಹಶೀಲ್ದಾರ್, ತರೀಕೆರೆ ತಾಲ್ಲೂಕು ಮತ್ತು ಶ್ರೀ ಪಿ. ರಮೇಶ್, ಭೂಮಾಪಕರು, ತಾಲ್ಲೂಕು ಕಛೇರಿ ತರೀಕೆರೆ, ಚಿಕ್ಕಮಗಳೂರು ಜಿಲ್ಲೆ ಅವರುಗಳ ಮೇಲಿನ ಟ್ರಾಪ್ ಪ್ರಕರಣದಲ್ಲಿ ಅಭಿಯೋಜನಾ ಮಂಜೂರಾತಿ ಕುರಿತು.

ಓದಲಾಗಿದೆ :

1) ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ರವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ) ಎಂ/ಸಿಆರ್/07/2011, ಚಿಕ್ಕಮಗಳೂರು ದಿನಾಂಕ: 16–05–2011
2) ಸರ್ಕಾರದ ಆದೇಶ ಸಂಖ್ಯೆ: ಕಂಇ 24 ಎಡಿಇ 2011, ದಿನಾಂಕ:04.06.2011
3) ಶ್ರೀ ಸಿ.ಜೆ. ಕೃಷ್ಣಕುಮಾರ್ ತಹಶೀಲ್ದಾರ್‌ರವರ ಮನವಿ ದಿನಾಂಕ: 05.01.2012
4) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 24 ಎಡಿಇ 2011, ದಿನಾಂಕ: 14.05.2012
5) ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ರವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ) ಎಂ–21/ಸಿ ಆರ್/07/2011, ಚಿಕ್ಕಮಗಳೂರು ದಿನಾಂಕ: 06.06.2012
6) ಸರ್ಕಾರದ ಆದೇಶ ಸಂಖ್ಯೆ: ಕಂಇ 24 ಎಡಿಇ 2011, ದಿನಾಂಕ: 12.07.2012
7) ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತರವರ ಪತ್ರಸಂಖ್ಯೆ:ಲೋಕ್/ಐಎನ್‌ವಿ(ಜಿ) ಎಂ–21/ಸಿಆರ್/07/2011, ಚಿಕ್ಕಮಗಳೂರು ದಿನಾಂಕ: 07.08.2012

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಅಪರ ಪೊಲೀಸ್ ಮಹಾ ನಿರ್ದೇಶಕರು, ಫಿರ್ಯಾದುದಾರರಾದ ಶ್ರೀ ಹೆಚ್.ಜೆ. ಸುರ್ಜಿತ್ ಬಿನ್ ಜಯರಾಮೇಗೌಡ, ಕೃಷಿಕ, ಲಕ್ಕೊಳ್ಳಿ ಹೋಬಳಿ, ತರೀಕೆರೆ ತಾಲ್ಲೂಕು ಇವರು ದೊಡ್ಡಕುಂದೂರು ಗ್ರಾಮದ ಸ.ನಂ.3/ಪಿರಲ್ಲಿ 47–00 ಎಕರೆ ಜಮೀನಿದ್ದು, ಆ ಜಮೀನನ್ನು ಮಾರಾಟ ಮಾಡುವ ಸಲುವಾಗಿ ಜಮೀನುಗಳ ದುರಸ್ಥಿ ಮಾಡಿಸುವ ಸಂಬಂಧ ಸುಮಾರು 1 ವರ್ಷದ ಹಿಂದೆ ಮಾರ್ಚ್ 2010 ರಂದು ತರೀಕೆರೆ ತಾಲ್ಲೂಕು ಕಛೇರಿಗೆ ಅರ್ಜಿ ಸಲ್ಲಿಸಿದ್ದರೂ ಜಮೀನುಗಳ ದುರಸ್ಥಿ ಕೆಲಸ ಆಗಿಲ್ಲದಿರುವ ಬಗ್ಗೆ ದಿನಾಂಕ: 08–04–2011 ರಂದು ಶ್ರೀ ಸಿ.ಜೆ. ಕೃಷ್ಣಕುಮಾರ್, ತಹಶೀಲ್ದಾರ್‌ರವರನ್ನು ಭೇಟಿ ಮಾಡಿ ವಿಚಾರಿಸಲಾಗಿ, ಜಮೀನುಗಳ ದುರಸ್ಥಿಯ ಸಂಬಂಧ ಅಕ್ರಮ ಸಂಭಾವನೆ ರೂ. 1 ಲಕ್ಷ ಸ್ವೀಕರಿಸುವಾಗ ಪೊಲೀಸರ ಬಲೆಗೆ ಸಿಕ್ಕಿಬಿದ್ದಿರುತ್ತಾರೆ. ಆ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಛೇರಿಯ ಅಪರ ಪೊಲೀಸ್ ಮಹಾ ನಿರ್ದೇಶಕರು, ಶ್ರೀ ಸಿ.ಜೆ. ಕೃಷ್ಣಕುಮಾರ್, ತಹಶೀಲ್ದಾರ್ ರವರನ್ನು ಅಮಾನತ್ತಿನಲ್ಲಿಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರ ಮೇರೆಗೆ ಮೇಲೆ ಓದಲಾದ ಕ್ರಮ ಸಂಖ್ಯೆ (2) ಆದೇಶದಲ್ಲಿ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಅಮಾನತ್ತುಗೊಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ ಅಮಾನತ್ತಿನಲ್ಲಿರುವ ತಹಶೀಲ್ದಾರರು ಅವರ ಅಮಾನತ್ತಿನ ಅವಧಿ 6 ತಿಂಗಳು ಮುಕ್ತಾಯಗೊಂಡಿರುವುದರಿಂದ 04.01.2012ರ ನಂತರದ ಅವಧಿಗೆ ಕೆ.ಸಿ.ಎಸ್.ಆರ್ ನಿಯಮ 98(1) ರನ್ವಯ ಜೀವನಾಧಾರ ಭತ್ಯೆಯನ್ನು ಶೇ.75 ರಷ್ಟು ಹೆಚ್ಚಿಸಲು ಕೋರಿರುತ್ತಾರೆ. ಮೇಲೆ ಓದಲಾದ ಕ್ರಮಸಂಖ್ಯೆ (4) ರ ಆದೇಶದಲ್ಲಿ ದಿನಾಂಕ: 04.01.2012ರ ನಂತರದ ಅಮಾನತ್ತಿನ ಅವಧಿಗೆ KCSR ನಿಯಮ 98(1) ರನ್ವಯ ಜೀವನಾಧಾರ ಭತ್ಯೆಯನ್ನು ಶೇ. 75 ರಷ್ಟನ್ನು ಮಂಜೂರು ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5) ಪತ್ರದಲ್ಲಿ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ರವರು ಸರ್ಕಾರಕ್ಕೆ ಪತ್ರ ಬರೆದು ಈ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿರುವ ತನಿಖಾಧಿಕಾರಿಯ ಅಂತಿಮ ವರದಿಯ ಪ್ರಕಾರ ಚಿಕ್ಕಮಗಳೂರು ಲೋಕಾಯುಕ್ತ ಠಾಣೆ ಮೊಕದ್ದಮೆ ಸಂಖ್ಯೆ 7/2011ರ ಆರೋಪಿತ ಸರ್ಕಾರಿ ಅಧಿಕಾರಿ/ನೌಕರರಾದ ಶ್ರೀ ಸಿ.ಜೆ. ಕೃಷ್ಣಕುಮಾರ್, ಹಿಂದಿನ ತಹಶೀಲ್ದಾರ್ ತರೀಕೆರೆ (ಹಾಲಿ ಅಮಾನತ್ತಿನಲ್ಲಿರುವ) ಮತ್ತು ಶ್ರೀ ಪಿ. ರಮೇಶ್, ಭೂಮಾಪಕರು, ತಾಲ್ಲೂಕು ಕಛೇರಿ, ತರೀಕೆರೆ ಅವರುಗಳ ವಿರುದ್ಧ ಟ್ರ್ಯಾಪ್ ಪ್ರಕರಣದಲ್ಲಿ ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ 1988ರ ಕಲಂ 7 ಮತ್ತು 13(1)ಡಿ ಜೊತೆಗೆ 13(2) ಜೊತೆಗೆ ಕಲಂ 109 ಐಪಿಸಿ ಅಡಿಯಲ್ಲಿನ ಆಪಾದನೆಗಳು ಸಾಬೀತಾಗಿರುವುದರಿಂದ ಆರೋಪಿತರನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಅರ್ಹರಾಗಿರುವುದರಿಂದ ಸದರಿ ಆರೋಪಿ (1) ಶ್ರೀ

ಸಿ.ಜೆ. ಕೃಷ್ಣಕುಮಾರ್, ಹಿಂದಿನ ತಹಶೀಲ್ದಾರ್ ತರೀಕರೆ (ಹಾಲಿ ಅಮಾನತ್ತಿನಲ್ಲಿರುವ) ಮತ್ತು ಆರೋಪಿ (2) ಶ್ರೀ ಪಿ.ರಮೇಶ್, ಭೂಮಾಪಕರು, ತಾಲ್ಲೂಕು ಕಛೇರಿ, ತರೀಕೆರೆ ಅವರುಗಳನ್ನು ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನಾ ಕಾಯದೆ ಕಲಂ 19(1) (ಬಿ) ರನ್ವಯ ಸರ್ಕಾರದ ಮಂಜೂರಾತಿಗೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮಸಂಖ್ಯೆ (6) ರ ಸರ್ಕಾರಿ ಆದೇಶದಲ್ಲಿ ಶ್ರೀ ಸಿ.ಜೆ. ಕೃಷ್ಣಕುಮಾರ್, ಹಿಂದಿನ ತಹಶೀಲ್ದಾರ್ ತರೀಕೆರೆ (ಹಾಲಿ ಅಮಾನತ್ತಿನಲ್ಲಿರುವ) ಮತ್ತು ಶ್ರೀ ಪಿ. ರಮೇಶ್, ಭೂಮಾಪಕರು, ತಾಲ್ಲೂಕು ಕಛೇರಿ, ತರೀಕರೆ ಅವರುಗಳನ್ನು ಭ್ರಷ್ಟಾಚಾರ ಪ್ರತಿಬಂಧಕ ಕಾಯಿದೆಯ 1988ರ ಕಲಂ 7 ಮತ್ತು 13(1) (ಡಿ) ಸಹವಾಚನ ಕಲಂ 13(2)ರ ಪ್ರಕಾರ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಭ್ರಷ್ಟಾಚಾರ ನಿಯಂತ್ರಣ ಕಾಯಿದೆ 1988ರ ಕಲಂ 19(1)(ಬಿ) ರನ್ವಯ ಅಭಿಯೋಜನೆಗೊಳಿಸಲು ಈ ಮೂಲಕ ಮಂಜೂರಾತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮಸಂಖ್ಯೆ (7)ರ ಪತ್ರದಲ್ಲಿ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ರವರು ಸರ್ಕಾರಕ್ಕೆ ಪತ್ರ ಬರೆದು ಸರ್ಕಾರಿ ಆದೇಶದಲ್ಲಿ ಸಿ.ಜೆ. ಕೃಷ್ಣಕುಮಾರ್, ತಹಶೀಲ್ದಾರ್, ತರೀಕೆರೆ ಮತ್ತು ರಮೇಶ್, ಭೂಮಾಪಕರು, ತಾಲ್ಲೂಕು ಕಛೇರಿ, ತರೀಕೆರೆ ಇಬ್ಬರು ಆರೋಪಿತರುಗಳನ್ನು ಅಭಿಯೋಜನೆಗೆ ಒಳಪಡಿಸಲು ಆದೇಶ ಹೊರಡಿಸಲಾಗಿದ್ದು ಆರೋಪಿ ಪಿ.ರಮೇಶ್, ಭೂಮಾಪಕರು ಅವರ ಸಕ್ಷಮ ಪ್ರಾಧಿಕಾರಿಗಳಾದ ಆಯುಕ್ತರು, ಭೂ ಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳು ಅವರು ಅಭಿಯೋಜನಾ ಮಂಜೂರಾತಿ ಆದೇಶ ಹೊರಡಿಸಲು ಪತ್ರ ಬರೆಯಲಾಗಿದೆ ಎಂದು ಸರ್ಕಾರದಿಂದ ಆರೋಪಿ ಸಿ.ಜೆ. ಕೃಷ್ಣಕುಮಾರ್, ತಹಶೀಲ್ದಾರ್ ಅವರನ್ನು ಅಭಿಯೋಜನೆಗೊಳಪಡಿಸಲು ಮಾತ್ರ ಪರಿಷ್ಕೃತ ಅಭಿಯೋಜನಾ ಮಂಜೂರಾತಿ ಆದೇಶವನ್ನು ಹೊರಡಿಸಲು ಕೋರಿರುತ್ತಾರೆ.

ತನಿಖಾ ವರದಿಯಲ್ಲಿನ ಶಿಫಾರಸ್ಸನ್ನು ಪರಿಶೀಲಿಸಿದ ಸರ್ಕಾರವು ಈ ಪ್ರಕರಣದಲ್ಲಿ ಆರೋಪಿತರೆಂದು ಹೇಳಲಾಗಿರುವ ಸಿ.ಜೆ. ಕೃಷ್ಣಕುಮಾರ್, ಹಿಂದಿನ ತಹಶೀಲ್ದಾರ್ ತರೀಕೆರೆ, ಪ್ರಸ್ತುತ ತಹಶೀಲ್ದಾರ್, ಜಿಲ್ಲಾ ನಗರಾಭಿವೃದ್ಧಿ ಕೋಶ, ದಾವಣಗೆರೆ ಅವರು ಅಪರಾಧ ಎಸಗಿರುವುದು ಮೇಲ್ನೋಟಕ್ಕೆ ಸರ್ಕಾರಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಆದ್ದರಿಂದ ಅವರನ್ನು ಲಂಚವಿರೋಧ ಕಾಯ್ದೆ 1988ರ ಅನ್ವಯ ಕಲಂ7 ಮತ್ತು 13(1)(ಡಿ) ಸಹವಾಚನ ಕಲಂ 13(2) ರಡಿಯಲ್ಲಿ ಅಭಿಯೋಜನೆಗೊಳಪಡಿಸುವುದು ಅವಶ್ಯವೆಂದು ಸರ್ಕಾರ ಮನಗಂಡಿದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತರನ್ನು ಕೆಲಸದಿಂದ ತೆಗೆದುಹಾಕಲು ಅಧಿಕಾರವುಳ್ಳದ್ದಾಗಿರುತ್ತದೆ. ಆದ್ದರಿಂದ ಆಪಾದಿತರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10(1) (ಎ) ಮತ್ತು 13(3)ರ ಪ್ರಕಾರ ಆಪಾದಿತ ಸಾರ್ವಜನಿಕ ಅಧಿಕಾರಿ ಸಿ.ಜೆ. ಕೃಷ್ಣಕುಮಾರ್, ಹಿಂದಿನ ತಹಶೀಲ್ದಾರ್ ತರೀಕೆರೆ ಪ್ರಸ್ತುತ ತಹಶೀಲ್ದಾರ್, ಜಿಲ್ಲಾ ನಗರಾಭಿವೃದ್ಧಿ ಕೋಶ, ದಾವಣಗೆರೆ ಅವರು ಕಲಂ 7 ಮತ್ತು 13(1) (ಡಿ) ಸಹವಾಚನ ಕಲಂ 13(2) ರಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 24 ಎಡಿಇ 2011, ದಿನಾಂಕ: 03.09.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 24 ಎಡಿಇ 2011, ದಿನಾಂಕ: 12.07.2012ರ ಆದೇಶವನ್ನು ಹಿಂಪಡೆಯಲಾಗಿದೆ. ಹಾಗೂ ಆರೋಪಿಯಾದ ಸಿ.ಜೆ. ಕೃಷ್ಣಕುಮಾರ್, ಹಿಂದಿನ ತಹಶೀಲ್ದಾರ್ ತರೀಕೆರೆ ತಹಶೀಲ್ದಾರ್, ಜಿಲ್ಲಾ ನಗರಾಭಿವೃದ್ಧಿ ಕೋಶ, ದಾವಣಗೆರೆ ಅವರನ್ನು ಹುದ್ದೆಯಿಂದ ತೆಗೆದುಹಾಕುವ ಅಭಿಯೋಜನೆ ಮಾಡುವ ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಸಿ.ಜೆ. ಕೃಷ್ಣಕುಮಾರ್, ಹಿಂದಿನ ತಹಶೀಲ್ದಾರ್ ತರೀಕೆರೆ, ಜಿಲ್ಲಾ ನಗರಾಭಿವೃದ್ಧಿ ಕೋಶ, ದಾವಣಗೆರೆ ಅವರನ್ನು ಭ್ರಷ್ಟಾಚಾರ ಪ್ರತಿಬಂಧಕ ಕಾಯಿದೆಯ 1988ರ ಕಲಂ 7 ಮತ್ತು 13(1)(ಡಿ) ಸಹವಾಚನ ಕಲಂ 13(2) ರ ಪ್ರಕಾರ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಭ್ರಷ್ಟಾಚಾರ ನಿಯಂತ್ರಣ ಕಾಯಿದೆ 1988ರ ಕಲಂ 19(1) (ಬಿ) ರನ್ವಯ ಅಭಿಯೋಜನೆಗೊಳಿಸಲು ಈ ಮೂಲಕ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಕರ್ನಾಟಕ ಸರ್ಕಾರದ (ಕಾರ್ಯಪಾಲಕ ನಿರ್ವಹಣೆ ನಿಯಮಗಳು 1977ರ ನಿಯಮ 18 ಮತ್ತು 19(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ನನ್ನ ಕಛೇರಿಯ ಮೊಹರು ಮತ್ತು ನನ್ನ ಸಹಿಯ ಅಡಿಯಲ್ಲಿ ಈ ದಿನ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

P.R - 2096

ಎಂ.ಕೆ. ಧರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು–3)

ಕಂದಾಯ ಸಚಿವಾಲಯ

ವಿಷಯ : ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ದೊಡ್ಡಬೂದಿಹಾಳ ಗ್ರಾಮದ ಸರ್ವೆ ನಂ. 112ರಲ್ಲಿ 10–20 ಎಕರೆ ಜಮೀನನ್ನು ದಾವಣಗೆರೆ ಮಹಾನಗರ ಪಾಲಿಕೆಗೆ ಹಸ್ತಾಂತರಿಸುವ ಬಗ್ಗೆ.

ಓದಲಾಗಿದೆ : (1) ಪತ್ರ ಸಂಖ್ಯೆ: ಎಲ್‌ಎನ್‌ಡಿ/ಸಿಆರ್/5/2011–12 ದಿ:21/10/2011.

(2) ಅ.ಟಿ. ಸಂಖ್ಯೆ: ನಅಇ19ಎಸಿಡಿ 2012 ದಿನಾಂಕ:7–2–2012.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ಪತ್ರದಲ್ಲಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಇವರು ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ದೊಡ್ಡಬೂದಿಹಾಳ ಗ್ರಾಮದ ಸರ್ವೆ ನಂ.112 ರಲ್ಲಿ 10–20 ಎಕರೆ ಸರ್ಕಾರಿ ಜಮೀನನ್ನು ದಾವಣಗೆರೆ ನಗರದ ಪೌರ ಕಾರ್ಮಿಕರಿಗೆ ಮನೆಗಳನ್ನು ನಿರ್ಮಿಸುವ ಸಲುವಾಗಿ ಜಮೀನು ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಜಮೀನು ಗೋಮಾಳ ಜಮೀನೆಂದು ವರ್ಗೀಕೃತವಾಗಿದ್ದು ನಗರ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಅಂತಹ ಗೋಮಾಳ ಜಮೀನು ಒಟ್ಟು 61.12 ಎಕರೆ ಇದ್ದು ಅದರಲ್ಲಿ 45.33 ಎಕರೆ ಭೂಮಿಯನ್ನು ವಿವಿಧ ಉದ್ದೇಶಗಳಿಗಾಗಿ ಹಂಚಿಕೆ ಮಾಡಲಾಗಿದೆ. ಉಲ್ಲೇಖಿತ ಸರ್ವೆ ನಂಬರ್‌ನಲ್ಲಿ 10–20 ಎಕರೆ ಬಾಕಿ ಉಳಿದಿರುತ್ತದೆ. ಈ ಜಮೀನು ಗೋಮಾಳದ ಲಕ್ಷಣಗಳನ್ನು ಕಳೆದಕೊಂಡಿದ್ದು, ಮನೆಗಳ ನಿರ್ಮಾಣಕ್ಕೆ ಯೋಗ್ಯವಾಗಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 37 ಎಲ್‌ಜಿಪಿ 2002 ದಿನಾಂಕ: 23–04–2005ರ ಪ್ರಕಾರ ನಗರ ಪಾಲಿಕೆ ವ್ಯಾಪ್ತಿಯೊಳಗಿನ ಸರ್ಕಾರಿ ಜಮೀನುಗಳನ್ನು ಯಾವುದೇ ಖಾಸಗಿ ವ್ಯಕ್ತಿ ಅಥವಾ ಖಾಸಗಿ ಸಂಸ್ಥೆಗೆ ಮಂಜೂರು ಮಾಡತಕ್ಕದಲ್ಲ. ಆದರೆ, ಅಂತಹ ಜಮೀನನ್ನು ಸಾರ್ವಜನಿಕ ಅಥವಾ ಸರ್ಕಾರದ ಉದ್ದೇಶಗಳಿಗೆ, ಬೆಳೆಯುತ್ತಿರುವ ನಗರ ಅಥವಾ ಪಟ್ಟಣ ಪ್ರದೇಶಗಳ ಅಭಿವೃದ್ಧಿಗೆ ಕಾಯ್ದಿರಿಸಲು ಅವಕಾಶವಿರುತ್ತದೆ.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 99 ಎಲ್‌ಜಿಸಿ 2011 ಬೆಂಗಳೂರು, ದಿನಾಂಕ: 03–09–2012

ಇದೊಂದು ವಿಶೇಷ ಪ್ರಕರಣವನ್ನಾಗಿ ಪರಿಗಣಿಸಿ, ದಾವಣಗೆರೆ ತಾಲ್ಲೂಕು, ದೊಡ್ಡ ಬೂದಿಹಾಳ ಗ್ರಾಮದ ಸರ್ವೆ ನಂ. 112 ರಲ್ಲಿನ 10–20 ಎಕರೆ ಗೋಮಾಳ ಜಮೀನನ್ನು ಕರ್ನಾಟಕ ಭೂ ಕಂದಾಯ ನಿಯಮಗಳ 1966 ನಿಯಮ 97(4) ರನ್ವಯ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳ 1969ರ ನಿಯಮ 20ರನ್ವಯ ಮಾರುಕಟ್ಟೆ ಬೆಲೆಯ ಶೇ. 50 ರಷ್ಟು ಮೊತ್ತ ವಿಧಿಸಿ, ಆ ಮೊತ್ತವನ್ನು ದಾವಣಗೆರೆ ನಗರ ಪಾಲಿಕೆ ಇವರಿಗೆ ಪಾವತಿಸುವ ಷರತ್ತಿಗೊಳಪಟ್ಟು ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ಮನೆಗಳನ್ನು ನಿರ್ಮಿಸುವ ಸಲುವಾಗಿ ಸದರಿ ಭೂಮಿಯನ್ನು ದಾವಣಗೆರೆ ಮಹಾನಗರ ಪಾಲಿಕೆ ಇವರಿಗೆ ಹಸ್ತಾಂತರಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಇದಕ್ಕೆ ಆರ್ಥಿಕ ಇಲಾಖೆ ಸಹಮತಿಯನ್ನು ಟಿಪ್ಪಣಿ ಸಂಖ್ಯೆ: ಎಫ್‌ಡಿ 383 ವೆಚ್ಚ 7/2012 ದಿನಾಂಕ: 24–05–2012 ರಲ್ಲಿ ಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್. ಜೆ. ಲಕ್ಷ್ಮೀನಾರಾಯಣ

P.R - 2156

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂ ಮಂಜೂರಾತಿ–3)

ಸಾರಿಗೆ ಸಚಿವಾಲಯ

ವಿಷಯ : ಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಸಿಬ್ಬಂದಿ ಹುದ್ದೆಗಳ ಉನ್ನತೀಕರಣ ಕುರಿತು ಆದೇಶ.

ಓದಲಾಗಿದೆ : ಸಾರಿಗೆ ಆಯುಕ್ತರ ಪತ್ರ ಸಂಖ್ಯೆ ಸಾಆ/ಸಿಬ್ಬಂದಿ–2/ವೈವ–30/09–10, ದಿನಾಂಕ:22–05–2012, ದಿ: 28–05–2012 ಮತ್ತು 26–06–2012.

ಪ್ರಸ್ತಾವನೆ :

ಮೇಲೆ ಓದಲಾದ ಸಾರಿಗೆ ಆಯುಕ್ತರ ಪತ್ರಗಳಲ್ಲಿ ಸಾರಿಗೆ ಇಲಾಖೆಯು ರಾಜಸ್ವ ವಸೂಲಾತಿಯಲ್ಲಿ ಅಗ್ರ ಸ್ಥಾನದಲ್ಲಿದ್ದು, ಸಾರ್ವಜನಿಕ ಸೇವೆಗಳಾದ ಚಾಲನಾ ಅನುಜ್ಞಾ ಪತ್ರ ವಿತರಣೆ, ಅರ್ಹತಾ ಪ್ರಮಾಣ ಪತ್ರ ವಿತರಣೆ, ಅಪಘಾತ ತಪಾಸಣೆ, ಹೊಸ ವಾಹನಗಳ ನೋಂದಣಿ ಕಾರ್ಯಗಳನ್ನು ಕಾರ್ಯನಿರ್ವಾಹಕ ಸಿಬ್ಬಂದಿ ನಿರ್ವಹಿಸುತ್ತಿದ್ದು, ಹಲವು ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಹಿರಿಯ ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳು ಕಡಿಮೆಯಿರುತ್ತದೆ. ಸಾರಿಗೆ ಇಲಾಖೆಯ ಕಾರ್ಯವ್ಯಾಪ್ತಿಯು ವಿಸ್ತಾರಗೊಳ್ಳುತ್ತಿರುವುದರಿಂದ ಪ್ರವರ್ತನ ಕಾರ್ಯ ಚುರುಕುಗೊಳಿಸುವ ಉದ್ದೇಶದಿಂದ ಕೆಲವು ಕಛೇರಿಗಳಿಗೆ ಹೆಚ್ಚಿನ ಮೋಟಾರು ವಾಹನ ನಿರೀಕ್ಷಕರ ಸೇವೆಯನ್ನು ಒದಗಿಸುವುದು ಅವಶ್ಯವಾಗಿರುವ ಹಿನ್ನೆಲೆಯಲ್ಲಿ ಸಾರಿಗೆ ಇಲಾಖೆಯಲ್ಲಿರುವ 31 ಮೋಟಾರು ವಾಹನ ನಿರೀಕ್ಷಕರ ಖಾಲಿ ಹುದ್ದೆಗಳನ್ನು ಹಿರಿಯ ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳನ್ನು ಉನ್ನತೀಕರಿಸಿ, ಸರ್ಕಾರದ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಾರಿಇ 116 ಸಾಇಸೇ 2012, ಬೆಂಗಳೂರು ದಿನಾಂಕ: 01–10–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಾರಿಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ಪ್ರಕ್ರಿಯೆ ಕೈಗೊಳ್ಳುವ ಷರತ್ತಿಗೊಳಪಟ್ಟು, ಸಾರಿಗೆ ಇಲಾಖೆಯಲ್ಲಿರುವ ಮೋಟಾರು ವಾಹನ ನಿರೀಕ್ಷಕ ವೃಂದದ 31 ಹುದ್ದೆಗಳನ್ನು ಹಿರಿಯ ಮೋಟಾರು ವಾಹನ ನಿರೀಕ್ಷಕ ಹುದ್ದೆಗಳನ್ನಾಗಿ ಉನ್ನತೀಕರಿಸಲು ಸರ್ಕಾರವು ಮಂಜೂರಾತಿ ನೀಡಲಾಗಿದೆ. ಈ ಉನ್ನತೀಕರಣದಿಂದಾಗಿ, ಇಲಾಖೆಯಲ್ಲಿನ ಮೋಟಾರು ವಾಹನ ನಿರೀಕ್ಷಕ ಹಾಗೂ ಹಿರಿಯ ಮೋಟಾರು ವಾಹನ ನಿರೀಕ್ಷಕ ವೃಂದಬಲ ಈ ಕೆಳಕಂಡಂತೆ ಇರುತ್ತದೆ.

ಕ್ರ.ಸ.	ಹುದ್ದೆಯ ಪದನಾಮ	ಪ್ರಸ್ತುತ ವೃಂದಬಲ	ಉನ್ನತೀಕರಣದ ನಂತರದ ವೃಂದಬಲ
1	ಹಿರಿಯ ಮೋಟಾರು ವಾಹನ ನಿರೀಕ್ಷಕ	164	195
2	ಮೋಟಾರು ವಾಹನ ನಿರೀಕ್ಷಕ	423	392

ಸಾರಿಗೆ ಆಯುಕ್ತರು ಮೇಲ್ಕಂಡಂತೆ ಉನ್ನತೀಕರಿಸಲಾದ 31 ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳನ್ನು ನಿರ್ದಿಷ್ಟವಾಗಿ ಗುರುತಿಸಿ ಅಧಿಕೃತ ಜ್ಞಾಪನ ಹೊರಡಿಸಲು ಕ್ರಮವಹಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ಇವರ ಟಿಪ್ಪಣಿ ಸಂಖ್ಯೆ: ಆಇ 634 ವೆಚ್ಚ–12/2012, ದಿ: 03–09–2012 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಬೀರೇಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಾರಿಗೆ ಇಲಾಖೆ

P.R - 2180

ಕಂದಾಯ ಸಚಿವಾಲಯ

ವಿಷಯ : ಕಲ್ಲುಗಣಿ ಘಟಕಗಳನ್ನು ಸುರಕ್ಷಿತ ವಲಯದಲ್ಲಿ ಸ್ಥಾಪಿಸುವ ಬಗ್ಗೆ

ಓದಲಾಗಿದೆ : ಸುತ್ತೋಲೆ ಸಂಖ್ಯೆ: ಸಿಐ 18 ಎಂಎಂಎನ್ 2012 ದಿನಾಂಕ: 04–10–2012

ಪ್ರಸ್ತಾವನೆ :

ಈ ಮೇಲೆ ಓದಲಾದ ಸುತ್ತೋಲೆಯಲ್ಲಿ ಸಂಬಂಧಪಟ್ಟ ಭಾಗ ಈ ಕೆಳಗಿನಂತಿದೆ:–

(v) " In respect of government land identified as 'safer zone' land should be allotted on lease basis, with the condition that the lease rental besed on market price as advised by the Revenue Department along with the development and infrastructure charges shall be payable by the licensees. Every stone crusher unit should be allotted at least 1 acre of land, with clear demarcation, and with clear approach."

ಅಂತಹ ಘಟಕಗಳಿಗೆ ಸರ್ಕಾರಿ ಭೂಮಿಯನ್ನು ಗುತ್ತಿಗೆ ಆಧಾರದ ಮೇಲೆ ನೀಡುವಲ್ಲಿ ವಿಧಿಸಬೇಕಾದ ಮೊತ್ತ ಕುರಿತಂತೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ,

ಸರ್ಕಾರದ ಆದೇಶ ಸಂಖ್ಯೆ: ಕಂಇ 705 ಎಲ್‌ಜಿಬಿ 2012 ಬೆಂಗಳೂರು, ದಿನಾಂಕ: 25.10.2012

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಈ ಜಿಲ್ಲೆಗಳಲ್ಲಿ ಕಲ್ಲುಗಣಿಗಾರಿಕೆಗೆ ಸರ್ಕಾರದ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ನೀಡುವಲ್ಲಿ ಭೂಮಿಯ ಮಾರ್ಗಸೂಚಿ ದರದ ಶೇಕಡ 20 ರಷ್ಟು ವಿಧಿಸಿ ಉಳಿದ ಜಿಲ್ಲೆಗಳಲ್ಲಿ ಶೇಕಡ 10ರಷ್ಟು ದರ ವಿಧಿಸಿ ಅಂತಹ ಮೊತ್ತವನ್ನು ಪ್ರತಿ ಎರಡು ವರ್ಷಕ್ಕೊಮ್ಮೆ ಶೇಕಡ 10 ರಷ್ಟು ಹೆಚ್ಚಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಉಮಾದೇವಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂ ಮಂಜೂರಾತಿ–1)

P.R - 2200

SOCIAL WELFARE SECRETARIAT

CIRCULAR

No. SWD 109 SAD 2012, Bangalore, Dated: 1st September 2012

Sub : Issue of Caste Certificate in the case of inter-caste marriages-reg.

Read : (1) Circular No. SWD 125 SAD 2007, dated: 15-10-2008.

The circular under Reference was issued stating that the case certificates be issued to the children mentioning the caste of his/her father only in the case of inter-caste marriages and it was issued based on the Judgement of the Hon'ble Supreme court in the case of Sri Puneeth Rai v/s Sri Dinesh Chowdari ((2003 8 SCC 2004, dt. 19.08.2003).

Now in the Judgement of the Hon'ble Supreme Court in the case of Ramesh bhai Dabhai Naika v/s State of Gujarath and others in civil appeal no. 654/2012, dated 18-01-2012, it is pronounced that" In an inter-caste marriage or a marriage between a Tribal and a Non-Tribal there may be a presumption that the child has the caste of the Father. This presumption may be stronger in the case where in the inter-caste marriage or a marriage between a tribal and non-tribal the husband belongs to a forward caste. But, by no means the presumption is conclusive or irreburttable and it is open to the child to the such marriage to lead evidence to show that he/she was brought-up by the Mother who belonged to the Scheduled Caste/Scheduled Tribe. By virtue of being the son of a forward caste father he did not have any advantageous start in life but on the contrary suffered the deprivations, indignities, humilities and handicaps like any other member of the community to which his/her mother belonged. Additionally, that he was always treated a member of the community to which her mother belonged not only by that community but by people outside the community as well"

In light of the above judgement, the circular quoted under reference-(1) is hereby modified to the extent that the child of inter-caste marriage wherein the mother belong to SC/ST may also lead evidence to show that he/she was brought-up by the Mother who belonged to the Scheduled Caste/Scheduled Tribe and he was always treated a member of the community to which her mother

belonged not only by that community but by people outside the community as well. Therefore the caste certificate issuing authorities and appellate and other authorities have to take decision on the basis of the evidence that might be lead by the concerned parties in such cases.

By Order and in the name of the Governor of Karnataka,

P.R - 2205

M. Jayamani
Under Secretary to Government-2 (I/c)
Social Welfare Department

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರ ಹುದ್ದೆಗೆ ನೇಮಕಗೊಂಡ ಡಾ॥ ಅಯಿವಾಮನ ಎನ್.ಆಚಾರ್ಯ ರವರಿಗೆ ಸಂಬಂಧಪಟ್ಟಂತೆ ಷರತ್ತು ಮತ್ತು ನಿಬಂಧನೆಗಳು.

ಓದಲಾಗಿದೆ: 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 123 ಇಪಿಸಿ 2012, ದಿನಾಂಕ 18–9–2012.

2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 177 ಶಿಸನೇ 2012, ದಿನಾಂಕ: 26.10.2012

3. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 102 ಶಿಸನೇ 2011, ದಿನಾಂಕ: 23.1.2012.

ಸರ್ಕಾರಿ ಆದೇಶ ಸಂಖ್ಯೆ: ಅಪಜೀ 123 ಇಪಿಸಿ 2012, ಬೆಂಗಳೂರು, ದಿನಾಂಕ, 22.11.2012

ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) ಕಾಯ್ದೆ, 1974ರ ಕಲಂ 5(9)– ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ವಿಷಯ ನಿರ್ವಹಣೆ ಕಾರ್ಯವಿಧಾನ) ನಿಯಮಗಳು ಹಾಗೂ ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) ನಿಯಮಗಳು, 1976ರಲ್ಲಿ ಓದಿಕೊಂಡಂತೆ– ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರ ಹುದ್ದೆಗೆ ನೇಮಕಗೊಂಡ ಡಾ॥ ಅಯಿವಾಮನ ಎನ್. ಆಚಾರ್ಯರವರಿಗೆ ಸಂಬಂಧಪಟ್ಟಂತೆ ಷರತ್ತು ಮತ್ತು ನಿಬಂಧನೆಗಳು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

(1) **ನೇಮಕಾತಿಯ ಕಾರ್ಯಾವಧಿ:–** ಡಾ॥ ಅಯಿ ವಾಮನ ಎನ್. ಆಚಾರ್ಯ, ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರ ಕಾರ್ಯಾವಧಿಯನ್ನು ಮೇಲೆ ಓದಲಾದ ಅಧಿಸೂಚನೆ (1)ರಲ್ಲಿ ನಿಗದಿಗೊಳಿಸಲಾಗಿರುತ್ತದೆ.

(2) **ವೇತನ ಮತ್ತು ಭತ್ಯೆಗಳು:–** ಮೇಲೆ ಓದಲಾದ ಅಧಿಸೂಚನೆ (2)ರಲ್ಲಿ ಸಂಪುಟ ಸಚಿವರ ಸ್ಥಾನಮಾನವನ್ನು ಹಾಲಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಗೆ ಪ್ರಧಾನ ಮಾಡಲಾಗಿರುವುದರಿಂದ ಸದರಿಯವರನ್ನು 1956ರ ಕರ್ನಾಟಕ ಸಚಿವರುಗಳ ವೇತನ ಮತ್ತು ಭತ್ಯೆಗಳ ಅಧಿನಿಯಮ ಹಾಗೂ ಸಂಬಂಧಪಟ್ಟ ನಿಯಮಾವಳಿಯನ್ವಯ ವೇತನ, ಭತ್ಯೆ ಇತ್ಯಾದಿಗಳನ್ನು ಕ್ರಮಗೊಳಿಸತಕ್ಕದ್ದು.

(3) **ಮನೆ ಬಾಡಿಗೆ:–** ಹಾಲಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರು ತಮ್ಮ ಅಧಿಕಾರಾವಧಿಯಲ್ಲಿ ಬೆಂಗಳೂರು ನಗರದಲ್ಲಿ ಒಂದು ಸುಸಜ್ಜಿತ ನಿವಾಸವನ್ನು ಹೊಂದಲು ಅಥವಾ ಸುಸಜ್ಜಿತ ನಿವಾಸದ ಬದಲಿಗೆ ಬೆಂಗಳೂರು ನಗರದಲ್ಲಿ ಮಾಸಿಕ ರೂ. 20,000 ಅಥವಾ ಇತರೆ ನಗರಗಳಲ್ಲಿ ಮಾಸಿಕ ರೂ. 15,000/– ಮನೆ ಬಾಡಿಗೆ ಭತ್ಯೆ ಪಡೆಯಲು ಅರ್ಹರಿರುತ್ತಾರೆ. ಲೋಕೋಪಯೋಗಿ ಇಲಾಖೆಯ ಮೌಲ್ಯಮಾಪನಕ್ಕೆ ಒಳಪಟ್ಟು ಬೆಂಗಳೂರು ನಗರದಲ್ಲಿ ಮಾಸಿಕ ರೂ. 40,000 ಹಾಗೂ ಇತರೆ ನಗರಗಳಲ್ಲಿ ಮಾಸಿಕ ರೂ. 20,000/– ಗರಿಷ್ಠ ಬಾಡಿಗೆಯನ್ನು ಪಡೆಯಬಹುದಾಗಿದೆ.

(4) **ವಾಹನ ಸೌಕರ್ಯ:–** ಹಾಲಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರು ಚಾಲಕರ ಸಮೇತ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 68 ಶಿವಾನೀ 2008, ದಿನಾಂಕ: 22.8.2008ರಲ್ಲಿ ನಿಗದಿಪಡಿಸಿರುವ ರೂ. 11.00 ಲಕ್ಷ ಆರ್ಥಿಕ ಮಿತಿಯೊಳಗೆ ವಾಹನವನ್ನು ಸಂಬಂಧಪಟ್ಟ ಆಡಳಿತ ಇಲಾಖೆಯಿಂದ ಆರ್ಥಿಕ ಇಲಾಖೆ ಅನುಮತಿಗೆ/ಸಹಮತಿಗೆ ಒಳಪಟ್ಟು ಖರೀದಿಸಬಹುದು. ವಾಹನದ ಮೇಲೆ ಕೆಂಪು ದೀಪವನ್ನು ಅಳವಡಿಸುವಂತಿಲ್ಲ. ಇವರು ಮುಖ್ಯ ಸ್ಥಾನದಲ್ಲಿ ಮಾಸಿಕ 550 ಲೀಟರ್‌ಗೆ ಸಮಾನವಾದ ಇಂಧನ ಮೊತ್ತವನ್ನು ವಾಹನ ಭತ್ಯೆಯನ್ನಾಗಿ ಪಡೆಯಲು ಅರ್ಹರಿರುತ್ತಾರೆ.

(5) **ಆಪ್ತ ಸಿಬ್ಬಂದಿ:–**

a)	ಆಪ್ತ ಸಹಾಯಕರು	–	1 ಹುದ್ದೆ
b)	ಗ್ರೂಪ್ 'ಸಿ'	–	2 ಹುದ್ದೆಗಳು
c)	ಗ್ರೂಪ್ 'ಡಿ'	–	2 ಹುದ್ದೆಗಳು
d)	ಚಾಲಕ	–	1 ಹುದ್ದೆ

ಈ ಹುದ್ದೆಗಳನ್ನು ನಿಯೋಜನೆ ಮೇಲೆ ತುಂಬತಕ್ಕದ್ದು. ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇಚ್ಛಿಸುವ ವ್ಯಕ್ತಿಗಳನ್ನು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಉದ್ದಿಮೆಗಳು ಅಥವಾ ಕೇಂದ್ರ ಸರ್ಕಾರ ಉದ್ದಿಮೆಗಳು ಅಥವಾ ಸ್ವಾಯತ್ತ ಸಂಸ್ಥೆಗಳು, ನಿಗಮ ಅಥವಾ ಸ್ಥಳೀಯ ಸಂಸ್ಥೆಗಳು ಇತ್ಯಾದಿಗಳಿಂದ ನಿಯೋಜನೆ ಮೂಲಕ ಪಡೆಯಬಹುದು. ಈ ನೇಮಕಾತಿಯ ಅಧ್ಯಕ್ಷರ ಅವಧಿಯೊಳಗೆ ಮುಕ್ತಾಯಗೊಳ್ಳುತ್ತದೆ.

ಮೇಲೆ ತಿಳಿಸಿರುವಂತೆ ಆಪ್ತ ಕಾರ್ಯದರ್ಶಿ ಹುದ್ದೆಯನ್ನು ಗ್ರೂಪ್–ಎ ಅಥವಾ ಗ್ರೂಪ್–ಬಿ ಶ್ರೇಣಿಯ ಅಧಿಕಾರಿಗಳನ್ನು ನಿಯೋಜನೆ ಮೂಲಕ ಭರ್ತಿ ಮಾಡಿಕೊಳ್ಳತಕ್ಕದ್ದು. ಉಳಿದ ಸಿಬ್ಬಂದಿ ಅಂದರೆ ಗ್ರೂಪ್–ಸಿ ಮತ್ತು ಗ್ರೂಪ್–ಡಿ ವರ್ಗದ ನೌಕರರನ್ನು ಆಡಳಿತ ಹಾಗೂ ಇನ್ನಿತರ ಇಲಾಖೆಗಳಲ್ಲಿ ಸೂಕ್ತ ಸಿಬ್ಬಂದಿ ಇಲ್ಲದಿದ್ದ ಪಕ್ಷದಲ್ಲಿ ಗುತ್ತಿಗೆ ಆಧಾರದ ಮೇಲೆ ಅಧ್ಯಕ್ಷರ ಕಾರ್ಯಾವಧಿವರೆಗೆ ಮಾತ್ರ ನೇಮಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯ ಉದ್ದಿಮೆಗಳ ಮಹೋದ್ಯಮದ ಮಾರ್ಗಸೂಚಿಗಳು (ಅಧ್ಯಕ್ಷರಿಗೆ ಆಪ್ತ ಸಿಬ್ಬಂದಿಗಳನ್ನು ನೀಡುವ ಬಗ್ಗೆ) ಅನ್ವಯಿಸುವುದಿಲ್ಲ. ಹಾಗೂ ಮೇಲೆ ನಿಗದಿಪಡಿಸುವ ಸಿಬ್ಬಂದಿ ಮಾದರಿಯು ಅನ್ವಯಿಸುತ್ತದೆ.

(6) **ದೂರವಾಣಿ:–** ಅಧಿಕೃತ ಉಪಯೋಗಕ್ಕಾಗಿ ಒಂದು ನಿವಾಸ ದೂರವಾಣಿಯನ್ನು ಅವರ ಸ್ವಂತ ಗೃಹದಲ್ಲಿ ಅಥವಾ ಬಾಡಿಗೆ ಮೇಲೆ ಪಡೆದ ನಿವಾಸದಲ್ಲಿ ಒದಗಿಸತಕ್ಕದ್ದು.

(7) **ಪ್ರವಾಸಭತ್ಯೆ ಮತ್ತು ದಿನಭತ್ಯೆ:–** ರಾಜ್ಯದ ಹೊರಗಡೆ ಪ್ರವಾಸವು ಸೇರಿದಂತೆ ಮಾಸಿಕ ಪ್ರವಾಸದ ಅವಧಿಯ 15 ದಿನಗಳಿಗೆ ಮೀರತಕ್ಕದ್ದಲ್ಲ. ರಾಜ್ಯದ ಹೊರಗಡೆ ಪ್ರವಾಸವನ್ನು ಅವಶ್ಯವಿದ್ದಲ್ಲಿ ಮಾತ್ರ ಕೈಗೊಳ್ಳತಕ್ಕದ್ದು ಹಾಗೂ ತಿಂಗಳಲ್ಲಿ ಒಂದು ಬಾರಿಗಿಂತ ಹೆಚ್ಚಾಗಿ ಕೈಗೊಳ್ಳತಕ್ಕದ್ದಲ್ಲ.

(8) **ವೈದ್ಯಕೀಯ ವೆಚ್ಚ:–** ಅಧ್ಯಕ್ಷರು ವೈದ್ಯಕೀಯ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.

(9) **ಇತರೆ:–** ಹಾಲಿ ಅಧ್ಯಕ್ಷರು ರಾಜ್ಯದ ಹೊರಗಡೆ ರಾಜ್ಯ ಅತಿಥಿ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.

(10) **ಕಛೇರಿ ಸ್ಥಳಾವಕಾಶ:–** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರಿಗೆ ಸ್ಥಳಾವಕಾಶವನ್ನು ಪೀಠೋಪಕರಣ, ಲೇಖನ ಸಾಮಗ್ರಿ ಯಂತ್ರೋಪಕರಣ ಮತ್ತು ಇತ್ಯಾದಿ ಸೌಲಭ್ಯಗಳನ್ನು ಒದಗಿಸುವುದು.

(11) **ನಿಯೋಜನೆಯ ಅವಧಿ:–** ಅಧ್ಯಕ್ಷರ ಹುದ್ದೆಗೆ ನೇಮಕಗೊಂಡ ಡಾ॥ ಅಯಿವಾಮನ ಎನ್. ಆಚಾರ್ಯ ರವರಿಗೆ ಸಂಬಂಧಪಟ್ಟಂತೆ ಷರತ್ತುಗಳು ಮೂರು ವರ್ಷದವರೆಗೂ ಅಥವಾ ಮುಂದಿನ ಆದೇಶ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

ಈ ಸಂಬಂಧದ ವೆಚ್ಚವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪೂರ್ಣವಾಗಿ ತನ್ನ ಸಂಪನ್ಮೂಲಗಳಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ820 ವೆಚ್ಚ–12/2011, ದಿನಾಂಕ: 1.12.2011 ರಲ್ಲಿ ನೀಡಿರುವ ಸಹಮತಿಯನ್ವಯ ಮತ್ತು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 102 ಶಿಸನೇ 2011, ದಿನಾಂಕ: 23.1.2012ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಹೆಚ್. ಅನಸೂಯಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

(ಪರಿಸರ ಮತ್ತು ಜೀವಿಶಾಸ್ತ್ರ)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

P.R - 2215

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ಕಾನೂನು ಪದವೀಧರರಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ: ಲಾ: 86 ಎಲ್ಎಜಿ 2010 (ಭಾ), ದಿನಾಂಕ: 08–06–2012.
2) ಸರ್ಕಾರಿ ಆದೇಶ ಸಂಖ್ಯೆ: ಲಾ: 93 ಎಲ್ಎಜಿ 2012, ದಿನಾಂಕ: 29–05–2012.
3) ಸರ್ಕಾರಿ ಆದೇಶ ಸಂಖ್ಯೆ: ಲಾ: 134 ಎಲ್ಎಜಿ 2012, ದಿನಾಂಕ: 06–07–2012
4) ಸರ್ಕಾರಿ ಆದೇಶ ಸಂಖ್ಯೆ: ಲಾ: 87 ಎಲ್ಸಿಇ2012, ದಿನಾಂಕ: 16–08–2012.
5) ವಿವಿಧ ಜಿಲ್ಲಾಧಿಕಾರಿಗಳಿಂದ ಅನುದಾನ ಕೋರಿ ಬರೆದಿರುವ ಪತ್ರಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ–(1)ರ ಸರ್ಕಾರದ ಆದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪುರುಷ ಹಾಗೂ ಮಹಿಳಾ ವಕೀಲರುಗಳಿಗೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಕಾನೂನು ಪದವೀಧರರಿಗೆ ನೀಡುತ್ತಿರುವ ಪ್ರೋತ್ಸಾಹಧನ ಕಾರ್ಯಕ್ರಮವನ್ನು ಅದೇ ಇಲಾಖೆಯಲ್ಲಿಯೇ ಮುಂದುವರೆಸಲು ಹಾಗೂ ಇತರೆ ಎಲ್ಲಾ ವರ್ಗದ ಪುರುಷ ಮತ್ತು ಮಹಿಳಾ ಕಾನೂನು ಪದವೀಧರರಿಗೆ ಕಾನೂನು ಇಲಾಖೆಯಡಿ ಪೂಲ್ ಮಾಡಿ ಜಿಲ್ಲಾಧಿಕಾರಿಗಳ ಮುಖಾಂತರ ಪ್ರೋತ್ಸಾಹಧನ ನೀಡುವ ಯೋಜನೆಯನ್ನು 2012–13ನೇ ಸಾಲಿನಲ್ಲಿ ಮುಂದುವರೆಸಿ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ನಂತರ ಮೇಲೆ ಓದಲಾದ ಕ್ರಮ ಸಂಖ್ಯೆ:(2)ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ Law Clerck-cum-Research Assistant ಗಳಿಗೆ ಮಾಸಿಕ ಗೌರವ ಧನ ಪಾವತಿಸಲು ರೂ. 20,00,000–00 (ಇಪ್ಪತ್ತು ಲಕ್ಷಗಳು) ಗಳನ್ನು ಮಾತ್ರ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ಸರ್ಕಾರಿ ಆದೇಶದಲ್ಲಿ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ವಿತರಿಸಲು ವಿವಿಧ ಜಿಲ್ಲಾಧಿಕಾರಿಗಳಿಗೆ ರೂ. 130,00,000.00 (ನೂರ ಮೂವತ್ತು ಲಕ್ಷಗಳು) ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4)ರ ಸರ್ಕಾರಿ ಆದೇಶದಲ್ಲಿ ಬೆಂಗಳೂರು ನಗರದಲ್ಲಿ ಮಕ್ಕಳ ವಿಶೇಷ ನ್ಯಾಯಾಲಯ ಸ್ಥಾಪಿಸಲು ರೂ. 25,00,000.00 (ಇಪ್ಪತ್ತೈದು ಲಕ್ಷ)ಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (5)ರಲ್ಲಿ ವಿವಿಧ ಜಿಲ್ಲಾಧಿಕಾರಿಗಳು ಅಂದರೆ ರಾಮನಗರ, ಮೈಸೂರು, ದಾವಣಗೆರೆ, ಮಂಡ್ಯ, ಬಾಗಲಕೋಟೆ, ಬಳ್ಳಾರಿ, ಗದಗ, ರಾಯಚೂರು, ಕೋಲಾರ, ಯಾದಗಿರಿ, ಕೊಪ್ಪಳ, ಬೀದರ್, ಬಿಜಾಪುರ, ಬೆಳಗಾವಿ, ಗುಲಬರ್ಗಾ ಮತ್ತು ಹಾವೇರಿ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಕೋರಿಕೆಗಳನ್ನು ಸಲ್ಲಿಸುತ್ತಾ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹ ಧನ ವಿತರಿಸಲು ಬಾಕಿ ಇರುವ ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಆ ಮೇರೆಗೆ ಪರಿಶೀಲಿಸಿ ಸರ್ಕಾರ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಲಾ 134 ಎಲ್ಎಜಿ 2012, ಬೆಂಗಳೂರು, ದಿನಾಂಕ: 17–12/2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕಾನೂನು ಪದವಿಯನ್ನು ಪಡೆದು ವಕೀಲ ವೃತ್ತಿಯನ್ನು ಆರಂಭಿಸುವ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹ ಧನ ವಿತರಿಸುವ ಸಲುವಾಗಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವಂತೆ ವಿವಿಧ ಜಿಲ್ಲೆಗಳಿಗೆ ಒಟ್ಟು ₹ 125.00 ಲಕ್ಷಗಳನ್ನು (ಒಂದು ನೂರಾ ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ) ಗಳ ಅನುದಾನವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಬಿಡುಗಡೆ ಮಾಡಲು ಸರ್ಕಾರವು ಮಂಜೂರಾತಿ ನೀಡಿದೆ.

ಅ) ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಆ ಉದ್ದೇಶಕ್ಕಾಗಿ ಮಾತ್ರ ಬಳಸತಕ್ಕದ್ದು ಹಾಗೂ ಸರ್ಕಾರದ ಆದೇಶ ಸಂಖ್ಯೆ: ಲಾ 86 ಎಲ್ಎಜಿ 2010 (ಭಾ), ದಿನಾಂಕ: 08–06–2012ರಲ್ಲಿ ನಿಗದಿಪಡಿಸಿರುವ ರೂಪುರೇಷೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಆ) ಈ ಅನುದಾನವನ್ನು ಬಳಸಿಕೊಂಡ ಬಗ್ಗೆ ಉಪಯುಕ್ತತಾ ಪ್ರಮಾಣ ಪತ್ರವನ್ನು ತ್ವರಿತವಾಗಿ ಸಲ್ಲಿಸುವುದು.

ಈ ಸಂಬಂಧದ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2014–00–102–0–06–117 (ಯೋಜನೆ) ಅಡಿ ಭರಿಸುವುದು.

ಈ ಆದೇಶವನ್ನು ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕಾಧಿಕಾರಗಳನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಪಿ. ನಾಗರಾಜ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ: ಲಾ 134 ಎಲ್ಎಜಿ 2012, ದಿನಾಂಕ: 17–12–2012

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಕ್ರಮ 2012–13ನೇ ಸಾಲಿಗೆ ಬಿಡುಗಡೆ ಮಾಡಬೇಕಾದ ಅನುದಾನ (ರೂ. ಲಕ್ಷಗಳಲ್ಲಿ)
1.	ರಾಮನಗರ	3,00,000
2.	ಮೈಸೂರು	10,00,000
3.	ದಾವಣಗೆರೆ	7,00,000
4.	ಮಂಡ್ಯ	9,00,000
5.	ಬಾಗಲಕೋಟೆ	5,00,000
6.	ಬಳ್ಳಾರಿ	10,00,000
7.	ಗದಗ	1,00,000
8.	ರಾಯಚೂರು	10,00,000
9.	ಕೋಲಾರ	10,00,000
10.	ಯಾದಗಿರಿ	8,00,000
11.	ಕೊಪ್ಪಳ	7,00,000
12.	ಬೀದರ್	8,00,000
13.	ಬಿಜಾಪುರ	5,00,000
14.	ಬೆಳಗಾವಿ	12,00,000
15.	ಗುಲ್ಬರ್ಗಾ	7,00,000
16.	ಹಾವೇರಿ	13,00,000
	ಒಟ್ಟು	**1,25,00,000**

ಎಂ.ಪಿ. ನಾಗರಾಜ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

P.R - 2288

ENERGY SECRETARIAT

Sub : Procuring 1.5 MTPA of imported coal by M/s. Udupi Power Corporation Limited (UPCL) for Unit-II.

Read : Power Company of Karnataka Limited Ir.No.PCKL/A1/12/2005-06 dated 27.02.2012, 23.05.2012, 03.07.2012 and 09.07.2012.

Preamble:

1. The Coal Committee constituted by Government of Karnataka (GoK) took cognizance of low – ash percentage of 4.75% maximum stipulated by Ministry of Environment and Forests, Government of India, recommended procurement of coal with GCV of 6200 kcal/kg [PT Indominco (0.5 MTPA) with ash content of 5% & Glencore (0.5 MTPA) with ash content of 8.25%] so as to enable blending with 5100 kcal/kg of M/s. PT Adaro (having very low ash content of 1%).
2. However, the Gross Calorific Value (GCV) of the PT Adaro coal was only 5100 kcal/kg. Consequently, in order to achieve the design GCV of 5900 kcal/kg, required for the Dongfang BTG procured by UPCL, blending with high calorific coal of 6200 kcal/kg was considered essential for balance quantum of 1.435 MTPA (against the total requirement of 3,635 MTPA, 2.2 MTPA has been contracted).
3. Considering the above facts and based on the recommendations of the Coal Committee constituted by Government of Karnataka, Government vide order No. EN 45 PPC 2010 dated 3.9.2010 and 29.9.2010 has accorded approval indicating amongst other things to invite Long Term Tender based on the following specifications by M/s. Udupi Power Corporation Limited:

Sl.No.	Quantity	1,635 MTPA
a)	Gross Calorific Value (ARB)	6200 Kcal/kg
b)	Ash (ADB)	4.75% (maximum)
c)	Moisture (ARB)	10% to 15.5% with optimum of 15.5%.
d)	Sulphur (ADB)	0.8% (Maximum)

4. Ministry of Environment & Forests, Govt. of India vide letter dated 1.9.2011 increased the ash limit from 4.75% to 12%. Pursuant to this, Power Company of Karnataka Limited vide letters read at above had requested to modify the Government Order dated 29.9.2010 for procurement of 1.5 MTPA of coal required for 2nd Unit of UPCL for a period upto December 2014 co-terminus with the current fuel supply contracts with M/s. P.T. Adaro & M/s. PT Indominco upto December 2014 with the following specifications:

Sl.No.	Quantity	1.5 MTPA
i)	Gross Calorific Value (ARB)	5900 Kcal/kg to 6200 Kcal/kg
ii)	Ash (ADB)	Maximum 12%
iii)	Moisture (ARB)	Maximum 12%.
iv)	Sulphur (ADB)	Maximum 0.8%

The above proposal has been examined by Government and hence this order:

Government Order No.EN 45 PPC 2010, Bangalore, Dated: 1st September 2012

In Partial modification of the Government Order No. EN 45 PPC 2010 dated 29.09.2010, Government accords approval:

a) for procurement of 1.5 MTPA of Imported Coal for Unit-II of Udupi Power Corporation Limited with the following specifications for a period upto December 2014:

Sl.No.	Quantity	1.5 MTPA
a.	Gross Calorific Value (ARB)	5900 Kcal/kg to 6200 Kcal/kg
b.	Ash (ADB)	Maximum 12%
c.	Moisture (ARB)	Maximum 12%.
d.	Sulphur (ADB)	Maximum 0.8%

b) M/s. Udupi Power Corporation Limited (UPCL) to initiate action in Second Quarter (Q2) of Financial Year 2013-14 for inviting fresh tender for procuring entire quantum of 3,635 MTA required for operation of 1200 MW having GCV range of 5350 Kcal/kg to 6250 Kcal/kg for a period of 12 years or less duly considering the market conditions beyond December 2014 for avoiding multiple contracts.

By Order and in the name of the Governor of Karnataka,

Kousalya

Under Secretary to Government

Energy Department

P.R - 2291

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ:– ಒಂದು ಬಾರಿಯ ಹೆಚ್ಚುವರಿ ಕೇಂದ್ರ ಸಹಾಯ (One Time Additional Central Assistance (OTACA) ದಡಿ ಮೊಬೈಲ್ ಆಡಳಿತ (Mobile Governance under innovative project) ಯೋಜನೆಯನ್ನು ಜಾರಿಗೊಳಿಸಲು ಏಕೀಕೃತ ಮೊಬೈಲ್ ಸೇವಾ ವೇದಿಕೆಯನ್ನು (Unified Mobile Service Delivery Platform) ಸ್ಥಾಪಿಸುವ ಮತ್ತು ಅದರ ಬಳಕೆಯ ಬಗ್ಗೆ ಉಸ್ತುವಾರಿ ಮಾಡಲು ಚಾಲನಾ ಸಮಿತಿ (Steering Committee)ಯ ರಚನೆ ಮಾಡುವ ಕುರಿತು.

ಓದಲಾಗಿದೆ:
1. ದಿನಾಂಕ: 31–03–2012ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ1 ಎಸಿಎ 2011.
2. ದಿನಾಂಕ: 09–04–2012ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 3 ಯೋಜನೆ 2012.
3. ದಿನಾಂಕ: 14ನೇ ಡಿಸೆಂಬರ್ 2012ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 2 ಸಿಇಜಿ 2011 (ಭಾಗ–1)
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ ಸಂಖ್ಯೆ: ಸಿಆಸುಇ 158 ನಾಸೇಖಾ 2012, ದಿನಾಂಕ: 22–09– 2012.
5. ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಇ–ಆಡಳಿತ ಕೇಂದ್ರ, ಬೆಂಗಳೂರು ಇವರ ದಿನಾಂಕ: 9–11–2012ರ ಟಿಪ್ಪಣಿ ಸಂಖ್ಯೆ: CEG/65/SeMT/2012.

ಪ್ರಸ್ತಾವನೆ

1. 2011–12ನೇ ಸಾಲಿನ ಒಂದು ಬಾರಿಯ ಹೆಚ್ಚುವರಿ ಕೇಂದ್ರ ಸಹಾಯ (One Time Additional Central Assistance (OTACA) ದಡಿ ಮೊಬೈಲ್ ಆಡಳಿತ (Mobile Governance under innovative project) ಯೋಜನೆಯನ್ನು ಜಾರಿಗೊಳಿಸಲು ಮೇಲೆ (1)ರಲ್ಲಿ ಓದಲಾದ ದಿನಾಂಕ: 31–03–2012ರ ಸರ್ಕಾರದ ಆದೇಶದನ್ವಯ ಸರ್ಕಾರದ ಮಂಜೂರಾತಿ ನೀಡಲಾಗಿದೆ.

2. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ)ಗೆ ಸಂಬಂಧಿಸಿದ ಯೋಜನೆಗಳನ್ನು ದಿನಾಂಕ: 1–04–2012 ರಿಂದ ಜಾರಿಗೆ ಬರುವಂತೆ, 2012–13ನೇ ಸಾಲಿನ ಮುಂದುವರೆದ ಯೋಜನೆಗಳೆಂದು ಹಾಗೂ ಆ ಯೋಜನೆಗಳ ಅನುಷ್ಠಾನಕ್ಕಾಗಿ 2012–13ನೇ ಸಾಲಿನ ಲೆಕ್ಕ ಶೀರ್ಷಿಕೆ 3451–00–090–02–04–059 ವಿದ್ಯುನ್ಮಾನ ಆಡಳಿತ ಯೋಜನೆ ಇತರೆ ವೆಚ್ಚಗಳು (ಯೋಜನೆ) ಅಡಿಯಲ್ಲಿ ಒದಗಿಸಲಾದ ರೂ. 4500 ಲಕ್ಷ ವೆಚ್ಚಗಳ ಹಾಗೂ ಲೆಕ್ಕ ಶೀರ್ಷಿಕೆ 2070–00–800–0–04–125 (ಯೋಜನೆ) ಅಡಿಯಲ್ಲಿ ಒದಗಿಸಲಾದ ರೂ. 70 ಲಕ್ಷ ವೆಚ್ಚವನ್ನು ಭರಿಸಲು ಮೇಲೆ (2)ರಲ್ಲಿ ಓದಲಾದ ದಿನಾಂಕ: 9–04–2012ರ ಸರ್ಕಾರದ ಆದೇಶದನ್ವಯ ಸರ್ಕಾರದ ಮಂಜೂರಾತಿ ನೀಡಲಾಗಿದೆ. ಇದರಲ್ಲಿ ಒಂದು ಬಾರಿಯ ಹೆಚ್ಚುವರಿ ಕೇಂದ್ರ ಸಹಾಯ (One Time Additional Central Assistance (OTACA) ದಡಿ ಮೊಬೈಲ್ ಆಡಳಿತ (Moblie Governance under innovative project) ಯೋಜನೆ ಸಹ ಸೇರಿರುತ್ತದೆ.

3. ಮೇಲೆ (3) ರಲ್ಲಿ ಓದಲಾದ ದಿನಾಂಕ: 14–12–2012ರ ಸರ್ಕಾರದ ಆದೇಶದಲ್ಲಿ ಒಂದು ಬಾರಿಯ ಹೆಚ್ಚುವರಿ ಕೇಂದ್ರ ಸಹಾಯ (One Time Additional Central assistance (OTACA) ದಡಿ ಮೊಬೈಲ್ ಆಡಳಿತ (Mobile Governance under innovative project) ಯೋಜನೆಯನ್ನು ಜಾರಿಗೊಳಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ ಮತ್ತು ಅದರ ಅನುಷ್ಠಾನಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ)ಯ ವ್ಯಾಪ್ತಿಯಲ್ಲಿರುವ ಇ–ಆಡಳಿತ ಕೇಂದ್ರ (Center for e-Governance) ಕ್ಕೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

4. ಮೇಲೆ (4)ರಲ್ಲಿ ಓದಲಾದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳನ್ನು ಮೊಬೈಲ್ ಆಡಳಿತ ವ್ಯವಸ್ಥೆಯ ಬಗ್ಗೆ ಚರ್ಚಿಸಲಾಗಿ ಇ–ಆಡಳಿತ ಕೇಂದ್ರವು. ಕರ್ನಾಟಕ ಸರ್ಕಾರದ ಎಲ್ಲಾ ಇಲಾಖೆಗಳಿಗೆ ಹಾಗೂ ಸಂಸ್ಥೆಗಳ ಉಪಯೋಗಕ್ಕಾಗಿ ಮೊಬೈಲ್ ಆಡಳಿತ ವ್ಯವಸ್ಥೆಯನ್ನು ಒಂದೇ ವೇದಿಕೆಯಾಗಿ ನಿರ್ವಹಿಸಲು ಮೊಬೈಲ್ ಆಡಳಿತ ವ್ಯವಸ್ಥೆಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ಮಾಡಲು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಬೇಕೆಂದು ಮತ್ತು ಮಾರ್ಚ್ 2013ರೊಳಗೆ ಮೊಬೈಲ್ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ನಿರ್ಧರಿಸಲಾಗಿದೆ.

5. ಮೇಲೆ (5)ರಲ್ಲಿ ಓದಲಾದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಇ–ಆಡಳಿತ ಕೇಂದ್ರ, ಬೆಂಗಳೂರು ಇವರ ಟಿಪ್ಪಣಿಯಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಒಂದು ಬಾರಿಯ ಹೆಚ್ಚುವರಿ ಕೇಂದ್ರ ಸಹಾಯ (One Time additional Central Assistance…(OTACA) ದಡಿ ಮೊಬೈಲ್ ಆಡಳಿತ (Mobile Governance under innovative project) ಯೋಜನೆಯಡಿ ಏಕೀಕೃತ ಮೊಬೈಲ್ ಸೇವಾ ವೇದಿಕೆಯನ್ನು ಸ್ಥಾಪಿಸುವ ಬಗ್ಗೆ ಮತ್ತು ಸರ್ಕಾರದ ವಿವಿಧ ಇಲಾಖೆ/ಸಂಸ್ಥೆಗಳು ಅದನ್ನು ಬಳಸುವ ಕುರಿತಂತೆ ಉಸ್ತುವಾರಿ ಮಾಡಲು ಚಾಲನಾ ಸಮಿತಿ (Steering committee)ಯನ್ನು ರಚಿಸುವ ಬಗ್ಗೆ ಸರ್ಕಾರದ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ. ಹಾಗೂ ಮೊಬೈಲ್ ಆಡಳಿತ ವ್ಯವಸ್ಥೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೇಂದ್ರದ ಯೋಜನಾ ಆಯೋಗವು ರೂ. 10 ಕೋಟಿಗಳನ್ನು ನೀಡುವುದಾಗಿ ಭರವಸೆ ನೀಡಿದ್ದು ಈಗಾಗಲೇ ರೂ. 3 ಕೋಟಿಯನ್ನು ಬಿಡುಗಡೆ ಮಾಡಿರುವುದಾಗಿ ಸರ್ಕಾರದಲ್ಲಿ ಹಣ ಲಭ್ಯವಿದೆ ಎಂದು ತಿಳಿಸಿರುತ್ತಾರೆ.

6. ಈ ಹಿನ್ನೆಲೆಯಲ್ಲಿ ಏಕೀಕೃತ ಮೊಬೈಲ್ ಸೇವಾ ವೇದಿಕೆಯನ್ನು ಸ್ಥಾಪಿಸಲು ಮತ್ತು ಸರ್ಕಾರದ ವಿವಿಧ ಇಲಾಖೆ/ಸಂಸ್ಥೆಗಳು ಅದನ್ನು ಬಳಸುವ ಕುರಿತಂತೆ ಉಸ್ತುವಾರಿ ಮಾಡಲು ಚಾಲನಾ ಸಮಿತಿ (steering committee) ಯನ್ನು ರಚಿಸುವ ವಿಷಯವನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 10 ಎಸಿಎ 2012 ಬೆಂಗಳೂರು, ದಿನಾಂಕ: 17ನೇ ಡಿಸೆಂಬರ್ 2012.

7. ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಒಂದು ಬಾರಿಯ ಹೆಚ್ಚುವರಿ ಕೇಂದ್ರ ಸಹಾಯ (One Time Additional Central Assistance (OTACA) ದಡಿ ಮೊಬೈಲ್ ಆಡಳಿತ (Mobile Governance under innovative project) ಯೋಜನೆಯನ್ನು ಜಾರಿಗೊಳಿಸಲು ಏಕೀಕೃತ

ಮೊಬೈಲ್ ಸೇವಾ ವೇದಿಕೆಯನ್ನು ಸ್ಥಾಪಿಸಲು ಮತ್ತು ಉಸ್ತುವಾರಿ ಮಾಡಲು ಈ ಕೆಳಕಂಡ ಸದಸ್ಯರನ್ನು ಒಳಗೊಂಡ ಯೋಜನಾ ಉಸ್ತುವಾರಿ ಮತ್ತು ಚಾಲನಾ ಸಮಿತಿ (Project Monitoring and Streering Committee) ಯನ್ನು ಸರ್ಕಾರ ಈ ಮೂಲಕ ರಚಿಸಿದೆ.

1.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ	– ಅಧ್ಯಕ್ಷರು
2.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ (ಇ–ಆಡಳಿತ)	– ಸದಸ್ಯರು
3.	ಸರ್ಕಾರದ ಪ್ರಧಾನ ಕಾರ್ಯದರ್ಶಿ, (ಬಿ ಅಂಡ್ ಆರ್), ಆರ್ಥಿಕ ಇಲಾಖೆ	– ಸದಸ್ಯರು
4.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ (ಆಸು)	– ಸದಸ್ಯರು
5.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ	– ಸದಸ್ಯರು
6.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ	– ಸದಸ್ಯರು
7.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	– ಸದಸ್ಯರು
8.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)	– ಸದಸ್ಯರು
9.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ	– ಸದಸ್ಯರು
10.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	– ಸದಸ್ಯರು
11.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ	– ಸದಸ್ಯರು
12.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	– ಸದಸ್ಯರು
13.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಇಂಧನ ಇಲಾಖೆ	– ಸದಸ್ಯರು
14.	ನಿರ್ದೇಶಕರು, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಇನ್ಫರ್ಮೇಷನ್ ಟೆಕ್ನಾಲಜಿ (ಐಐಐಟಿ)	– ಸದಸ್ಯರು
15.	ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ–ಆಡಳಿತ ಕೇಂದ್ರ, ಬೆಂಗಳೂರು	– ಸದಸ್ಯ ಕಾರ್ಯದರ್ಶಿ ಸಂಚಾಲಕರು

8. ಸದರಿ ಸಮಿತಿಯು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(1) ಒಂದು ಬಾರಿಯ ಹೆಚ್ಚುವರಿ ಕೇಂದ್ರ ಸಹಾಯ (One Time Additional Central Assistance (OTACA) ದಡಿ ಮೊಬೈಲ್ ಆಡಳಿತ (Mobile Governance under innovative project) ಯೋಜನೆಯ ಪ್ರಗತಿಯ ಪುನರ್ ಅವಲೋಕನೆ ಮತ್ತು ಉಸ್ತುವಾರಿ.

(2) ಆ ಯೋಜನೆಯಡಿಯಲ್ಲಿನ ತಂತ್ರಜಾಲದ ಸಮಗ್ರ ಬಳಕೆಯ ಹಾಗೂ ಇಲಾಖಾ ಮಟ್ಟದ ಬಳಕೆಯ ಉಸ್ತುವಾರಿ ಮತ್ತು ಈ ಸಂಪರ್ಕವನ್ನು ಹೆಚ್ಚಿಸುವ ಅಗತ್ಯತೆಯನ್ನು (need for scaling up connectivity both horizontally and vertically) ಪರಿಶೀಲಿಸುವುದು.

(3) ಕರ್ನಾಟಕ ಸರ್ಕಾರದ ಎಲ್ಲಾ ಇಲಾಖೆಗಳ ಹಾಗೂ ಸಂಸ್ಥೆಗಳ ಉಪಯೋಗಕ್ಕಾಗಿ ಮೊಬೈಲ್ ಆಡಳಿತ ವ್ಯವಸ್ಥೆಯನ್ನು ಒಂದೇ ವೇದಿಕೆಯಾಗಿ ನಿರ್ವಹಿಸುವ ಯೋಜನೆಯ ಉಸ್ತುವಾರಿ ಮತ್ತು ಮೇಲ್ವಿಚಾರಣೆ ಹಾಗೂ

(4) ಮೊಬೈಲ್ ಆಡಳಿತ ವ್ಯವಸ್ಥೆಯ ಪರಿಣಾಮಕಾರಿ ಅನುಷ್ಠಾನದ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಿಕೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಹೆಚ್.ಆರ್. ನಾಗರಾಜ)

P.R - 2289

ಪೀಠಾಧಿಕಾರಿ–1, ಸಿಬ್ಬಂದಿ ಮತ್ತು

ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಹಿರಿಯ ಆಪ್ತ ಕಾರ್ಯದರ್ಶಿ ಹುದ್ದೆ ಸೃಜನೆ ಬಗ್ಗೆ.

ಓದಲಾಗಿದೆ : ದಿನಾಂಕ: 28–08–2012 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

ಪ್ರಸ್ತಾವನೆ :

ಕರ್ನಾಟಕ ಸರ್ಕಾರ ಸಚಿವಾಲಯದ ಆಪ್ತ ಕಾರ್ಯದರ್ಶಿ ಗ್ರೇಡ್–1 ಮತ್ತು 2 ವೃಂದದ ಅಧಿಕಾರಿಗಳು ಮುಂಬಡ್ತಿ ಪಡೆಯಲು ವಿಳಂಬವಾಗುತ್ತಿರುವುದರಿಂದ ಈ ಬಗ್ಗೆ ಪರಿಶೀಲಿಸಿ, ಈ ವೃಂದಗಳಲ್ಲಿ ಹುದ್ದೆಗಳನ್ನು ಹೆಚ್ಚುವರಿಯಾಗಿ ಸೃಜಿಸಲು ಕರ್ನಾಟಕ ಸರ್ಕಾರ ಸಚಿವಾಲಯದ ಆಪ್ತ ಕಾರ್ಯದರ್ಶಿಗಳ ಸಂಘವು ಸಲ್ಲಿಸಿರುವ ಮನವಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 28–08–2012 ರಂದು ನಡೆದ ಸಭೆಯಲ್ಲಿ ಪರಿಶೀಲಿಸಿ, ಹಿರಿಯ ಆಪ್ತ ಕಾರ್ಯದರ್ಶಿ ವೃಂದದಲ್ಲಿ 03 ಹುದ್ದೆಗಳನ್ನು ಹೊಸದಾಗಿ ಸೃಜಿಸಲು ಸಮಿತಿಯು ತೀರ್ಮಾನಿಸಿರುತ್ತದೆ. ಈ ಬಗ್ಗೆ ಆರ್ಥಿಕ ಇಲಾಖೆಯು 03 ಹಿರಿಯ ಆಪ್ತ ಕಾರ್ಯದರ್ಶಿ ಹುದ್ದೆಗಳನ್ನು ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಸೃಜಿಸಲು ಸಹಮತಿ ನೀಡಿರುತ್ತದೆ. ಅದರಂತೆ, ಆಪ್ತ ಕಾರ್ಯದರ್ಶಿಗಳ ಸಂಘದ ಮನವಿಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 400 ಸಅಸೇ 2011 (ಭಾಗ) ಬೆಂಗಳೂರು, ದಿನಾಂಕ: 5ನೇ ನವೆಂಬರ್ 2012

ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಆಪ್ತ ಕಾರ್ಯದರ್ಶಿ ಗ್ರೇಡ್–1 ಮತ್ತು 2 ವೃಂದದ ಅಧಿಕಾರಿಗಳು ಮುಂಬಡ್ತಿ ಪಡೆಯಲು ವಿಳಂಬವಾಗುತ್ತಿರುವುದರಿಂದ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ 03 ಹಿರಿಯ ಆಪ್ತ ಕಾರ್ಯದರ್ಶಿ ಹುದ್ದೆಗಳನ್ನು ತಾತ್ಕಾಲಿಕವಾಗಿ ಈ ಆದೇಶ ಹೊರಡಿಸಿದ ದಿನಾಂಕದಿಂದ ಒಂದು ವರ್ಷದವರೆಗೆ ಸೃಜಿಸಿ ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ: ಆ.ಇ. 858 ವೆಚ್ಚ–12 ದಿನಾಂಕ: 10–10–2012 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಕೆ. ಲಕ್ಷ್ಮೀನಾರಾಯಣ ರಾವ್

P.R - 2182

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ:– ಡಾ: ಆರ್. ಗೋಪಾಲ್, ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಬಗ್ಗೆ ಆದೇಶ.

ಓದಲಾಗಿದೆ:–

1. ಕಡತ ಸಂಖ್ಯೆ: ಕಸಂವಾಪ್ರ 175 ಕೆಎಂಯು 2011.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 09 ಇಮುವಿ 2011, ದಿನಾಂಕ: 06–09–2011.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 09 ಇಮುವಿ 2011, ದಿನಾಂಕ: 15–10–2012.
4. ನೋಟೀಸ್ ಸಂಖ್ಯೆ: ಸಿಆಸುಇ 09 ಇಮುವಿ 2011, ದಿನಾಂಕ: 10–07–2012.
5. ಡಾ: ಆರ್. ಗೋಪಾಲ್, ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ, ಇವರು ದಿನಾಂಕ: 18–07–2012 ರಂದು ಸಲ್ಲಿಸಿರುವ ಉತ್ತರ.

ಪ್ರಸ್ತಾವನೆ:–

ಡಾ: ಆರ್. ಗೋಪಾಲ್, ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ, ಮೈಸೂರು. ಇವರು ಮೈಸೂರಿನ ಕೇಂದ್ರ ಕಛೇರಿಯಲ್ಲಿರುವ ಆಡಿಟೋರಿಯಂನ್ನು ಸರ್ಕಾರದಿಂದ ಯಾವುದೇ ಮಂಜೂರಾತಿ ಪಡೆಯದೆ ಹಾಗೂ ಅಂದಾಜು ಪತ್ರಿಕೆ ತಯಾರಿಸದೇ ನವೀಕರಿಸುವ ಕಾಮಗಾರಿಯನ್ನು 2010ರಲ್ಲಿಯೇ ನಿರ್ವಹಿಸಿ ಕಾಮಗಾರಿ ಮುಗಿದ ನಂತರ 2011ನೇ ವರ್ಷದಲ್ಲಿ ಅಂದಾಜು ಸಿದ್ಧಪಡಿಸಿ ಕಾಮಗಾರಿಯ ಗುತ್ತಿಗೆದಾರರಿಗೆ ಬಿಲ್ಲು ಸಂದಾಯ ಮಾಡಲು ಸಂಚು ರೂಪಿಸುತ್ತಿರುವ ಬಗ್ಗೆ ಶ್ರೀ ವರದರಾಜು, ಸಿದ್ಧಾರ್ಥನಗರ, ಮೈಸೂರು ಇವರು ಸಲ್ಲಿಸಿದ ದೂರನ್ನು ಪರಿಶೀಲಿಸಿದ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆಯು, ಸರ್ಕಾರದ ಉಪ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಇವರಿಂದ ಪ್ರಾಥಮಿಕ ತನಿಖೆ ನಡೆಸಿದೆ. ಸದರಿಯವರು ಸಲ್ಲಿಸಿದ ತನಿಖಾ ವರದಿಯೊಂದಿಗೆ ಮೇಲೆ ಓದಲಾದ ಕ್ರ.ಸಂ. (1)ರ ಕಡತ ಸಂಖ್ಯೆ: ಕಸಂವಾಪ್ರ 175 ಕೆಎಂಮಯು 2011ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಡಾ: ಆರ್. ಗೋಪಾಲ್, ನಿರ್ದೇಶಕರು, ಇವರ ವಿರುದ್ಧ ಶಿಸ್ತು ಕ್ರಮಕ್ಕೆ ಪ್ರಸ್ತಾಪಿಸಿದೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಮೇಲೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಡಾ: ಆರ್. ಗೋಪಾಲ್, ನಿರ್ದೇಶಕರು, ಇವರ ಮೇಲಿನ ಶಿಸ್ತು ಕ್ರಮ ಬಾಕಿ ಇಟ್ಟು ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿತ್ತು.

ಡಾ: ಆರ್. ಗೋಪಾಲ್, ನಿರ್ದೇಶಕರು, ದಿನಾಂಕ: 6–9–2011ರಂದು ಹೊರಡಿಸಿದ ಅಮಾನತ್ತು ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂಖ್ಯೆ: 6272/2011ರ ಮೇಲೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನೀಡಿದ ಮಧ್ಯಂತರ ಆದೇಶದಲ್ಲಿ ಸದರಿ ಅಮಾನತ್ತು ಆದೇಶವನ್ನು ತಡೆಹಿಡಿದ ಪ್ರಯುಕ್ತ ಮೇಲೆ ಓದಲಾದ ಕ್ರ.ಸಂ.(3)ರ ಆದೇಶದಲ್ಲಿ ಡಾ: ಆರ್. ಗೋಪಾಲ್, ನಿರ್ದೇಶಕರು, ಇವರ ಅಮಾನತ್ತು ಆದೇಶವನ್ನು ತೆರವುಗೊಳಿಸಿ ನಿರ್ದೇಶಕರು, ಪ್ರಾಚ್ಯವನ್ನು ಮತ್ತು ಸಂಗ್ರಹಾಲಯ ಇಲಾಖೆ, ಈ ಹುದ್ದೆಯಲ್ಲಿ ಪುನರ್ ನೇಮಿಸಿದೆ. ತದನಂತರ ಕೆ.ಎ.ಟಿ.ಯು ಈ ಪ್ರಕರಣದಲ್ಲಿ ನೀಡಿರುವ ತಡೆಯಾಜ್ಞೆಯನ್ನು ಕಾಲಕಾಲಕ್ಕೆ ಮುಂದುವರಿಸಕೊಂಡು ಬರುತ್ತಿದೆ.

ಮೇಲೆ ಕ್ರ.ಸಂ. (4)ರಲ್ಲಿ ಓದಲಾದ ದಿನಾಂಕ: 10–07–2012ರ ನೋಟೀಸ್‌ನಲ್ಲಿ ಡಾ: ಆರ್. ಗೋಪಾಲ್, ನಿರ್ದೇಶಕರು, ಇವರ ವಿರುದ್ಧದ ಮೇಲ್ಕಂಡ ಆರೋಪವೂ ಸೇರಿ ಇನ್ನಿತರೆ ಆರೋಪಗಳಿಗಾಗಿ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 11ರನ್ವಯ ದೋಷಾರೋಪಣೆ ಪಟ್ಟಿ ಜಾರಿಗೊಳಿಸಿದೆ. ಸದರಿ ನೋಟೀಸ್‌ಗೆ ಆರೋಪಿತ ಅಧಿಕಾರಿಯ ಮೇಲೆ ಓದಲಾದ ಕ್ರ.ಸಂ.(5)ರ ತಮ್ಮ ಪತ್ರದ ಮೂಲಕ ಉತ್ತರಿಸಿದ್ದಾರೆ. ಆರೋಪಿತ ಅಧಿಕಾರಿಯ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಆರೋಪಗಳಲ್ಲಿನ ಸತ್ಯಾಸತ್ಯತೆಗಳನ್ನು ಕಂಡುಕೊಳ್ಳಲು ವಿಚಾರಣೆ ನಡೆಸುವುದು ಅತ್ಯಾವಶ್ಯಕವಾಗಿದೆಯೆಂದು ಸರ್ಕಾರವು ತೀರ್ಮಾನಿಸಿ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 09 ಇಮುವಿ 2011, ಬೆಂಗಳೂರು, ದಿನಾಂಕ: 16–10–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 11ನ್ನು ಓದಿಕೊಂಡಂತೆ ಅದೇ ನಿಯಮಾವಳಿಯ ನಿಯಮ 11(2)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಡಾ: ಆರ್. ಗೋಪಾಲ್, ನಿರ್ದೇಶಕರು, (ಪ್ರಾಚ್ಯವಸ್ತು), ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು. ಇವರ ವಿರುದ್ಧ ಮೇಲೆ ಹೇಳಿರುವ ಆರೋಪಗಳ ಬಗ್ಗೆ ವಿಚಾರಣೆ ಮಾಡಲು ಶ್ರೀ ಹೆಚ್.ಆರ್. ಸುಧೀರ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಈ ಮೂಲಕ ನೇಮಿಸಿ ಆದೇಶಿಸಿದೆ.

ಶಿಸ್ತು ಪ್ರಾಧಿಕಾರಿಯ ಪರವಾಗಿ ಪ್ರಕರಣವನ್ನು ವಿಚಾರಣಾಧಿಕಾರಿಗಳ ಮುಂದೆ ಮಂಡಿಸಲು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 11 (5)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಕೆ. ಸುಧಾಕರ ಶೆಟ್ಟಿ, ಸರ್ಕಾರದ ಉಪ ಕಾರ್ಯದರ್ಶಿ, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ, ವಿಕಾಸ ಸೌಧ, ಬೆಂಗಳೂರು, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ವಿಚಾರಣಾಧಿಕಾರಿಗಳಿಗೆ ಸ್ಥಳಾವಕಾಶ, ಅಗತ್ಯ ಸಿಬ್ಬಂದಿ ಇತ್ಯಾದಿಗಳನ್ನು ಕಲ್ಪಿಸಲು ಆಯುಕ್ತರು, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇವರು ಕ್ರಮ ಕೈಗೊಳ್ಳಲು ಆದೇಶಿಸಿದೆ.

ವಿಚಾರಣೆಯನ್ನು 3 ತಿಂಗಳೊಳಗಾಗಿ ಮುಕ್ತಾಯಗೊಳಿಸಿ ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ *ಮತ್ತು ಅವರ ಹೆಸರಿನಲ್ಲಿ*

ಹೆಚ್.ಕೆ. ಲಕ್ಷ್ಮೀನಾರಾಯಣರಾವ್

P.R - 2176

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3).

ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ರಾಜ್ಯ ಯೋಜನಾ ಅಧಿಕಾರೇತರ ಸದಸ್ಯರನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ ಪಡಿ 48 ಎಸ್ ಪಿಬಿ 2010, ದಿನಾಂಕ: 22–09–2010.

2. ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 121 ಶಿಸನೇ 2010 ದಿನಾಂಕ: 04–11–2010

3. ಸರ್ಕಾರದ ಆದೇಶ ಸಂಖ್ಯೆ ಪಡಿ 48 ಎಸ್‌ಪಿಬಿ 2010, ದಿನಾಂಕ: 15–05–2012.

4. ಸರ್ಕಾರದ ಆದೇಶ ಸಂಖ್ಯೆ ಪಡಿ 82 ಎಸ್‌ಪಿಬಿ 2011, ದಿನಾಂಕ: 10–03–2011.

5. ಸರ್ಕಾರದ ಆದೇಶ ಸಂಖ್ಯೆ ಪಡಿ 82 ಎಸ್‌ಪಿಬಿ 2011, ದಿನಾಂಕ: 08–09.2011.

6. ಸರ್ಕಾರದ ಆದೇಶ ಸಂಖ್ಯೆ ಪಡಿ 82 ಎಸ್‌ಪಿಬಿ 2011, ದಿನಾಂಕ: 03–01–2012.

7. ಮಾನ್ಯ ಮುಖ್ಯ ಮಂತ್ರಿಗಳ ಹಿಂಬರಹ ದಿನಾಂಕ 06–11–2012.

ಪ್ರಸ್ತಾವನೆ :

ಉಲ್ಲೇಖ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ರಾಮಚಂದ್ರಗೌಡ, ವಿಧಾನ ಪರಿಷತ್ ಸದಸ್ಯರು, ಇವರನ್ನು ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿತ್ತು ಉಲ್ಲೇಖ (2) ರ ಅಧಿಸೂಚನೆಯನ್ವಯ ಸಚಿವ ಸಂಪುಟ ದರ್ಜೆಯ ಸ್ಥಾನಮಾನವನ್ನುಹ ನೀಡಲಾಗಿತ್ತದೆ. ಉಲ್ಲೇಖ (4), (5) ಮತ್ತು (6) ರ ಸರ್ಕಾರದ ಆದೇಶಗಳಲ್ಲಿ ಮಾನ್ಯ ಮುಖ್ಯ ಮಂತ್ರಿಯವರ ಆದೇಶದ ಮೇರೆಗೆ 13 ಜನ ಅಧಿಕಾತೇರ ಸದಸ್ಯರುಗಳನ್ನು ರಾಜ್ಯ ಯೋಜನಾ ಮಂಡಳಿಗೆ ನಾಮ ನಿರ್ದೇಶಮ ಮಾಡಲಾಗಿರುತ್ತದೆ.

ರಾಜ್ಯ ಯೋಜನಾ ಮಂಡಳಿಯ ಅಧ್ಯಕ್ಷರಾಗಿದ್ದ ಮಾನ್ಯ ಮುಖ್ಯ ಮಂತ್ರಿ ಶ್ರೀ ಡಿ.ವಿ. ಸದಾನಂದ ಗೌಡ ರವರ ಹಾಗೂ ಮಾನ್ಯ ಉಪಾಧ್ಯಕ್ಷರ ರಾಜೀನಾಮೆಯಿಂದ ಮೇಲೆ ಸೂಚಿಸಲಾಗಿದೆ. 13 ಜನ ಅಧಿಕಾರೇತರ ಸದಸ್ಯರುಗಳ ಸ್ಥಾನಗಳು ತೆರವಾಗಿರುತ್ತದೆ.

ಮೇಲೆ ಓದಲಾದ ಉಲ್ಲೇಖ (7) ರ ಹಿಂಬರಹದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉಲ್ಲೇಖ (4), (5) ಮತ್ತು (6) ರ ಸರ್ಕಾರದ ಅದೇಶಗಳಲ್ಲಿ ನಾಮ ನಿರ್ದೇಶನ ಮಾಡಿದ 13 ಜನ ಅಧಿಕಾರೇತರ ಸದಸ್ಯರುಗಳನ್ನು ಈಗಿನ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಅವಧಿ ಪೂರ್ಣಗೊಳ್ಳುವವರೆಗೆ ಮುಂದುವರೆಸುವಂತೆ ಆದೇಶಿಸಿರುತ್ತಾರೆ.

ಅದರಂತೆ ಈ ಆದೇಶ

ಸರ್ಕಾರದ ಆದೇಶ ಸಂಖ್ಯೆ : ಪಿಡಿ 39 ಎಸ್‌ಪಿಬಿ 2012, ಬೆಂಗಳೂರು, ದಿನಾಂಕ: 9ನೇ ನವೆಂಬರ್ 2012.

ಮಾನ್ಯ ಮುಖ್ಯ ಮಂತ್ರಿಗಳ ಆದೇಶದ ಮೇರೆಗೆ ರಾಜ್ಯ ಯೋಜನಾ ಮಂಡಳಿಯಲ್ಲಿ ಈ ಹಿಂದೆ ಇದ್ದ ಕೆಳಕಂಡ 13 ಜನ ಅಧಿಕಾರೇತರ ಸದಸ್ಯರುಗಳನ್ನು ಈಗಿನ ಮಾನ್ಯ ಮುಖ್ಯ ಮಂತ್ರಿಗಳ ಅವಧಿ ಪೂರ್ಣಗೊಳಗಳುವವರೆಗೆ ರಾಜ್ಯ ಯೋಜನಾ ಮಂಡಳಿಯ ಅಧಿಕಾರೇತರ ಸದಸ್ಯರನ್ನಾಗಿ ಹಾಲಿ ಇರುವ ನಿಯಮಗಳೊಂದಿಗೆ ಮುಂದುವರೆಸಲು ಸರ್ಕಾರ ಮಂಜೂರಾತಿ ನೀಡಲಾಗಿದೆ.

1. ಡಾ. ಎಂ. ಮಹಾದೇವಪ್ಪ, ನಿರ್ದೇಶಕರು, ಜೆ ಎಸ್ ಎಸ್ ಗ್ರಾಮೀಣಾಭಿವೃದ್ಧಿ ಪ್ರತಿಷ್ಠಾನ (ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಕ್ಷೇತ್ರ)
2. ಶ್ರೀಮತಿ ಸುಧಾಮೂರ್ತಿ, ಇನ್ಫೋಸಿಸ್ ಪ್ರತಿಷ್ಠಾನ, ಬೆಂಗಳೂರು.
3. ಪ್ರೊ. ಹೆಚ್.ಪಿ. ಕಿಂಚಾ, ಮಾಜಿ ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ.
4. ಡಾ. ರಘುನಂದನ್, ನಿವೃತ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
5. ಪ್ರೊ. ಜಿ. ವಿ. ಜೋಶಿ ಜಸ್ಟೀಸ್, ಕೆ ಎಸ್ ಹೆಗ್ಡೆ ಇನ್ಸ್ಟಿಟ್ಯೂಟ್ ಆಫ್ ಮೆನೇಜ್‌ಮೇಂಟ್, ನಿಟ್ಟೆ
6. ಶ್ರೀ ಎಂಸಿ. ಕೊಡ್ಲಿ, ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ.
7. ಡಾ. ವೈ ಎ. ದೇವಪಾಲ್, ಕೃಷ್ಣರಾಜನಗರ, ಮೈಸೂರು.

8. ಶ್ರೀ ಸಿಆರ್. ನಜೀರ್ ಅಹಮದ್, ದಾವಣಗೆರೆ.

9. ಶ್ರೀ ರವಿಕುಮಾರ್ ಪಟೇಲ್, ಸಿಎಚಿಡಿ, ಪಟೇಲ್ ಗ್ರೂಪ್ ಆಫ್ ಕಂಪನೀಸ್, ಬೆಂಗಳೂರು.

10. ಶ್ರೀ ಎಂ. ಭಾರದ್ವಾಜ್, ಕೈಗಾರಿಕೋದ್ಯಮಿ, ಶಿವಮೊಗ್ಗ.

11. ಶ್ರೀ ಬಂಗೇರಾ, ಬೆಂಗಳೂರು

12. ಶ್ರೀ ಬಿ ಆರ್ ಜಯಂತ್, ಶಿವಮೊಗ್ಗ

13. ಡಾ. ಶ್ರೀನಿಧಿ, ವಿಜ್ಞಾನಿ, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು.

ಈ ಆದೇಶವನ್ನು ಮಾನ್ಯ ಮುಖ್ಯ ಮಂತ್ರಿಗಳ ಹಿಂಬರಹ ದಿನಾಂಕ 06-11-2012 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಉಷಾಬಾಯಿ
ಸರ್ಕಾರದ ಅಧೀನ ಕಾರ್ಯದರ್ಶಿ ಎಸ್ -3
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

P.R - 2194

ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಜಿಲ್ಲಾ ಪಂಚಾಯತ್ ಯೋಜನಾ ಘಟಕದಲ್ಲಿರುವ ಯೋಜನೇತರ ತಾತ್ಕಾಲಿಕ ಹುದ್ದೆಗಳನ್ನು 2012-13ನೇ ಸಾಲಿನಲ್ಲಿ ಮುಂದುವರಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಯೋಇ 09 ಸಸಪ್ರ 2011, ದಿ. 11-07-2012
2. ಸರ್ಕಾರದ ಆದೇಶ ಸಂಖ್ಯೆ : ಪಿಡಿ 102 ಎಸ್ಎಂಸಿ 2006, ದಿ. 11-06-2007.
3. ಸರ್ಕಾರದ ಆದೇಶ ಸಂಖ್ಯೆ : ಪಿಡಿ 15 ಎಸ್ಎಂಸಿ 2010, ದಿ. 22-11-2010.
4. ಸರ್ಕಾರದ ಆದೇಶ ಸಂಖ್ಯೆ : ಯೋಇ 07 ಸಸಪ್ರ 2010, ದಿ. 10-06-2010.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು ಇವರ ಪತ್ರ ಸಂ. ಜಿಪತು/ಯೋಶಾ/ವಿಪ1/2012-13, ದಿನಾಂಕ 9-4-2012 ಮತ್ತು ಇತರೆ ಜಿಲ್ಲಾ ಪಂಚಾಯತ್‌ಗಳ ಪತ್ರಗಳು.

ಪ್ರಸ್ತಾವನೆ :

ಮೇಲೆ ಕ್ರ.ಸಂ. (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಜಿಲ್ಲಾ ಪಂಚಾಯತ್‌ಗಳ ಯೋಜನಾ ಘಟಕದಲ್ಲಿರುವ 394 ಯೋಜನೇತರ ತಾತ್ಕಾಲಿಕ ಹುದ್ದೆಗಳನ್ನು 2011-12ನೇ ಸಾಲಿಗೆ ಅಂದರೆ ದಿನಾಂಕ: 01/04/2011 ರಿಂದ 31/03/2012 ರವರೆಗೆ ಮುಂದುವರೆಸಿದೆ.

ಮೇಲೆ ಕ್ರ.ಸಂ. (2) ರಲ್ಲಿ ಓದಲಾದ ಸಕಾರಿ ಆದೇಶದಲ್ಲಿ 64 ತಾಲ್ಲೂಕು ಯೋಜನಾ ಘಟಕಗಳನ್ನು ಸೃಜಿಸಲಾಗಿದೆ ಮತ್ತು ಕ್ರ.ಸಂ. (3) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯ ಎರಡನೇ ಹಂತವಾಗಿ 43 ತಾಲ್ಲೂಕು ಯೋಜನಾ ಘಟಕಗಳನ್ನು ತಾಲ್ಲೂಕು ಪಂಚಾಯತಿಗಳಲ್ಲಿ ಸೃಜಿಸಿ ಆದೇಶಿಸಲಾಗಿದೆ.

ತಾಲ್ಲೂಕು ಯೋಜನಾ ಘಟಕಗಳ ಹುದ್ದೆಗಳು ಯೋಜನಾ ಇಲಾಖೆಯ ಆಡಳಿತಾತ್ಮಕ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಈ ಘಟಕಗಳು ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಹಣಾಧಿಕಾರಿಗಳ ಆಡಳಿತ ನಿಯಂತ್ರಣದಲ್ಲಿ ಮತ್ತು ಆಯಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಯೋಜನಾಧಿಕಾರಿಗಳ ತಾಂತ್ರಿಕ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತಕ್ಕದ್ದು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಂಪೂರ್ಣ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ. ತಾಲ್ಲೂಕು ಯೋಜನಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಆದೇಶದಲ್ಲಿ ನಿಗದಿಪಡಿಸಿರುವಂತೆ ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಬಾಕಾಗಿದೆ.

ಮೇಲೆ ಕ್ರ.ಸಂ. 5 ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು ಇವರು ಯೋಜನಾ ಘಟಕದಲ್ಲಿರುವ ಸದರಿ ಯೋಜನೇತರ ಹುದ್ದೆಗಳು ಅತಿ ಅವಶ್ಯಕವಾಗಿರುವುದರಿಂದ ಹಾಗೂ ಹೊಸದಾಗಿ ಸೃಜನೆಯಾದ ತಾಲ್ಲೂಕು ಯೋಜನಾಧಿಕಾರಿ ಹುದ್ದೆಗಳನ್ನು ಸಹ ಆಡಳಿತಾತ್ಮಕ ಹಿತದೃಷ್ಟಿಯಿಂದ 2012-13ನೇ ಸಾಲಿಗೆ ಮುಂದುವರಿಸಬೇಕೆಂದು ಕೋರಿರುತ್ತಾರೆ.

ಸರ್ಕಾರದ ಅಧಿಸೂಚನೆ ಸಂಖ್ಯೆ ಆರ್‌ಡಿ 27 ಬೂದಾಪು 2006 (ಭಾಗ-3), ದಿನಾಂಕ: 3-8-2007ರಲ್ಲಿ ಹಿಂದಿನ ಕೋಲಾರ ಜಿಲ್ಲೆಯನ್ನು ವಿಭಜನೆಗೊಳಿಸಿ ಚಿಕ್ಕಬಳ್ಳಾಪುರ ಜಿಲ್ಲೆಯನ್ನು ಸೃಜಿಸಲಾಯಿತು. ಅವಿಭಜಿತ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಬಾಗೇಪಲ್ಲಿ, ಗುಡಿಬಂಡೆ ಮತ್ತು ಗೌರಿಬಿದನೂರು ತಾಲ್ಲೂಕುಗಳನ್ನು ಚಿಕ್ಕಬಳ್ಳಾಪುರ ಜಿಲ್ಲೆಯ ವ್ಯಾಪ್ತಿಗೆ ಸೇರಿಸಲಾಯಿತು. ಸರ್ಕಾರದ ಆದೇಶ ಸಂಖ್ಯೆ ಗ್ರಾಪ 179 ಕೆಎಸ್ಎಸ್ 2007(2) ದಿನಾಂಕ: 28-2-2007ರಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತ್‌ಗಳ ಕಚೇರಿಗಳ ವೃಂದಬಲದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಮುಖ್ಯ ಯೋಜನಾಧಿಕಾರಿ ಮತ್ತು ಯೋಜನಾ ನಿರ್ಣಾಯಕ ಮತ್ತು ಮೌಲ್ಯಮಾಪನಾಧಿಕಾರಿ, ಪ್ರಾದೇಶಿಕ ಯೋಜನಾಧಿಕಾರಿ ಹಾಗೂ ಸಹಾಯಕ ಸಾಂಖ್ಯಿಕ ಅಧಿಕಾರಿ ಹುದ್ದೆಗಳನ್ನು ಸೃಜಿಸಲಾಯಿತು. ಅಲ್ಲದೇ ಉಲ್ಲೇಖ (2) ಮತ್ತು (3)ರ ಸರ್ಕಾರದ ಆದೇಶದನ್ವಯ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ, ಗುಡಿಬಂಡೆ ಮತ್ತು ಗೌರಿಬಿದನೂರು ತಾಲ್ಲೂಕುಗಳಿಗೆ ತಲಾ ಒಂದು ತಾಲ್ಲೂಕು ಯೋಜನಾಧಿಕಾರಿ ಹುದ್ದೆಯನ್ನು ಸೃಜಿಸಲಾಯಿತು.

ಈ ಮೇಲಿನ ಕಾರಣಗಳಿಂದ ರಾಜ್ಯದ ಎಲ್ಲಾ 30 ಜಿಲ್ಲೆಗಳ ಯೋಜನಾ ಘಟಕಗಳಲ್ಲಿರುವ ಮಂಜೂರಾದ ಯೋಜನೇತರ ತಾತ್ಕಾಲಿಕ ಹುದ್ದೆಗಳನ್ನು 2012-13ನೇ ಸಾಲಿಗೆ ಅಂದರೆ ದಿನಾಂಕ: 1-4-2012 ರಿಂದ 31-03-2013 ರವರೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಮುಂದುವರೆಸುವ ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಯೋಇ 08 ಸಸಪ್ರ 2012, ಬೆಂಗಳೂರು, ದಿನಾಂಕ: 21ನೇ ಆಗಸ್ಟ್ 2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಆದೇಶದ ಅನುಬಂಧದಲ್ಲಿ ತೋರಿಸಿರುವ ರಾಜ್ಯದ 30 ಜಿಲ್ಲಾ ಪಂಚಾಯತ್‌ಗಳ ಯೋಜನಾ ಘಟಕದಲ್ಲಿರುವ ಈ ಕೆಳಕಂಡ 397 ಯೋಜನೇತರ ತಾತ್ಕಾಲಿಕ ಹುದ್ದೆಗಳನ್ನು 2012–13ನೇ ಸಾಲಿಗೆ ಅಂದರೆ ದಿನಾಂಕ: 01–04–2012 ರಿಂದ 31–03–2013 ರವರೆಗೆ (ಎ.ದಿ.ಸೇ) ಸಾರ್ವಜನಿಕ ಹಿತದೃಷ್ಟಿಯಿಂದ ಮುಂದುವರೆಸಲು ಸರ್ಕಾರವು ಮಂಜೂರಾತಿ ನೀಡಿದೆ.

1.	ಮುಖ್ಯ ಯೋಜನಾಧಿಕಾರಿಗಳು	–	30
2.	ಯೋಜನಾ ಅಂದಾಜು ಮತ್ತು ಮೌಲ್ಯ ಮಾಪನ ಅಧಿಕಾರಿ	–	30
3.	ತಾಲ್ಲೂಕು ಯೋಜನಾಧಿಕಾರಿಗಳು	–	107
4.	ಯೋಜನಾ ಸಹಾಯಕರು (ಆರ್ಥಿಕ)	–	27
5.	ಯೋಜನಾ ಸಹಾಯಕರು (ಸಾಂಖ್ಯಿಕ)	–	25
6.	ಪ್ರಥಮದರ್ಜೆ ಸಹಾಯಕರು	–	28
7.	ದ್ವಿತಿಯದರ್ಜೆ ಸಹಾಯಕರು	–	37
8.	ಶೀಘ್ರಲಿಪಿಗಾರರು	–	29
9.	ಬೆರಳಚ್ಚುಗಾರರು	–	32
10.	ದಲಾಯತ್	–	52
	ಒಟ್ಟು	–	**397**

ಸದರಿ ಹುದ್ದೆಗಳಿಗೆ ತಗಲುವ ವೆಚ್ಚವನ್ನು ಅಯವ್ಯಯ ಲೆಕ್ಕ ಶೀರ್ಷಿಕೆ 3451–00–101–0–26 ಜಿಲ್ಲಾ ಪಂಚಾಯತ್ (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಆಇ 01 ಟಿಎಫ್‌ಪಿ 96, ದಿನಾಂಕ: 10–07–1996 ರಲ್ಲಿ ಇಲಾಖಾ ಪ್ರಧಾನಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಉಮಾವತಿ

ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಸರ್ಕಾರಿ ಆದೇಶ ಸಂಖ್ಯೆ : ಯೋಇ 8 ಸಸಪ್ರ 2012, ಬೆಂಗಳೂರು, ದಿನಾಂಕ : 21–08–2012ರ ಅನುಬಂಧ

ಕ್ರ. ಸಂ.	ಜಿಲ್ಲೆಗಳು	ಮುಖ್ಯ ಯೋಜನಾಧಿಕಾರಿ	ಮೌಲ್ಯ	ತಾಲ್ಲೂಕು ಯೋಜನಾಧಿಕಾರಿಗಳು	ಯೋಜನಾ ಸಹಾಯಕರು (ಆರ್ಥಿಕ)	ಯೋಜನಾ ಸಹಾಯಕರು (ಸಾಂಖ್ಯಿಕ)	ಪ್ರ.ದ.ಸ.	ದ್ವಿ.ದ.ಸ.	ಶೀಘ್ರಲಿಪಿ ಗಾರರು	ಬೆರಳಚ್ಚು ಗಾರರು	ದಲಾಯತ್
1	2	3	4	5	6	7	8	9	10	11	12
1	ಬೆಂಗಳೂರು (ನಗರ)	1	1	1	1	1	–	1	1	1	1
2	ಬೆಂಗಳೂರು (ಗ್ರಾ)	1	1	1	1	1	1	3	1	1	2
3	ಚಿತ್ರದುರ್ಗ	1	1	5	1	1	1	2	1	1	3
4	ಶಿವಮೊಗ್ಗ	1	1	2	1	1	1	2	1	1	3
5	ತುಮಕೂರು	1	1	8	1	1	1	1	1	1	2
6	ಕೋಲಾರ	1	1	3	1	1	1	1	1	1	2
7	ಚಿಕ್ಕಮಗಳೂರು	1	1	2	1	1	1	2	1	1	3
8	ದಕ್ಷಿಣ ಕನ್ನಡ	1	1	1	1	1	1	1	1	1	1
9	ಕೊಡಗು	1	1	2	1	1	1	1	1	1	2
10	ಮೈಸೂರು	1	1	4	1	1	1	2	1	1	3

ಕ್ರ. ಸಂ.	ಜಿಲ್ಲೆಗಳು	ಮುಖ್ಯ ಯೋಜನಾಧಿಕಾರಿ	ಅಧೀಕ್ಷಕ	ತಾಲ್ಲೂಕು ಯೋಜನಾಧಿಕಾರಿಗಳು	ಯೋಜನಾ ಸಹಾಯಕರು (ಆರ್ಥಿಕ)	ಯೋಜನಾ ಸಹಾಯಕರು (ಸಾಂಖ್ಯಿಕ)	ಪ್ರ.ದ.ಸ.	ದ್ವಿ.ದ.ಸ.	ಶೀಘ್ರಲಿಪಿ ಗಾರರು	ಬೆರಳಚ್ಚು ಗಾರರು	ದಲಾಯತ್
11	ಹಾಸನ	1	1	3	1	1	1	2	1	2	3
12	ಮಂಡ್ಯ	1	1	3	1	1	1	2	1	1	2
13	ಗುಲ್ಬರ್ಗ	1	1	7	1	1	1	2	1	2	3
14	ಬೀದರ್	1	1	4	1	1	1	3	1	2	2
15	ಬಳ್ಳಾರಿ	1	1	5	1	1	1	1	1	1	2
16	ರಾಯಚೂರು	1	1	5	1	1	1	–	–	1	1
17	ಬೆಳಗಾವಿ	1	1	7	1	1	1	2	1	2	2
18	ಬಿಜಾಪುರ	1	1	5	1	1	1	1	1	1	1
19	ಉತ್ತರ ಕನ್ನಡ	1	1	4	1	1	1	1	1	1	3
20	ಧಾರವಾಡ	1	1	3	1	1	1	1	1	1	2
21	ಚಾಮರಾಜನಗರ	1	1	3	1	1	1	1	1	1	1
22	ಬಾಗಲಕೋಟೆ	1	1	3	1	1	1	1	1	1	1
23	ಕೊಪ್ಪಳ	1	1	4	1	–	1	–	1	1	1
24	ದಾವಣಗೆರೆ	1	1	4	–	1	1	–	1	1	1
25	ಉಡುಪಿ	1	1	1	1	–	1	–	1	1	1
26	ಹಾವೇರಿ	1	1	6	1	–	1	–	1	1	1
27	ಗದಗ	1	1	3	1	–	1	–	1	1	1
28	ರಾಮನಗರ	1	1	2	–	1	1	3	2	–	1
29	ಯಾದಗಿರಿ	1	1	3	1	1	1	1	1	1	1
30	ಚಿಕ್ಕಬಳ್ಳಾಪುರ	1	1	3	–	–	–	–	–	–	–
	ಒಟ್ಟು	30	30	107	27	25	28	37	29	32	52

ಎಸ್. ಉಮಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

P.R - 2249

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: ಕರ್ನಾಟಕ ಸರ್ಕಾರ ಸಚಿವಾಲಯದ ಸ್ಥಳೀಯ ನಿಸ್ತಂತು ಜಾಲನೆ (Karnataka Government Secretariat LAN) ಯೋಜನೆ ಮತ್ತು ಸೌಕರ್ಯ ನಿರ್ವಹಣೆ ಸೇವೆಯ ಯೋಜನೆ (Facility Management Service)ಗಳಿಗೆ ಸಂಬಂಧಿಸಿದಂತೆ ಜಾರಿಗೊಳಿಸುವಿಕೆಯ ಕಾಲಮಿತಿಗಳನ್ನು (implementation timelines) ಅನುಸರಿಸುವ ವಿಷಯವನ್ನು ಪರಿಶೀಲಿಸಲು ಸಮಿತಿಯೊಂದನ್ನು ರಚಿಸುವ ಬಗ್ಗೆ.

ಓದಲಾಗಿ: ಮುಖ್ಯ ಕಾರ್ಯನಿರ್ವಹಣಾಧಿಕಾರಿ. ಇ–ಆಡಳಿತ ಕೇಂದ್ರ. ಇವರ ದಿನಾಂಕ: 10–12–2012ರ ಪತ್ರ ಸಂ: ಸಿಇಜಿ/33/ ಎಸ್‌ಇಸಿಎಲ್‌ಎಎನ್/2012

ಪ್ರಸ್ತಾವನೆ:

1. ವಿಧಾನ ಸೌಧ, ವಿಕಾಸ ಸೌಧ ಮತ್ತು ಬಹುಮಹಡಿಗಳ ಕಟ್ಟಡಗಳಲ್ಲಿರುವ ಕರ್ನಾಟಕ ಸರ್ಕಾರ ಸಚಿವಾಲಯದ ವಿವಿಧ ಇಲಾಖೆಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ)ಯ ವ್ಯಾಪ್ತಿಯಲ್ಲಿ ಬರುವ ಇ–ಆಡಳಿತ ಕೇಂದ್ರ, ಬೆಂಗಳೂರು ಸಂಸ್ಥೆಯು ಸ್ಥಳೀಯ ನಿಸ್ತಂತು ಜಾಲನೆ

(SECLAN) ವ್ಯವಸ್ಥೆಯನ್ನು ಕಲ್ಪಿಸಿದ್ದು. ಇದನ್ನು ಕರ್ನಾಟಕ ಸರ್ಕಾರ ಸಚಿವಾಲಯದ ವಿವಿಧ ಇಲಾಖೆಗಳಲ್ಲಿ ಇ–ಆಡಳಿತದ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ. ಸ್ಥಳೀಯ ನಿಸ್ತಂತು ಚಾಲನೆ (SECLAN)ಯ ವಿನ್ಯಾಸ, ಸರಬರಾಜು, ಸ್ಥಾಪನೆ, ನಿರ್ವಹಣೆ ಇತ್ಯಾದಿಗಳಿಗಾಗಿ ಮೆ॥ ಟಿಸಿಎಸ್ ಸಂಸ್ಥೆಗೆ ಅಂತರ್ ಜಾಲ ನಿರ್ವಹಣೆ (Network operator) ಕಾರ್ಯವನ್ನು 2009ರಲ್ಲಿ ಹೊರಡಿಸಿರುವ Letter of Intent ರ ಪ್ರಕಾರ ವಹಿಸಲಾಗಿದೆ.

2. ಕರ್ನಾಟಕ ಸರ್ಕಾರ ಸಚಿವಾಲಯದ ವಿವಿಧ ಇಲಾಖೆಗಳಲ್ಲಿನ ಅಗತ್ಯತೆಗನುಗುಣವಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ)ಯ ವ್ಯಾಪ್ತಿಯಲ್ಲಿ ಬರುವ ಇ–ಆಡಳಿತ ಕೇಂದ್ರವು ಮಾಹಿತಿ ತಂತ್ರಜ್ಞಾನದ ಮೂಲಸೌಲಭ್ಯಗಳ ಸರಬರಾಜು ಮತ್ತು ನಿರ್ವಹಣೆಯನ್ನು ಮಾಡುತ್ತಿದೆ. ಮೂಲಸೌಲಭ್ಯ ಹಾಗೂ ಸಂಬಂಧಿಸಿದ ರಚನೆಯ ಭಾಗಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸುತ್ತಿರುವ ಕಾರಣ ಇವುಗಳ ನಿರ್ವಹಣೆ ಮಾಡಲು 2011ರಲ್ಲಿ ಹೊರಡಿಸಿರುವ Letter of Intent ರನ್ವಯ ಮೆ॥ ಟಿಸಿಎಸ್ ಸಂಸ್ಥೆಗೆ ಸೌಕರ್ಯ ನಿರ್ವಹಣೆ ಕಾರ್ಯವನ್ನು (Facility Management Service) ವಹಿಸಲಾಗಿದೆ. ಸದರಿ ಸಂಸ್ಥೆಯು ಮೇಲ್ಕಂಡ ಎರಡೂ ಯೋಜನೆಗಳಲ್ಲಿ ಆರ್‌ಎಫ್‌ಪಿ (Request for Proposal)ಯಲ್ಲಿ ನಿಗದಿಪಡಿಸಿರುವ ನಿಬಂಧನೆಗಳು ಮತ್ತು ಷರತ್ತುಗಳಿಗನುಗುಣವಾಗಿ ಸೇವೆಯನ್ನು ನೀಡಬೇಕಾಗಿರುತ್ತದೆ. ಆದರೆ ಕೆಲವು ಬಾಹ್ಯ ಅವಲಂಬನೆಗಳ (external dependencies) ಮತ್ತು ಪ್ರಾಮುಖ್ಯವಾದ ಹೆಚ್ಚಿನ ಅಗತ್ಯತೆಗಳ (important additional requirements) ಹಿನ್ನೆಲೆಯಲ್ಲಿ ಆರ್‌ಎಫ್‌ಪಿ (Request for Proposal) ಯಲ್ಲಿ ನಿಗದಿಪಡಿಸಿರುವ ಜಾರಿಗೊಳಿಸುವಿಕೆಯ ಕಾಲಮಿತಿಗಳನ್ನು (implementation timelines) ಅನುಸರಿಸುವುದರಲ್ಲಿ ವಿಳಂಬವಾಗಿರುತ್ತದೆ.

3. ಈ ಹಿನ್ನೆಲೆಯಲ್ಲಿ, ಮೇಲೆ ಉಲ್ಲೇಖಿಸಿದ ಜಾರಿಗೊಳಿಸುವಿಕೆಯ ಕಾಲಮಿತಿಗಳನ್ನು (implementation timelines) ಅಂತಿಮಗೊಳಿಸಲು ಸಮಿತಿಯೊಂದನ್ನು ರಚಿಸಬೇಕೆಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ–ಆಡಳಿತ ಕೇಂದ್ರ, ಇವರು ಮೇಲೆ ಓದಲಾದ ದಿನಾಂಕ: 10–12–2012ರ ಅವರ ಪತ್ರದನ್ವಯ ಕೋರಿರುತ್ತಾರೆ. ಈ ಕೋರಿಕೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 87 ಇಆಇ 2012, ಬೆಂಗಳೂರು ದಿನಾಂಕ: 24ನೇ ಡಿಸೆಂಬರ್, 2012

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ(ಇ–ಆಡಳಿತ) ಹಾಗೂ ಅಧ್ಯಕ್ಷರು, ಇ–ಆಡಳಿತ ಕೇಂದ್ರ. ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯೊಂದನ್ನು ಈ ಮೂಲಕ ರಚಿಸಲಾಗಿದೆ:–

1.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ(ಇ–ಆಡಳಿತ) ಹಾಗೂ ಅಧ್ಯಕ್ಷರು, ಇ–ಆಡಳಿತ ಕೇಂದ್ರ	–ಅಧ್ಯಕ್ಷರು
2.	ಸರ್ಕಾರದ ಕಾರ್ಯದರ್ಶಿ, ಯೋಜನಾ ಇಲಾಖೆ	–ಸದಸ್ಯರು
3.	ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ–ಆಡಳಿತ ಕೇಂದ್ರ	–ಸದಸ್ಯರು
4.	ಸರ್ಕಾರದ ಅಪರ ಕಾರ್ಯದರ್ಶಿ, ಸಿಆಸುಇ(ಇ–ಆಡಳಿತ)	–ಸದಸ್ಯರು
5.	ನಿರ್ದೇಶಕರು, ವಿದ್ಯುನ್ಮಾನ ನಾಗರೀಕ ಸೇವಾ ವಿತರಣಾ (ಇಡಿಸಿಎಸ್) ನಿರ್ದೇಶನಾಲಯ	–ಸದಸ್ಯರು
6.	ಪ್ರೋ. ದೇಬಬ್ರತ ದಾಸ್, ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಇನ್‌ಫರ್‌ಮೇಷನ್ ಟೆಕ್ನಾಲಜಿ (ಐಐಐಟಿ), ಬೆಂಗಳೂರು	–ಸದಸ್ಯರು
7.	ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಲೋಕೋಪಯೋಗಿ ಇಲಾಖೆ, ಬೆಂಗಳೂರು	–ಸದಸ್ಯರು
8.	ಯೋಜನಾಧಿಕಾರಿ, ಕರ್ನಾಟಕ ಸರ್ಕಾರ ಸಚಿವಾಲಯದ ಸ್ಥಳೀಯ ನಿಸ್ತಂತು ಚಾಲನೆ (Karnatak Government Secretariat LAN) ಇ–ಆಡಳಿತ ಕೇಂದ್ರ	–ಸದಸ್ಯರು
9.	ಸೀನಿಯರ್ ಪ್ರೋಗ್ರಾಮರ್–1, ಸಿಆಸುಇ(ಇ–ಆಡಳಿತ)	–ಸದಸ್ಯರು

ಕರ್ನಾಟಕ ಸರ್ಕಾರ ಸಚಿವಾಲಯದ ಸ್ಥಳೀಯ ನಿಸ್ತಂತು ಚಾಲನೆ (Karnatak Government Secretariat LAN) ಯೋಜನೆ ಮತ್ತು ಸೌಕರ್ಯ ನಿರ್ವಹಣೆ ಸೇವೆಯ ಯೋಜನೆ (Facility Management Service)ಗಳಿಗೆ ಸಂಬಂಧಿಸಿದಂತೆ ಪ್ರಸ್ತಾವನೆಯಲ್ಲಿ ಉಲ್ಲೇಖಿಸಿದ ಕೆಲವು ಬಾಹ್ಯ ಅವಲಂಬನೆಗಳ (external dependencies) ಮತ್ತು ಪ್ರಾಮುಖ್ಯವಾದ ಹೆಚ್ಚಿನ ಅಗತ್ಯತೆಗಳ (important additional requirements) ಹಿನ್ನೆಲೆಯಲ್ಲಿ ಆರ್‌ಎಫ್‌ಸಿ (Request for Proposal)ಯಲ್ಲಿ ನಿಗದಿಪಡಿಸಿರುವ ಜಾರಿಗೊಳಿಸುವಿಕೆಯ ಕಾಲಮಿತಿಗಳನ್ನು (implementation timelines) ಅನುಸರಿಸುವ ವಿಷಯವನ್ನು ಈ ಸಮಿತಿಯು ಪರಿಶೀಲಿಸಿ ಅದಕ್ಕೆ ಸಂಬಂಧಿಸಿದಂತೆ ತನ್ನ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್. ಆರ್. ನಾಗರಾಜ

ಪೀಠಾಧಿಕಾರಿ–1

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ಇ–ಆಡಳಿತ)

P.R - 2310

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ: ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ಭಾರತೀಯ ವಿಜ್ಞಾನ ಸಂಸ್ಥೆಯ ಕ್ಯಾಂಪಸ್ ನಲ್ಲಿ ಸೌರಶಕ್ತಿ ಉತ್ಪಾದನೆ ಮತ್ತು ಸಂಶೋಧನಾ ಕೇಂದ್ರ (Solar Power Generation And Research Centre) ಸ್ಥಾಪನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಸಂಬಂಧಿಸಿದಂತೆ 12–13ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 191.

2. ದಿನಾಂಕ: 06–07–12 ರಂದು ನಡೆದ ಸಚಿವ ಸಂಪುಟದ ಸಭೆಯ ನಿರ್ಣಯ (ಪ್ರಕರಣ ಸಂಖ್ಯೆ: ಸಿ:324/12)

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: 1ರಲ್ಲಿ 12–13ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 191ರಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಯವರು "ಭಾರತೀಯ ವಿಜ್ಞಾನ ಸಂಸ್ಥೆಯ ಚಳ್ಳಕೆರೆ ಕ್ಯಾಂಪಸ್‌ನಲ್ಲಿ ಸೌರಶಕ್ತಿ ಉತ್ಪಾದನೆ ಮತ್ತು ಸಂಶೋಧನಾ ಕೇಂದ್ರ ಸ್ಥಾಪನೆಗೆ 10 ಕೋಟಿ ರೂ.ಗಳ ನೆರವನ್ನು ಒದಗಿಸಲಾಗುವುದು" ಎಂದು ಘೋಷಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: 2ರಲ್ಲಿ ದಿನಾಂಕ: 06/07/2012 ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ವತಿಯಿಂದ 10 ಕೋಟಿ ರೂ.ಗಳಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಭಾರತೀಯ ವಿಜ್ಞಾನ ಸಂಸ್ಥೆಯ ಚಳ್ಳಕೆರೆ ಕ್ಯಾಂಪಸ್‌ನಲ್ಲಿ ಸೌರಶಕ್ತಿ ಉತ್ಪಾದನೆ ಮತ್ತು ಸಂಶೋಧನಾ ಕೇಂದ್ರ (Solar Power Generation And Research Centre at challakere Campus of Indian Institute of Science) ಸ್ಥಾಪನೆಗೆ ತನ್ನ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ.

ಸಚಿವ ಸಂಪುಟದ ನಿರ್ಣಯದನ್ವಯ ಭಾರತೀಯ ವಿಜ್ಞಾನ ಸಂಸ್ಥೆಯ ವತಿಯಿಂದ 10 ಕೋಟಿ ರೂ.ಗಳಲ್ಲಿ ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆಯ ಭಾರತೀಯ ವಿಜ್ಞಾನ ಸಂಸ್ಥೆ ಕ್ಯಾಂಪಸ್ ನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಸೌರಶಕ್ತಿ ಉತ್ಪಾದನೆ ಮತ್ತು ಸಂಶೋಧನಾ ಕೇಂದ್ರ (Solar Power Generation And Research Centre) ಸ್ಥಾಪನೆಗೆ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ವಿಯಇ 83 ವಿತ್ರಮ 2012, ಬೆಂಗಳೂರು, ದಿನಾಂಕ: 12/07/2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ವತಿಯಿಂದ ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆಯ ಭಾರತೀಯ ವಿಜ್ಞಾನ ಸಂಸ್ಥೆ ಕ್ಯಾಂಪಸ್‌ನಲ್ಲಿ 10 ಕೋಟಿ ರೂ.ಗಳ ವೆಚ್ಚದಲ್ಲಿ (ರೂಪಾಯಿ ಹತ್ತು ಕೋಟಿಗಳು ಮಾತ್ರ) ಸೌರಶಕ್ತಿ ಉತ್ಪಾದನೆ ಮತ್ತು ಸಂಶೋಧನ ಕೇಂದ್ರ (Solar Power Generation And Research Centre) ಸ್ಥಾಪನೆಗೆ ಆಡಳಿತಾತ್ಮಕ ಅನುಮೋದನೆ ಮಂಜೂರಾತಿ ನೀಡಲಾಗಿದೆ.

ಸೌರಶಕ್ತಿ ಉತ್ಪಾದನೆ ಮತ್ತು ಸಂಶೋಧನಾ ಕೇಂದ್ರವನ್ನು ರೂ.1000.00 ಲಕ್ಷಗಳ ಅನುದಾನದಲ್ಲಿ ಚಳ್ಳಕೆರೆ ಭಾರತೀಯ ವಿಜ್ಞಾನ ಕೇಂದ್ರ ಕ್ಯಾಂಪಸ್ ನಲ್ಲಿ ಸ್ಥಾಪಿಸುವುದು.

ಈ ಆದೇಶವನ್ನು ದಿನಾಂಕ:06/07/12 ರಂದು ನಡೆದ ಸಚಿವ ಸಂಪುಟ ಸಭೆಯ ತೀರ್ಮಾನದನ್ವಯ ಹೊರಡಿಸಲಾಗಿದೆ (ಪ್ರಕರಣ ಸಂಖ್ಯೆ:ಸಿ:324/12)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಮದ್ದಾವಿ ಎ.ಎಸ್.
ಸರ್ಕಾರದ ಅಧೀನ ಕಾರ್ಯದರ್ಶಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

PR. 1839

ತೋಟಗಾರಿಕೆ ಸಚಿವಾಲಯ

ಸರ್ಕಾರದ ಆದೇಶ ಸಂಖ್ಯೆ: ತೋಇ 75 ತೋಇವಿ 2009 ಬೆಂಗಳೂರು ದಿನಾಂಕ: 24/07/12

ವಿಷಯ: ಕೋಲಾರ ಜಿಲ್ಲೆಯ ಟಮಕ ತೋಟಗಾರಿಕೆ ಕ್ಷೇತ್ರದಲ್ಲಿ 40 ಎಕರೆ ಜಮೀನನ್ನು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಗೆ ಹಸ್ತಾಂತರಿಸುವ ಬಗ್ಗೆ.

ಓದಲಾಗಿದೆ: 1. ತೋಟಗಾರಿಕೆ ನಿರ್ದೇಶಕರ ಆದೇಶ ಸಂಖ್ಯೆ: ತೋಇ/ ತೋಅನಿ (ಕ್ಷೇ/ಸ))/ ಸತೋಅ–2/27/08–09 ದಿನಾಂಕ: 20/11/2009.

2.ಆದೇಶ ಸಂಖ್ಯೆ: ತೋಇ/75/ತೋಇವಿ 2009 ದಿನಾಂಕ: 05/10/2009.

3.ಕುಲಪತಿಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಇವರ ಪತ್ರ ಸಂಖ್ಯೆ: VC/UHSB/1844/12-13 ದಿನಾಂಕ: 19/06/12.

ಪ್ರಸ್ತಾವನೆ:

ಮೇಲೆ ಓದಲಾದ (1) ರ ತೋಟಗಾರಿಕೆ ನಿರ್ದೇಶಕರ ಕಛೇರಿ ಆದೇಶದನ್ವಯ ಕೋಲಾರ ಜಿಲ್ಲೆಯ ಟಮಕ ತೋಟಗಾರಿಕೆ ಕ್ಷೇತ್ರದಲ್ಲಿ 40.00 ಎಕರೆ ಜಮೀನನ್ನು ಕೃಷಿ ವಿಜ್ಞಾನ ಕೇಂದ್ರ ಸ್ಥಾಪಿಸಲು ಸದರಿ ಕ್ಷೇತ್ರದ ಸಂಪೂರ್ಣ ಒಡೆತನವನ್ನು ತೋಟಗಾರಿಕೆ ಇಲಾಖೆಯಲ್ಲಿಯೇ ಉಳಿಸಿಕೊಳ್ಳುವ ಷರತ್ತಿನೊಂದಿಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆರವರಿಗೆ ಅನುಮತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರ ಆದೇಶದಲ್ಲಿ ಟಮಕ ತೋಟಗಾರಿಕೆ ಕ್ಷೇತ್ರದಲ್ಲಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಇವರು ಸಂಶೋಧನೆ, ವಿಸ್ತರಣೆ ಹಾಗೂ ತರಬೇತಿ ಕಾರ್ಯಕ್ರಮ ಕೈಗೊಳ್ಳಲು ಮತ್ತು I.C.A.R. ನಿಂದ ಕೃಷಿ ವಿಜ್ಞಾನ ಕೇಂದ್ರ ಸ್ಥಾಪಿಸಲು ಅನುಮತಿ ನೀಡಲಾಗಿದೆ.

ಮೇಲೆ ಓದಲಾದ (3) ರ ಪತ್ರದಲ್ಲಿ ಕುಲಪತಿಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆರವರು ಕೋಲಾರ ಜಿಲ್ಲೆಯ ಟಮಕ ತೋಟಗಾರಿಕೆ ಕ್ಷೇತ್ರದಲ್ಲಿ ಕೃಷಿ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಲು ಜಮೀನಿನ ಸಂಪೂರ್ಣ ಒಡೆತನವು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ಹೊಂದಬೇಕೆಂದು I.C.A.R ಷರತ್ತು ವಿಧಿಸಿರುವುದರಿಂದ ಟಮಕ ತೋಟಗಾರಿಕೆ ಕ್ಷೇತ್ರದಲ್ಲಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ನೀಡಿರುವ 40.00 ಎಕರೆ ಜಮೀನಿನ ಸಂಪೂರ್ಣ ಒಡೆತನವನ್ನು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಗೆ ಹಸ್ತಾಂತರಿಸಿ ಆದೇಶಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಇವರಿಗೆ ಕೋಲಾರ ಜಿಲ್ಲೆಯ ಟಮಕ ತೋಟಗಾರಿಕೆ ಕ್ಷೇತ್ರದಲ್ಲಿ ಸಂಶೋಧನೆ, ವಿಸ್ತರಣೆ ಹಾಗೂ ತರಬೇತಿ ಕಾರ್ಯಕ್ರಮ ಕೈಗೊಳ್ಳಲು ಮತ್ತು I.C.A.R. ವತಿಯಿಂದ ಕೃಷಿ ವಿಜ್ಞಾನ ಕೇಂದ್ರ ಸ್ಥಾಪಿಸಲು ನೀಡಲಾದ 40.00 ಎಕರೆ ಜಮೀನಿನ ಸಂಪೂರ್ಣ ಒಡೆತನವನ್ನು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಇವರಿಗೆ ಹಸ್ತಾಂತರಿಸಲು ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿಯ ಕಾರ್ಯಕಾರಿ ಸಮಿತಿಯ ಅನುಮೋದನೆ ಬಾಕಿಯಿಟ್ಟು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಸಿ. ಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ತೋಟಗಾರಿಕೆ ಇಲಾಖೆ.

PR. 2027

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ಡಾ: ರಾಜಶೇಖರಯ್ಯ ಹಿರೇಮಠ್, ವೈದ್ಯರು ದರ್ಜೆ–2, ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಪಾಮನಕಲ್ಲೂರು, ಮಾನ್ವಿ, ರಾಯಚೂರು ಜಿಲ್ಲೆ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಆಯುಷ್/10/ಸಿ(4)/10–11, ದಿನಾಂಕ: 29/05/12.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಆಯುಷ್ ನಿರ್ದೇಶಕರು, ಡಾ: ರಾಜಶೇಖರಯ್ಯ ಹಿರೇಮಠ್, ವೈದ್ಯರು ದರ್ಜೆ–2, ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಪಾಮನಕಲ್ಲೂರು, ಮಾನ್ವಿ, ರಾಯಚೂರು ಇವರು ದಿ: 27.10.86ರಂದು ವೈ.ದರ್ಜೆ–2 ಹುದ್ದೆಗೆ ಹಾಜರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರೆಂದು, ತದನಂತರದಲ್ಲಿ ಜಿಲ್ಲಾ ಆಯುಷ್ ಅಧಿಕಾರಿಗಳು ದಿ: 20.10.2009, 26.10.2009 ಹಾಗೂ 12.03.2010ರಂದು ಅನಿರೀಕ್ಷಿತವಾಗಿ ಚಿಕಿತ್ಸಾಲಯಕ್ಕೆ ಭೇಟಿ ಮಾಡಿದಾಗ ಸದರಿ ವೈದ್ಯರು ದಿ: 01.10.2009 ರಿಂದ ಇಲ್ಲಿಯವರೆಗೆ ಸಕ್ಷಮ ಪ್ರಾಧಿಕಾರದಿಂದ ರಜೆ ಮಂಜೂರಾತಿ ಪಡೆಯದೇ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿರುತ್ತಾರೆಂದೂ, ಮದ್ಯಪಾನ ಸೇವಿಸಿ ಕರ್ತವ್ಯಕ್ಕೆ ಹಾಜರಾಗಿರುವುದು, 2009–10ನೇ ಸಾಲಿನಲ್ಲಿ ಔಷಧಿ ಖರೀದಿಗೆ ಬಿಡುಗಡೆಯಾದ ಅನುದಾನವನ್ನು ಉಪಯೋಗಿಸಿಕೊಳ್ಳದೇ ಕರ್ತವ್ಯದಲ್ಲಿ ನಿರ್ಲಕ್ಷತೆ ತೋರಿಸಿರುತ್ತಾರೆಂದು, ಅನಧಿಕೃತ ಗೈರುಹಾಜರಾಗಿದ್ದರೂ, ಗೈರು ಹಾಜರಾದ ಅವಧಿಗೆ ತಮ್ಮ ಹಣ ಸೆಳೆಯುವ ಮತ್ತು ಸರಬರಾಜಿನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು, ನಡತೆ ನಿಯಮಗಳನ್ನು ಉಲ್ಲಂಘಿಸಿರುತ್ತಾರೆಂದು, ತತ್ಸಂಬಂಧವಾಗಿ ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ(ಸಿಸಿಎ) ನಿಯಮಗಳನ್ವಯ ಜಾರಿ ಮಾಡಲಾದ ದೋಷಾರೋಪಣೆ ಪಟ್ಟಿಯಲ್ಲಿ ಹೊರೆಸಿದ್ದ ಎಲ್ಲಾ ಆರೋಪಗಳು ರುಜುವಾತಾಗಿದೆಯೆಂದು ವಿಚಾರಣಾಧಿಕಾರಿಗಳು ವಿಚಾರಣಾ ವರದಿ ನೀಡಿರುತ್ತಾರೆಂದು ತಿಳಿಸುತ್ತಾರೆ.

ಮುಂದುವರೆದು, ಡಾ: ರಾಜಶೇಖರಯ್ಯ ಹಿರೇಮಠ್, ವೈದ್ಯರು ದರ್ಜೆ–2, ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಪಾಮನಕಲ್ಲೂರು, ಮಾನ್ವಿ ರಾಯಚೂರು ಇವರು ಹುದ್ದೆಗೆ ನಿಗದಿಪಡಿಸಿರುವ ಇಲಾಖಾ ಪರೀಕ್ಷೆಗಳನ್ನು ಇದುವರೆವಿಗೂ ಪಾಸು ಮಾಡದೇ ಇರುವುದರಿಂದ ಸದರಿಯವರ ಖಾಯಂಪೂರ್ವ ಅವಧಿಯ ಘೋಷಣೆಯಾಗಿರುವುದಿಲ್ಲವಾದ್ದರಿಂದ ಸದರಿಯವರು ವೈದ್ಯಾಧಿಕಾರಿ ಹುದ್ದೆಯನ್ನು ಹೊಂದಲು ಅನರ್ಹರಾಗಿರುತ್ತಾರೆಂದು ತಿಳಿಸುತ್ತಾ, ಸದರಿಯವರನ್ನು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ ಅವಧಿ) ನಿಯಮಾವಳಿಗಳು 1977ರ ನಿಯಮ 6ರನ್ವಯ ಸರ್ಕಾರಿ ಸೇವೆಯಿಂದ ವಿಮುಕ್ತಿಗೊಳಿಸಲು ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 325 ಪಿಐಎಂ 2012, ಬೆಂಗಳೂರು, ದಿನಾಂಕ: 17.07.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಡಾ: ರಾಜಶೇಖರಯ್ಯ ಹಿರೇಮಠ್, ವೈದ್ಯರು ದರ್ಜೆ–2(ಆ), ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಪಾಮನಕಲ್ಲೂರು, ಮಾನ್ವಿ, ರಾಯಚೂರು ಇವರು ಖಾಯಂಪೂರ್ವ ಸೇವಾ ಅವಧಿಯಲ್ಲಿ ದಿ:01–10–2009 ರಿಂದ ಇಲ್ಲಿಯವರೆಗೆ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುವುದರೊಂದಿಗೆ ಮೇಲಧಿಕಾರಿಗಳ ನಿರ್ದೇಶನಗಳನ್ನು ಧಿಕ್ಕರಿಸಿ, ಕರ್ತವ್ಯ ನಿರ್ವಹಣೆಯಲ್ಲಿ ಗಂಭೀರ ಸ್ವರೂಪದ ದುರ್ನಡತೆ ಎಸಗಿರುತ್ತಾರೆ. ಸದರಿಯವರ ಸೇವೆಯು ತೃಪ್ತಿಕರವಾಗಿಲ್ಲದೆ ಇರುವುದರಿಂದ ಸದರಿಯವರನ್ನು ದಿ: 01.10.09 ರಿಂದ ಜಾರಿಗೆ ಬರುವಂತೆ ಕರ್ನಾಟಕ ನಾಗರಿಕ ಸೇವಾ (ಪ್ರೊಬೇಷನ್)ನಿಯಮಾವಳಿ 1977ರ ನಿಯಮ–6ರನ್ವಯ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಎನ್. ಹರಿಣಿಯಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. (ಭಾರತೀಯ ವೈದ್ಯ ಪದ್ಧತಿ)

PR. 2012

ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ: Sri AC Keshavamurthy, IFS ಇವರ ದಿ: 30.05.12ರ ನವದೆಹಲಿ ಭೇಟಿ ಬಗ್ಗೆ ಘಟನೋತ್ತರ ಅನುಮೋದನೆ

ಓದಲಾಗಿದೆ: ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ರಾಷ್ಟ್ರೀಯ ಅರಣ್ಯ ಅಭಿವೃದ್ಧಿ ಮತ್ತು ಬೊಂಬು ಮಿಷನ್ ಯೋಜನೆ),ಬೆಂಗಳೂರುರವರ ಪತ್ರ ದಿ: 28.05.12

ಪ್ರಸ್ತಾವನೆ:

Government of India, Ministry of Evironment and Forests, NewDelhi ಇವರು ನವದೆಹಲಿಯಲ್ಲಿ ದಿ:30–05–12ರಂದು ಆಯೋಜಿಸಿರುವ review meeting with Nodal Officers of State Forests Department Agencies and the Co-ordinators of the Regional Centres of NAEB ನಲ್ಲಿ ಭಾಗವಹಿಸಲು ಸರ್ಕಾರದ ಅನುಮತಿ ನೀಡುವಂತೆ, Sri AC Keshavamurthy, IFS, ರವರು ಮೇಲೆ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಶವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಅಪಜೀ 059 ಅತಶಿ 2012, ಬೆಂಗಳೂರು ದಿನಾಂಕ: 07–07–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, Sri AC Keshavamurthy, IFS, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ರಾಷ್ಟ್ರೀಯ ಅರಣ್ಯ ಅಭಿವೃದ್ಧಿ ಮತ್ತು ಬೊಂಬು ಮಿಷನ್ ಯೋಜನೆ) ಬೆಂಗಳೂರು ಇವರು ನವದೆಹಲಿಯಲ್ಲಿ ದಿ: 30.05.12ರಂದು ಆಯೋಜಿಸಿರುವ review meeting with Nodal Officers of State Forests Department Agencies and the Co-ordinators of the Regional Centres of NAEB ನಲ್ಲಿ ಭಾಗವಹಿಸಲು ನವದೆಹಲಿಗೆ ಭೇಟಿ ನೀಡಿದ ಪ್ರವಾಸಕ್ಕೆ ಸರ್ಕಾರದ ಘಟನೋತ್ತರ ಅನುಮೋದನೆ ನೀಡಲಾಗಿದೆ.

ಸದರಿ ಪ್ರವಾಸಕ್ಕೆ ನಿಯಮಾನುಸಾರದಂತೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಯನ್ನು ಪಡೆಯಲು ಅಧಿಕಾರಿಯು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಬಾಲಕೃಷ್ಣಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು)
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

PR. 2010

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ: Chief Conservator of Forests (National Forestry Action Programme and Bamboo Mission), Bangalore ಹುದ್ದೆಯನ್ನು ಮುಂದುವರಿಸುವ ಬಗ್ಗೆ ಆದೇಶ.

ಓದಲಾಗಿದೆ:
1. ದಿ: 13.08.2010 ರ ಆದೇಶ ಸಂಖ್ಯೆ: ಅಪಜೀ 109 ಅಪಸೇ 2010.
2. ದಿ: 22–08–2011ರ ಆದೇಶ ಸಂಖ್ಯೆ: ಅಪಜೀ 120 ಅಪಸೇ 2011.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಪತ್ರ ಸಂಖ್ಯೆ: A1. IFS. CR-08/10-11 DATED: 26/03/12.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಆದೇಶದಲ್ಲಿ Chief Conservator of Forests (National Forestry Action programme and Bamboo Mission),), Bangalore ಹುದ್ದೆಯನ್ನು ವೇತನ ಶ್ರೇಣಿ ರೂ.37400–67000+10000ರಲ್ಲಿ ex-cadre ಹುದ್ದೆಯಾಗಿ ದಿ: 27/05/2010 ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಹೊಸದಾಗಿ ಸೃಜಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಈ ಹುದ್ದೆಯನ್ನು ದಿ: 27/05/2011 ರಿಂದ ಜಾರಿಗೆ ಬರುವಂತೆ ಮತ್ತೊಂದು ವರ್ಷಕ್ಕೆ ಮುಂದುವರಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪ್ರಸ್ತಾವನೆಯಲ್ಲಿ National Forestry Action Programme and Bamboo Mission ಯೋಜನೆಯನ್ನು ಕೇಂದ್ರ ಸರ್ಕಾರದ ಅನುದಾನದಿಂದ ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ಈ ಹುದ್ದೆಯನ್ನು ದಿ: 27/05/12 ರಿಂದ ಜಾರಿಗೆ ಬರುವಂತೆ ಮತ್ತೊಂದು ವರ್ಷಕ್ಕೆ ಮುಂದುವರಿಸುವಂತೆ ಕೋರಲಾಗಿದೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಅಪಜೀ 113 ಅಪಸೇ 12, ಬೆಂಗಳೂರು ದಿನಾಂಕ: 20–07–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಸರ್ಕಾರವು Chief Conservator of Forests (National Forestry Action programme and Bamboo Mission) Bangalore ಹುದ್ದೆಯನ್ನು ex-cadre ಹುದ್ದೆಯಾಗಿ ದಿ: 27/05/12 ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಮುಂದುವರಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಸಂಖ್ಯೆ: ಆಇ 612 ವೆಚ್ಚ–5/12, ದಿ: 14–05–12 ರಲ್ಲಿ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಸಂಖ್ಯೆ: ಸಿಆಸುಇ 100 ಎಸ್‌ಎಫ್‌ಪಿ 2012, ದಿ: 16/06/12 ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಬಾಲಕೃಷ್ಣಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು)
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

PR. 2042

ಇಂಧನ ಸಚಿವಾಲಯ

ವಿಷಯ: ಮೆ: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಂಚಿಕೆಯಾಗಿರುವ 200 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 18.4 ಮೆ.ವ್ಯಾ ಸಾಮರ್ಥ್ಯವನ್ನು ಮೆ: ರಿನೀವ್ ವಿಂಡ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್, ರವರಿಗೆ ವರ್ಗಾವಣೆ ಮಾಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 42 ಎನ್‌ಸಿಇ 2006 ದಿನಾಂಕ: 20.4.2006.

2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 462 ಎನ್‌ಸಿಇ 2006 ದಿನಾಂಕ: 19.12.2006.

3) ಸರ್ಕಾರಿ ಆದೇಶ ಸಂಖ್ಯೆ: ಇಎನ್ 322 ಎನ್‌ಸಿಇ 2011 ದಿನಾಂಕ: 28.10.2011.

4) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರಸಂಖ್ಯೆ:ಕೆಆರ್‌ಇಡಿ/08/RWEKPL-18.4 MW (VWILLP-200 MW)/2012/2456 ದಿನಾಂಕ: 3/6.09.2012 ಮತುಕೆಆರ್‌ಇಡಿ/08/RWEKPL 18.4 MW (VWILLP-200MW)/2012/2581 ದಿನಾಂಕ: 28/29.09.2012

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: Logaer Machines (I) Ltd. ಕಂಪನಿಗೆ ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ 150.66 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: Logaer Machines (I) Ltd. ಕಂಪನಿಯ ಹೆಸರನ್ನು ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಎಂದು ಬದಲಾಯಿಸಲು ಹಾಗೂ ಮೆ:: Logaer Machines (I) Ltd. ರವರಿಗೆ ಹಂಚಿಕೆಯಾಗಿರುವ ಎಲ್ಲಾ ಪವನ ವಿದ್ಯುತ್ ಯೋಜನೆಗಳನ್ನು ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಇವರಿಗೆ ವರ್ಗಾಯಿಸಲು ಅನುಮೋದನೆ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ, ಕಂಪನಿಗೆ ಮಂಜೂರಾಗಿದ್ದ 150.66 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅಂಶಿಕ ಸಾಮರ್ಥ್ಯವಾದ 69.63 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 200 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಈ ಕೆಳಕಂಡ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹೆಚ್ಚಿಸಿ ಆದೇಶಿಸಲಾಗಿತ್ತು.

Sl No.	Geographical Area Details of the Project	Sanctioned capacity in MW	Enhancement Proposed in MW	No. of WTGs & rating in KW
1	A large plain area spread around the village of Timmapura, Kabnur, Ingalagi, Ramapura in Haveri and Dharwad District and it also consists of plains with higher elevations and has two main peaks. The proposed area is held by the following Geographical co-oridinates :- **Latitude**: 15°1'55"- 15°8'0" N **Longitude**: 75°08'56"- 75°14'23" E **Ridge peaks:** 701, 714, 682, 717, 713, 698, 733, 722m AMSL.	19.80 MW	59.40 MW	79.20 MW (99 x 800 KW)
2	A very vast area encompasses high plains and small ridges spread around the villages Kongapura, Sisvinhal, Shanlipur, Huvinsigli, Sigli, Gudgeri and Ramgeri. A railway track runs into this area. This area has moderate evelations varying from 580 to 680 Mtrs and also consists of several peaks. The main places of this areas are Halgur, Gudgeri, Lakshmeshwar, Sigli, Karadgi, Nelgudda etc and the area is covered in the following Geographical co-oridinates :- **Latitude**: 15°0'0"- 15°10'30" N **Longitude**: 75°15'0"- 75°28'19" E **Ridge peaks:** 681, 671, 676, 638, 624, 698, 664, 701, 720, 663, 682, 664, 708, 665, 664m AMSL.	49.83 (part capacity of 67.65 MW)	70.97	120.80 MW (151 x 800 KW)

ಮೇಲೆ ಓದಲಾದ (4)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ : ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಾವೇರಿ ಮತ್ತು ಧಾರವಾಡ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 200 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 18.4 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ: ರಿನೀವ್ ವಿಂಡ್ ಎನರ್ಜಿ (ಕರ್ನಾಟಕ) ಪ್ರೈವೇಟ್

ಲಿಮಿಟೆಡ್ ರವರಿಗೆ ವರ್ಗಾಯಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ ಹಾಗೂ ಮಂಜೂರಾಗಿರುವ ಒಟ್ಟು 200 ಮೆ.ವ್ಯಾ. ಸಾಮರ್ಥ್ಯದಲ್ಲಿ 85.60 ಮೆ.ವ್ಯಾ. ಸಾಮರ್ಥ್ಯವನ್ನು ಈಗಾಗಲೇ ಅನುಷ್ಠಾನಗೊಳಿಸಿರುವುದಾಗಿ ತಿಳಿಸಿರುತ್ತಾರೆ. ಅಲ್ಲದೆ, ಸದರಿ ಯೋಜನೆಗೆ ಅವಶ್ಯಕವಾದ ಭೂಮಿಯು ಖಾಸಗಿ ಜಮೀನಾಗಿದ್ದು, ಈ ಯೋಜನೆಯನ್ನು ಆದೇಶ ಹೊರಡಿಸಿದ ದಿನಾಂಕದಿಂದ 10 ತಿಂಗಳೊಳಗಾಗಿ ಅನುಷ್ಠಾನಗೊಳಿಸುವ, ಉತ್ಪಾದನೆ ಆಗುವ ವಿದ್ಯುತ್ತನ್ನು ಭಾಗಶಃ ಸ್ವಂತ ಬಳಕೆಗಾಗಿ ಮತ್ತು ಉಳಿದಿರುವುದನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮೂಲಕ ಮಾರಾಟ ಮಾಡಲಾಗುವುದೆಂದು ವರದಿ ಮಾಡಿರುತ್ತಾರೆ. ದಿನಾಂಕ 28/29.09.2012ರ ಕೆ.ಆರ್.ಇ.ಡಿ.ಎಲ್. ಪತ್ರದಲ್ಲಿ ಅಭಿವೃದ್ಧಿದಾರರು ಮಂಜೂರಾಗಿರುವ ಒಟ್ಟು ಸಾಮರ್ಥ್ಯದಲ್ಲಿ ಈಗಾಗಲೇ 94.4 ಮೆ.ವ್ಯಾ. ಸಾಮರ್ಥ್ಯವನ್ನು ಅನುಷ್ಠಾನಗೊಳಿಸಿರುವುದಾಗಿ ಉಳಿದ ಸಾಮರ್ಥ್ಯವನ್ನು ಮುಂದಿನ 6–7 ತಿಂಗಳಲ್ಲಿ ಅನುಷ್ಠಾನಗೊಳಿಸುವುದಾಗಿ ತಿಳಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 274 ಎನ್‌ಸಿಇ 2012, ಬೆಂಗಳೂರು, ದಿನಾಂಕ: 17.10.2012.

ಮೆ : ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಾವೇರಿ ಮತ್ತು ಧಾರವಾಡ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 200 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 18.4 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ:: ರಿನೀವ್ ವಿಂಡ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್ ರವರಿಗೆ ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತಿಗೊಳಪಟ್ಟು **ವರ್ಗಾಯಿಸಲಾಗಿದೆ:–**

Sl. No.	Village Name	Taluk/ District	MW	Land Survey number	WTG's No.	Extent of Land per WTG (Acres)	Latitude, Longitude and Ridge peaks
1	Panigatti	Shiggaon/Haveri	0.80	52/1, 52/2/2	159	1.10	Lat: 15°6'27.21" N Long: 75°16'26.17'' E
2	Panigatti	Shiggaon/Haveri	0.80	67/4A+4B	161	1.10	Lat: 15°6'49.35" N Long: 75°16'21.04'' E
3	Basavanal	Shiggaon/ Haveri	0.80	36/1	158	1.10	Lat: 15°7'4.00" N Long: 75°16'47.46'' E
4	Hulagur	Shiggaon/Haveri	0.80	322/1+2C	155	1.10	Lat: 15°6'34.04" N Long: 75°16'56.43'' E
5	Basavanal	Shiggaon/Haveri	0.80	15/6+7+8+9A	154	1.10	Lat: 15°6'21.66" N Long: 75°17'4.39'' E
6	Nelagudda	Kundgol/ Dharwad	0.80	102/1+2c+d/2	174	1.10	Lat: 15°7'31.48" N Long: 75°16'8.59'' E
7	Ingalgi	Shiggaon/Haveri	0.80	169/2	163	0.50	Lat: 15°5'54.58" N Long: 75°15'15.79'' E
8	Belavalakoppa	Shiggaon/Haveri	0.80	77/2	165	1.10	Lat: 15°6'1.46" N Long: 75°15'47.61'' E
9	Nelagudda	Kundgol/ Dharwad	0.80	115/2	172	1.10	Lat: 15°7'8.44" N Long: 75°16'7.42'' E
10	Panigatti	Shiggaon/Haveri	0.80	63/1	160	1.10	Lat: 15°6'39.42" N Long: 75°16'22.80'' E
11	Ingalagi	Kundgol/ Dharwad	0.80	207/2	171	1.10	Lat: 15°7'4.74'' N Long: 75°15'41.76'' E
12	Ingalagi	Kundgol/ Dharwad	0.80	18, 11, 82,183	170	1.10	Lat: 15°6'54.66" N Long: 75°15'48.95'' E
13	Ingalagi	Kundgol/ Dharwad	0.80	185/8+9	169	1.10	Lat: 15°6'43.47" N Long: 75°15'45.48'' E
14	Ingalagi	Kundgol/ Dharwad	0.80	177	168	1.10	Lat: 15°6'41.36" N Long: 75°16'4.51'' E
15	Ingalagi	Kundgol/ Dharwad	0.80	17, 61, 75, 174	167	1.10	Lat: 15°6'14.34" N Long: 75°15'55.73'' E

Sl. No.	Village Name	Taluk/ District	MW	Land Survey number	WTG's No.	Extent of Land per WTG (Acres)	Latitude, Longitude and Ridge peaks
16	Belavalakoppa	Shiggaon/Haveri	0.80	76, 75, 79	166	1.10	Lat: 15°6'6.41" N Long: 75°15'40.21'' E
17	Belavalakoppa	Shiggaon/Haveri	0.80	81,80,171, 79	162	1.10	Lat: 15°6'0.49" N Long: 75°15'5.17'' E
18	Kyalkonda	Shiggaon/Haveri	0.80	45, 46, 44	164	1.10	Lat: 15°5'49.9" N Long: 75°15'37.59'' E
19	Nelagudda	Kundgol/ Dharwad	0.80	1,13,11,51, 14,113	173	1.10	Lat: 15°7'19.02" N Long: 75°16'3.62'' E
20	Nelagudda	Kundgol/ Dharwad	0.80	3,17,318	157	1.10	Lat: 15°6'55.59" N Long: 75°16'51.26'' E
21	Basavanal	Shiggaon/Haveri	0.80	40,36,39	156	1.10	Lat: 15°6'47.23" N Long: 75°16'54.54'' E
22	Basavanal	Shiggaon/Haveri	0.80	14	153	1.10	Lat: 15°6'1.13" N Long: 75°16'59.86'' E
23	Hulagur	Shiggaon/Haveri	0.80	29,52,94,27,4 2,75,328	152	1.10	Lat: 15°5'20.85" N Long: 75°16'23.69'' E
		Total	**18.4**				

1. **ಮೆ:: ರಿನೀವ್ ವಿಂಡ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್** ರವರು 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 2011 ದಿನಾಂಕ 06.1.2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. **ಮೆ:: ರಿನೀವ್ ವಿಂಡ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್** ರವರು ಸಂಬಂಧಿಸಿದ ಎಸ್ಕಾಂ/ಕೆಪಿಟಿಸಿಎಲ್‌ನೊಂದಿಗೆ ನೀತಿ ನಿಯಮಾನುಸಾರ ವೀಲಿಂಗ್ ಮತ್ತು ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.
3. ಸದರಿ ಯೋಜನೆಯನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ 10 ತಿಂಗಳೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು. ಈ ಕುರಿತಂತೆ ಕ್ರೆಡಲ್ ಅಭಿವೃದ್ಧಿದಾರರಿಂದ ಒಪ್ಪಿಗೆ ಪತ್ರ ಪಡೆಯತಕ್ಕದ್ದು (committment letter)
4. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೌಸಲ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

PR. 2177

ಇಂಧನ ಸಚಿವಾಲಯ

ವಿಷಯ: ಮೆ: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಂಚಿಕೆಯಾಗಿರುವ 200 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 16.00 ಮೆ.ವ್ಯಾ ಸಾಮರ್ಥ್ಯವನ್ನು ಮೆ: ರಿನೀವ್ ವಿಂಡ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್, ರವರಿಗೆ ವರ್ಗಾವಣೆ ಮಾಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 42 ಎನ್‌ಸಿಇ 2006 ದಿನಾಂಕ: 20.4.2006.

2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 462 ಎನ್‌ಸಿಇ 2006 ದಿನಾಂಕ: 19.12.2006.

3) ಸರ್ಕಾರಿ ಆದೇಶ ಸಂಖ್ಯೆ: ಇಎನ್ 322 ಎನ್‌ಸಿಇ 2011 ದಿನಾಂಕ: 28.10.2011.

4) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕನಿರ್ದೇಶಕರ ಪತ್ರಸಂಖ್ಯೆ:ಕೆಆರ್‌ಇಡಿ/08/RWEKPL-16 MW (VWILLP-200 MW)/2012/2471 ದಿನಾಂಕ: 04/07.09.2012.

ಪ್ರಸ್ತಾವನೆ:–

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: Logaer Machines (I) Ltd. ಕಂಪನಿಗೆ ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ 150.66 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: Logaer Machines (I) Ltd. ಕಂಪನಿಯ ಹೆಸರನ್ನು ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಎಂದು ಬದಲಾಯಿಸಲು ಹಾಗೂ ಮೆ:: Logaer Machines (I) Ltd. ರವರಿಗೆ ಹಂಚಿಕೆಯಾಗಿರುವ ಎಲ್ಲಾ ಪವನ ವಿದ್ಯುತ್ ಯೋಜನೆಗಳನ್ನು ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಇವರಿಗೆ ವರ್ಗಾಯಿಸಲು ಅನುಮೋದನೆ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್ಎಲ್ಪಿ, ಕಂಪನಿಗೆ ಮಂಜೂರಾಗಿದ್ದ 150.66 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅಂಶಿಕ ಸಾಮರ್ಥ್ಯವಾದ 69.63 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 200 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಈ ಕೆಳಕಂಡ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹೆಚ್ಚಿಸಿ ಆದೇಶಿಸಲಾಗಿತ್ತು.

Sl No.	Geographical Area Details of the Project	Sanctioned capacity in MW	Enhancement Proposed in MW	No. of WTGs & rating in KW
1	A large plain area spread around the village of Timmapura, Kabnur, Ingalagi, Ramapura in Haveri and Dharwad District and it also consists of plains with higher elevations and has two main peaks. The proposed area is held by the following Geographical co-oridinates :- **Latitude**: 15°1'55"- 15°8'0" N **Longitude**: 75°08'56"- 75°14'23" E **Ridge peaks:** 701, 714, 682, 717, 713, 698, 733, 722m AMSL.	19.80 MW	59.40 MW	79.20MW (99 x 800 KW)
2	A very vast area encompasses high plains and small ridges spread around the villages Kongapura, Sisvinhal, Shanlipur, Huvinsigli, Sigli, Gudgeri and Ramgeri. A railway track runs into this area. This area has moderate evelations varying from 580 to 680 Mtrs and also consists of several peaks. The main places of this areas are Halgur, Gudgeri, Lakshmeshwar, Sigli, Karadgi, Nelgudda etc and the area is covered in the following Geographical co-oridinates :- **Latitude**: 15°0'0"- 15°10'30" N **Longitude**: 75°15'0"- 75°28'19" E **Ridge peaks:** 681, 671, 676, 638, 624, 698, 664, 701, 720, 663, 682, 664, 708, 665, 664m AMSL.	49.83 (part capacity of 67.65 MW)	70.97	120.80 MW (151 x 800 KW)

ಮೇಲೆ ಓದಲಾದ (4)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ : ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್ಎಲ್ಪಿ ಕಂಪನಿಯವರಿಗೆ ಹಾವೇರಿ ಮತ್ತು ಧಾರವಾಡ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 200 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 16.00 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ: ರಿನೀವ್ ವಿಂಡ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್ ರವರಿಗೆ ವರ್ಗಾಯಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ ಹಾಗೂ ಮಂಜೂರಾಗಿರುವ ಒಟ್ಟು 200 ಮೆ.ವ್ಯಾ. ಸಾಮರ್ಥ್ಯದಲ್ಲಿ 85.60 ಮೆ.ವ್ಯಾ. ಸಾಮರ್ಥ್ಯವನ್ನು ಈಗಾಗಲೇ ಅನುಷ್ಠಾನಗೊಳಿಸಿರುವುದಾಗಿ ತಿಳಿಸಿರುತ್ತಾರೆ. ಅಲ್ಲದೆ, ಸದರಿ ಯೋಜನೆಗೆ ಅವಶ್ಯಕವಾದ ಭೂಮಿಯು ಖಾಸಗಿ ಜಮೀನಾಗಿದ್ದು, ಈ ಯೋಜನೆಯನ್ನು ಆದೇಶ ಹೊರಡಿಸಿದ ದಿನಾಂಕದಿಂದ 10 ತಿಂಗಳೊಳಗಾಗಿ ಅನುಷ್ಠಾನಗೊಳಿಸುವ, ಉತ್ಪಾದನೆ ಆಗುವ ವಿದ್ಯುತ್ತನ್ನು ಭಾಗಶಃ ಸ್ವಂತ ಬಳಕೆಗಾಗಿ ಮತ್ತು ಉಳಿದಿರುವುದನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮೂಲಕ ಮಾರಾಟ ಮಾಡಲಾಗುವುದೆಂದು ವರದಿ ಮಾಡಿರುತ್ತಾರೆ. ದಿನಾಂಕ 28/29.09.2012ರ ಕೆ.ಆರ್.ಇ.ಡಿ.ಎಲ್. ಪತ್ರದಲ್ಲಿ ಅಭಿವೃದ್ಧಿದಾರರು ಮಂಜೂರಾಗಿರುವ ಒಟ್ಟು ಸಾಮರ್ಥ್ಯದಲ್ಲಿ ಈಗಾಗಲೇ 94.4 ಮೆ.ವ್ಯಾ. ಸಾಮರ್ಥ್ಯವನ್ನು ಅನುಷ್ಠಾನಗೊಳಿಸಿರುವುದಾಗಿ ಉಳಿದ ಸಾಮರ್ಥ್ಯವನ್ನು ಮುಂದಿನ 6–7 ತಿಂಗಳಲ್ಲಿ ಅನುಷ್ಠಾನಗೊಳಿಸುವುದಾಗಿ ತಿಳಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 275 ಎನ್‌ಸಿಇ 2012, ಬೆಂಗಳೂರು, ದಿನಾಂಕ: 17.10.2012.

ಮೆ : ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್ಎಲ್ಪಿ ಕಂಪನಿಯವರಿಗೆ ಹಾವೇರಿ ಮತ್ತು ಧಾರವಾಡ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 200 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 16.00 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ:: ರಿನೀವ್ ವಿಂಡ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್ ರವರಿಗೆ ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತಿಗೊಳಪಟ್ಟು **ವರ್ಗಾಯಿಸಲಾಗಿದೆ:–**

Sl. No.	Village Name	Taluk/ District	MW	Land Survey number	WTG's No.	Extent of Land per WTG (Acres)	Latitude, Longitude and Ridge peaks
1	Basavanal	Shiggaon/Haveri	0.800	64/1A	180	1.10	Lat: 15°7'26.38" N Long: 75°17'19.43'' E
2	Basavanal	Shiggaon/Haveri	0.800	66/1B	181	1.10	Lat: 15°7'40.5" N Long: 75°17'21.66'' E

Sl. No.	Village Name	Taluk/ District	MW	Land Survey number	WTG's No.	Extent of Land per WTG (Acres)	Latitude, Longitude and Ridge peaks
3	Nelagudda	Kundgol/ Dharwad	0.800	51	182	1.10	Lat: 15°7'46.11" N Long: 75°17'15.57'' E
4	Hulagur	Shiggaon/Haveri	0.800	107	175	1.10	Lat: 15°7'19.95" N Long: 75°18'0.06'' E
5	Hulagur	Shiggaon/Haveri	0.800	116/4A	177	1.10	Lat: 15°7'44.09" N Long: 75°18'8.54'' E
6	Hulagur	Shiggaon/Haveri	0.800	113	176	1.10	Lat: 15°7'27.86" N Long: 75°18'2.18'' E
7	Nelagudda	Kundgol/ Dharwad	0.800	126/4, 125/1	188	0.50	Lat: 15°7'51.81" N Long: 75°16'21.15'' E
8	Nelagudda	Kundgol/ Dharwad	0.800	123/p1	187	1.10	Lat: 15°7'45.07" N Long: 75°16'22.54'' E
9	Ingalagi	Kundgol/ Dharwad	0.800	115/1&2	192	1.10	Lat: 15°7'39.54" N Long: 75°15'47.81'' E
10	Ingalagi	Kundgol/ Dharwad	0.800	126,115,12 5,41	191	1.10	Lat: 15°7'28.74" N Long: 75°15'40.86'' E
11	Ingalagi	Kundgol/ Dharwad	0.800	68,67,66	193	1.10	Lat: 15°7'46.38" N Long: 75°15'48.83'' E
12	Ingalagi	Kundgol/ Dharwad	0.800	3	194	1.10	Lat: 15°7'54.98" N Long: 75°15'40.16'' E
13	Nelagudda	Kundgol/ Dharwad	0.800	96,97	190	1.10	Lat: 15°8'4.82" N Long: 75°16'24.71'' E
14	Nelagudda	Kundgol/ Dharwad	0.800	96,97,95	189	1.10	Lat: 15°7'58.63" N Long: 75°16'34.93'' E
15	Nelagudda	Kundgol/ Dharwad	0.800	69,87,88,89	184	1.10	Lat: 15°7'45.94" N Long: 75°16'57.97'' E
16	Nelagudda	Kundgol/ Dharwad	0.800	74,73,71	186	1.10	Lat: 15°8'8.31" N Long: 75°17'14.46'' E
17	Nelagudda	Kundgol/ Dharwad	0.800	49,48,50	185	1.10	Lat: 15°7'59.14" N Long: 75°17'10.26'' E
18	Basavanal	Shiggaon/Haveri	0.800	70,77,78	183	1.10	Lat: 15°7'55.21" N Long: 75°17'25.67'' E
19	Hulagur	Shiggaon/Haveri	0.800	1,19,122	179	1.10	Lat: 15°8'8.75" N Long: 75°17'52.79'' E
20	Basavanal	Shiggaon/Haveri	0.800	77	178	1.10	Lat: 15°7'58.79" N Long: 75°17'51.31'' E
		Total	**16.00**				

1. **ಮೆ:: ರಿನೀವ್ ವಿಂಡ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್** ರವರು 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 2011 ದಿನಾಂಕ 06.1.2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. **ಮೆ:: ರಿನೀವ್ ವಿಂಡ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್** ರವರು ಸಂಬಂಧಿಸಿದ ಎಸ್ಕಾಂ/ಕೆಪಿಟಿಸಿಎಲ್‌ನೊಂದಿಗೆ ನೀತಿ ನಿಯಮಾನುಸಾರ ವೀಲಿಂಗ್ ಮತ್ತು ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.
3. ಸದರಿ ಯೋಜನೆಯನ್ನು ಆದೇಶ ಹೊರಡಿಸಿದ ದಿನಾಂಕದಿಂದ 10 ತಿಂಗಳೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು. ಈ ಕುರಿತಂತೆ ಕ್ರೆಡಲ್ ಅಭಿವೃದ್ಧಿದಾರರಿಂದ ಒಪ್ಪಿಗೆ ಪತ್ರ ಪಡೆಯತಕ್ಕದ್ದು (committment letter).
4. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೌಸಲ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ,

PR. 2178

ಇಂಧನ ಸಚಿವಾಲಯ

ವಿಷಯ: ಮೆ॥ ಸಾಯಿ ನಿರೀಹಾ ಪವರ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಇವರ 5.00 ಮೆಗಾವ್ಯಾಟ್ ಸಾಮರ್ಥ್ಯದಕಟ್ಟೆಪುರ ಕಿರು ಜಲ ವಿದ್ಯುತ್ ಯೋಜನೆಗೆ ಕಾಲಾವಕಾಶ ವಿಸ್ತರಣೆ ಮಾಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 28 ಎನ್‌ಸಿಇ 1996(15) ದಿನಾಂಕ: 24.7.1996.
2) ಸರ್ಕಾರಿ ಆದೇಶ ಸಂಖ್ಯೆ: ಡಿಇ 46 ಎನ್‌ಸಿಇ 1997 ದಿನಾಂಕ: 24.06.1999.
3) ಸರ್ಕಾರಿ ಆದೇಶ ಸಂಖ್ಯೆ: ಡಿಇ 3 ಎನ್‌ಸಿಇ 2002 ದಿನಾಂಕ: 1.04.2002.
4) ಸರ್ಕಾರಿ ಆದೇಶ ಸಂಖ್ಯೆ: ಡಿಇ 248 ಎನ್‌ಸಿಇ 2004 ದಿನಾಂಕ: 26.08.2004.
5) ಸರ್ಕಾರಿ ಆದೇಶ ಸಂಖ್ಯೆ: ಇಎನ್ 520 ಎನ್‌ಸಿಇ 2008, ದಿನಾಂಕ: 29.06.2010.
6) ಸರ್ಕಾರಿ ಆದೇಶ ಸಂಖ್ಯೆ: ಇಎನ್ 428 ಎನ್‌ಸಿಇ 2011, ದಿನಾಂಕ: 29.12.2012.
7) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/SH-30/ಕಟ್ಟೆಪುರ ಎಂಹೆಚ್‌ಎಸ್/2012/2625 ದಿನಾಂಕ: 05/06.10.2012.

ಪ್ರಸ್ತಾವನೆ:–

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಪೇಪರ್ ಪ್ಯಾಕಿಂಗ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಹಾಸನ ಜಿಲ್ಲೆಯ ಕಟ್ಟೆಪುರದಲ್ಲಿ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಮೆ॥ ಪೇಪರ್ ಪ್ಯಾಕಿಂಗ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯ ಹೆಸರನ್ನು ಮೆ॥ ಬ್ರೈಟ್ ವಿದ್ಯುತ್ ಕಂಪನಿ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಿ 5.00 ಸಾಮರ್ಥ್ಯದ ಕಟ್ಟೆಪುರ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಮೆ॥ ಬ್ರೈಟ್ ವಿದ್ಯುತ್ ಕಂಪನಿ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯ ಹೆಸರನ್ನು ಮೆ॥ ಕಾವೇರಿ ಹೈಡ್ರೊ ಎನರ್ಜಿ ಲಿಮಿಟೆಡ್ ಎಂದು ಬದಲಾಯಿಸಿ 5.00 ಸಾಮರ್ಥ್ಯದ ಕಟ್ಟೆಪುರ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ ಮೇಲ್ಕಂಡ ಯೋಜನೆಯನ್ನು ಮೆ॥ ಸಾಯಿ ನಿರೀಹಾ ಪವರ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ರವರಿಗೆ ವರ್ಗಾಯಿಸಿ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಆದೇಶದಲ್ಲಿ ಮೆ॥ ಸಾಯಿ ನಿರೀಹಾ ಪ್ರೈವೇಟ್ ಲಿಮಿಟೆಡ್ ಇವರಿಗೆ ಹಾಸನ ಜಿಲ್ಲೆಯ ಕಟ್ಟೆಪುರ ಎಂಬಲ್ಲಿ ಹಂಚಿಕೆಯಾಗಿದ್ದ ಮೇಲ್ಕಂಡ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಾವಕಾಶವನ್ನು ದಿನಾಂಕ: 1.10.2009 ರಿಂದ ಮುಂದಿನ 2 ವರ್ಷಗಳ ಅವಧಿಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಆದೇಶದಲ್ಲಿ ಮೆ॥ ಸಾಯಿ ನಿರೀಹಾ ಪ್ರೈವೇಟ್ ಲಿಮಿಟೆಡ್ ಇವರಿಗೆ ಹಾಸನ ಜಿಲ್ಲೆಯ ಕಟ್ಟೆಪುರ ಎಂಬಲ್ಲಿ ಹಂಚಿಕೆಯಾಗಿದ್ದ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಕೊನೆಯದಾಗಿ ಕಾಲಾವಕಾಶವನ್ನು ದಿನಾಂಕ 01.10.2011 ರಿಂದ 30.09.2012ರವರೆಗೆ ಕೆಲವೊಂದು ಷರತ್ತಿಗೊಳಪಟ್ಟು ವಿಸ್ತರಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರು ಮೆ॥ ಸಾಯಿ ನಿರೀಹಾ ಪವರ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಕಟ್ಟೆಪುರ ಎಂಬಲ್ಲಿ ಹಂಚಿಕೆಯಾಗಿರುವ 5.00 ಮೆ.ವ್ಯಾ. ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಕೆಲಸ ಕಾರ್ಯಗಳು ಪ್ರಗತಿಯಲ್ಲಿದ್ದು, ಈ ಯೋಜನೆಗೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ನಿರಾಕ್ಷೇಪಣೆಯನ್ನು ಪಡೆದಿರುತ್ತಾರೆಂದು ಹಾಗೂ ರೂ. 42.00 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಿದ್ದು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ರವರು ಟ್ಯಾಪ್‌ಮಾಡುವ ರಾಮನಾಥಪುರ ಸಬ್ ಸ್ಟೇಷನ್‌ನಲ್ಲಿ ಹೊಸದಾಗಿ ಬೇ (Bay) ಒಂದು ನಿರ್ಮಾಣವಾಗಬೇಕಿದ್ದು, ಈ ಕಾಮಗಾರಿಯಲ್ಲಿ ಆಗಿರುವ ವಿಳಂಬದಿಂದ ಯೋಜನೆಯನ್ನು ನಿಗದಿತ ಅವಧಿಯಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಾಗದಿರುವುದರಿಂದ, ಸದರಿ ಯೋಜನೆಯ ಅನುಷ್ಠಾನಕ್ಕೆ 6 ತಿಂಗಳು ಕಾಲಾವಕಾಶ ವಿಸ್ತರಿಸಲು ಅಭಿವೃದ್ಧಿದಾರರು ಕೋರಿರುವುದರಿಂದ ಈಗಾಗಲೇ ಪಾವತಿಸಿರುವ ರೂ. 15.00 ಲಕ್ಷಗಳ ನೇರವೇರಿಕೆ ಖಾತರಿ (Performance Guarantee) ಮೊತ್ತವನ್ನು ದಿನಾಂಕ 01.10.2012ರಿಂದ ಮುಂದಿನ 6 ತಿಂಗಳವರೆಗೆ ವಿಸ್ತರಿಸಿ ಈ ಅವಧಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸದಿದ್ದಲ್ಲಿ ನೇರವೇರಿಕೆ ಖಾತರಿಯನ್ನು ನಗದೀಕರಿಸಿಕೊಳ್ಳುವ ಷರತ್ತಿಗೊಳಪಟ್ಟು ಕಾಲಾವಕಾಶವನ್ನು ವಿಸ್ತರಿಸಲು ಪ್ರಸ್ತಾವನೆಯನ್ನು ಶಿಫಾರಸ್ಸಿಸಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 307 ಎನ್‌ಸಿಇ 2012,ಬೆಂಗಳೂರು, ದಿನಾಂಕ: 22.10.2012.

ಮೆ॥ ಸಾಯಿ ನಿರೀಹಾ ಪವರ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಕಟ್ಟೆಪುರ ಎಂಬಲ್ಲಿ ಹಂಚಿಕೆಯಾಗಿರುವ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಅಂತಿಮವಾಗಿ ಕಾಲಾವಕಾಶವನ್ನು **ದಿನಾಂಕ 01.10.2012 ರಿಂದ 31.03.2013 ರವರೆಗೆ** ಕೆಳಕಂಡ ಷರತ್ತಿಗೊಳಪಟ್ಟು ವಿಸ್ತರಿಸಲಾಗಿದೆ.

1. ಕೆ.ಆರ್.ಇ.ಡಿ.ಎಲ್.ಗೆ ಪಾವತಿಸಿರುವ ನೇರವೇರಿಕೆ ಖಾತರಿ ಮೊತ್ತದ ಅವಧಿಯನ್ನು ದಿನಾಂಕ 01.10.2012 ರಿಂದ 31.3.2013ರವರೆಗೆ ವಿಸ್ತರಿಸಿದೆ. ಈ ಕಾಲಾವಕಾಶ ವಿಸ್ತರಣಾ ಅವಧಿಯೊಳಗಾಗಿ ಯೋಜನೆಯನ್ನು ಅನುಷ್ಠಾನಗೊಳಿಸದಿದ್ದಲ್ಲಿ ಈಗಾಗಲೇ ಪಾವತಿಸಿರುವ ರೂ. 15.00 ಲಕ್ಷಗಳ ನೇರವೇರಿಕೆ ಖಾತರಿ (Performance Guarantee) ಮೊತ್ತವನ್ನು ಕೆ.ಆರ್.ಇ.ಡಿ.ಎಲ್. ನಗಧೀಕರಿಸಿಕೊಳ್ಳತಕ್ಕದ್ದು
2. ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೌಸಲ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

PR. 2179

ಇಂಧನ ಸಚಿವಾಲಯ

ವಿಷಯ: ಮೆ:: ಪಾವನಗಂಗಾ ಪವರ್ ಪ್ರೈವೇಟ್ ಲಿಮಿಟೆಡ್ ರವರಿಗೆ ಹಂಚಿಕೆಯಾಗಿರುವ 4.5 ಮೆ.ವ್ಯಾ ಗಿರಿಕಾನಹಳ್ಳ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದುಪಡಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 107 ಎನ್‌ಸಿಇ 2001 (2) ದಿನಾಂಕ: 19.9.2001.

2) ಸರ್ಕಾರಿ ಆದೇಶ ಸಂಖ್ಯೆ: ಡಿಇ 107 ಎನ್‌ಸಿಇ 2001 ದಿನಾಂಕ: 27.3.2002.

3) ಸರ್ಕಾರಿ ಆದೇಶ ಸಂಖ್ಯೆ: ಇಎನ್ 341 ಎನ್‌ಸಿಇ 2005 ದಿನಾಂಕ: 11.11.2005

4) ಸರ್ಕಾರಿ ಆದೇಶ ಸಂಖ್ಯೆ: ಇಎನ್ 423 ಎನ್‌ಸಿಇ 2008 ದಿನಾಂಕ: 11.11.2008.

5) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: KRED/08/ SH-78/ಗಿರಿಕಾನಾಹಳ್ಳ ಕಿಜವಿಯೊ/2011/144 ದಿನಾಂಕ: 16/17.01.2012

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರಿ ಆದೇಶದಲ್ಲಿ ಮೆ : ಪಾವನಗಂಗಾ ಪವರ್ ಪ್ರೈವೇಟ್ ಲಿಮಿಟೆಡ್ ರವರಿಗೆ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲ್ಲೂಕಿನ ಹುಲುವತ್ತಿ ಗ್ರಾಮದ ಗಿರಿಕಾನಹಳ್ಳ ತೊರೆಗೆ ಅಡ್ಡಲಾಗಿ 4.5 ಮೆ.ವ್ಯಾ. ಸಾಮರ್ಥ್ಯದ ಗಿರಿಕಾನಹಳ್ಳ ಕಿರು ಜಲ ಯೋಜನೆಯನ್ನು ಹಂಚಿಕೆಮಾಡಿ ಆದೇಶಿಸಲಾಗಿತ್ತು. ಈ ಯೋಜನೆಯನ್ನು ಮೆ : ಜಿನೇವಾ ಪವರ್ ಲಿಮಿಟೆಡ್ ಕಂಪನಿಯ ಹೆಸರಿನಲ್ಲಿ ಅನುಷ್ಠಾನಗೊಳಿಸಲು ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರಿ ಆದೇಶದಲ್ಲಿ ಅನುಮತಿ ನೀಡಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (3) ಹಾಗೂ (4)ರ ಆದೇಶಗಳಲ್ಲಿ ಕಾಲಾವಕಾಶವನ್ನು ಕಾಲ ಕಾಲಕ್ಕೆ ವಿಸ್ತರಿಸಿಕೊಂಡು ಬರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರು ಮೆ:: ಪಾವನಗಂಗಾ ಪವರ್ ಪ್ರೈವೇಟ್ ಲಿಮಿಟೆಡ್ ರವರಿಗೆ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲ್ಲೂಕಿನ ಹುಲುವತ್ತಿ ಗ್ರಾಮದ ಗಿರಿಕಾನಹಳ್ಳ ತೊರೆಗೆ ಅಡ್ಡಲಾಗಿ ಹಂಚಿಕೆ ಮಾಡಿರುವ 4.5 ಮೆ.ವ್ಯಾ. ಸಾಮರ್ಥ್ಯದ ಗಿರಿಕಾನಹಳ್ಳ ಕಿರು ಜಲ ಯೋಜನೆಯನ್ನು ಅನುಷ್ಠಾನಗೊಳಿಸಲು ಸಾಧ್ಯವಾಗದ ಕಾರಣ ಈ ಯೋಜನೆಯನ್ನು ರದ್ದು ಪಡಿಸುವಂತೆ ಅಭಿವೃದ್ಧಿದಾರರ ಕೋರಿಕೆ ಮೇರೆಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 170 ಎನ್‌ಸಿಇ 2010, ಬೆಂಗಳೂರು, ದಿನಾಂಕ: 13.07.2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರಿ ಆದೇಶ ಸಂಖ್ಯೆ: ಡಿಇ 107 ಎನ್‌ಸಿಇ 2001 (2) ದಿನಾಂಕ: 19.9.2001ರಲ್ಲಿ ಮೆ:: ಪಾವನಗಂಗಾ ಪವರ್ ಪ್ರೈವೇಟ್ ಲಿಮಿಟೆಡ್ ರವರಿಗೆ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲ್ಲೂಕಿನ ಹುಲುವತ್ತಿ ಗ್ರಾಮದ ಗಿರಿಕಾನಹಳ್ಳ ತೊರೆಗೆ ಅಡ್ಡಲಾಗಿ ಹಂಚಿಕೆ ಮಾಡಿರುವ 4.5 ಮೆ.ವ್ಯಾ. ಸಾಮರ್ಥ್ಯದ ಗಿರಿಕಾನಹಳ್ಳ ಕಿರು ಜಲ ಯೋಜನೆ ನಂತರ ಮೆ: ಜಿನಿವಾ ಪವರ್ ಪ್ರೈವೇಟ್ ಲಿಮಿಟೆಡ್ ರವರ ಹೆಸರಿಗೆ ವರ್ಗಾವಣೆಗೊಂಡ ಯೋಜನೆಗೆ ಸಂಬಂಧಿಸಿದ ಹಂಚಿಕೆ ಆದೇಶ ಹಾಗೂ ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೌಸಲ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

PR. 2040

ಇಂಧನ ಸಚಿವಾಲಯ

ವಿಷಯ: ಮೆ॥ ಶ್ರೀ ಆಂಜನೇಯ ಪವರ್–ಟೆಕ್ ಪ್ರೈವೇಟ್ ಲಿಮಿಟೆಡ್ ಇವರ 800 ಕಿಲೋ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಗೆ ಕಾಲಾವಕಾಶ ವಿಸ್ತರಣೆ ಮಾಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 89 ಎನ್‌ಸಿಇ 2002 ದಿನಾಂಕ: 08.5.2002.

2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 172 ಎನ್‌ಸಿಇ 2010 ದಿನಾಂಕ: 02.7.2010.

3) ಸರ್ಕಾರಿ ಆದೇಶ ಸಂಖ್ಯೆ: ಇಎನ್ 26 ಎನ್‌ಸಿಇ 2012 ದಿನಾಂಕ: 24.1.2012.

4) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ,ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ SH–83/2012–13/2331 ದಿನಾಂಕ: 10/22.8.2012.

ಪ್ರಸ್ತಾವನೆ :–

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ:: ಶ್ರೀ ಆಂಜನೇಯ ಪವರ್ ಟೆಕ್ ಪ್ರೈವೇಟ್ ಲಿಮಿಟೆಡ್ ಇವರಿಗೆ ರಾಯಚೂರು ಜಿಲ್ಲೆಯ ಸಿಂಧನೂರು ಬಳಿ ಡಿ–54 ಟಿ.ಎಲ್.ಬಿ.ಸಿ. ಕೆನಾಲ್‌ನ 628ನೇ ಚೈನೇಜ್‌ನಲ್ಲಿ 800 ಕಿಲೋ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಶ್ರೀ ಆಂಜನೇಯ ಪವರ್ ಟೆಕ್ ಪ್ರೈವೇಟ್ ಲಿಮಿಟೆಡ್ ರವರ 800 ಕಿಲೋ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ಕಾಲಾವಕಾಶವನ್ನು ದಿನಾಂಕ: 30.09.2010ರವರೆಗೆ ವಿಸ್ತರಿಸಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಸದರಿ ಯೋಜನೆಯ ಅನುಷ್ಠಾನಕ್ಕೆ ಅಂತಿಮವಾಗಿ ಕಾಲಾವಕಾಶವನ್ನು ದಿನಾಂಕ : 31.03.2012 ರವರೆಗೆ ವಿಸ್ತರಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಶ್ರೀ ಆಂಜನೇಯ ಪವರ್–ಟೆಕ್ ಪ್ರೈವೇಟ್ ಲಿಮಿಟೆಡ್ ಇವರಿಗೆ ರಾಯಚೂರು ಜಿಲ್ಲೆಯ ಸಿಂಧನೂರು ಬಳಿ ಡಿ–54 ಟಿ.ಎಲ್.ಬಿ.ಸಿ. ಕೆನಾಲ್‌ನ 628ನೇ ಚೈನೇಜ್‌ನಲ್ಲಿ ಹಂಚಿಕೆಯಾಗಿರುವ 800 ಕಿಲೋ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು, ಯೋಜನೆಯನ್ನು ಪರೀಕ್ಷಿಸಿ ಅನುಷ್ಠಾನಗೊಳಿಸುವ ಕಾಮಗಾರಿಯ ಕೆಲಸ ಮಾತ್ರ ಬಾಕಿ ಇರುವ ಹಿನ್ನೆಲೆಯಲ್ಲಿ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ : 01.04.2012 ರಿಂದ 31.12.2012 ರವರೆಗೆ ವಿಸ್ತರಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ :

ಸರ್ಕಾರಿ ಆದೇಶ ಸಂಖ್ಯೆ: ಇಎನ್ 255 ಎನ್‌ಸಿಇ 2012, ಬೆಂಗಳೂರು, ದಿನಾಂಕ: 05.09.2012

ಶ್ರೀ ಆಂಜನೇಯ ಪವರ್ ಟೆಕ್ ಪ್ರೈವೇಟ್ ಲಿಮಿಟೆಡ್ ಇವರಿಗೆ ರಾಯಚೂರು ಜಿಲ್ಲೆಯ ಸಿಂಧನೂರು ಬಳಿ ಡಿ–54 ಟಿ.ಎಲ್.ಬಿ.ಸಿ. ಕೆನಾಲ್‌ನ 628ನೇ ಚೈನೇಜ್‌ನಲ್ಲಿ ಹಂಚಿಕೆಯಾಗಿರುವ 800 ಕಿಲೋ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕಾಗಿ ಅಂತಿಮವಾಗಿ ಕಾಲಾವಕಾಶವನ್ನು **ದಿನಾಂಕ 01.4.2012ರಿಂದ ದಿನಾಂಕ : 31.12.2012 ರವರೆಗೆ** ಸರ್ಕಾರದ ಆದೇಶಾನುಸಾರ ಅವಶ್ಯವಿರುವ ಕಾಲಾವಕಾಶ ವಿಸ್ತರಣಾ ಶುಲ್ಕವನ್ನು ಪಾವತಿಸತಕ್ಕದ್ದೆಂಬ ಷರತ್ತಿಗೊಳಪಟ್ಟು ವಿಸ್ತರಿಸಿ ಆದೇಶಿಸಿದೆ. ಮುಂದೆ ಯಾವುದೇ ಕಾರಣಕ್ಕೂ ಕಾಲಾವಕಾಶ ವಿಸ್ತರಣೆ ನೀಡಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೌಸಲ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

PR. 2090

ಇಂಧನ ಸಚಿವಾಲಯ

ವಿಷಯ: ಮೆ:: ಭರೂಕ ಪವರ್ ಕಾರ್ಪೊರೇಷನ್ ಲಿಮಿಟೆಡ್ ರವರಿಗೆ ಹಂಚಿಕೆಯಾಗಿರುವ 2 ಮೆ.ವ್ಯಾ. ಸಾಮರ್ಥ್ಯದ ನಿಡಿಯಮಲೆ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದುಪಡಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 388 ಎನ್‌ಸಿಇ 2007 ದಿನಾಂಕ: 21.1.2010

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕನಿರ್ದೇಶಕರ ಪತ್ರ ಸಂಖ್ಯೆ: KRED/06/SH–368/ನಿಡಿಯಮಲೆ,ಕಿಜವಿಯೊ/2012–13 /1990 ದಿನಾಂಕ: 11/13.07.2012

ಪ್ರಸ್ತಾವನೆ:–

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರಿ ಆದೇಶದಲ್ಲಿ ಮೆ : ಭರೂಕ ಪವರ್ ಕಾರ್ಪೊರೇಷನ್ ಲಿಮಿಟೆಡ್ ರವರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ನಿಡಿಯಮಲೆ ಗ್ರಾಮದ ಬಳಿ ನಿಡಿಯಮಲೆ ನದಿಗೆ ಅಡ್ಡಲಾಗಿ 2 ಮೆ.ವ್ಯಾ. ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು (**Latitude**:12°28'00'' **Longitude**:75°25'30'') ಕೆಲವೊಂದು ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರು ಮೆ:: ಭರೂಕ ಪವರ್ ಕಾರ್ಪೊರೇಷನ್ ಲಿಮಿಟೆಡ್ ರವರಿಗೆ ದಿನಾಂಕ 21.1.2010ರ ಆದೇಶದಲ್ಲಿ ಹಂಚಿಕೆಯಾಗಿರುವ ಮೇಲ್ಕಂಡ 2 ಮೆ.ವ್ಯಾ. ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಅಭಿವೃದ್ಧಿದಾರರು ಸರ್ಕಾರಕ್ಕೆ ಅಧ್ಯರ್ಪಿಸಲು ಸಿದ್ದರಿರುವುದಾಗಿ ತಿಳಿಸಿರುವುದರಿಂದ, ಸದರಿ ಸಾಮರ್ಥ್ಯವನ್ನು ರದ್ದಗೊಳಿಸಲು ಶಿಫಾರಸ್ಸಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 218 ಎನ್‌ಸಿಇ 2012, ಬೆಂಗಳೂರು, ದಿನಾಂಕ: 05.9.2012.

ಮೆ:: ಭರೂಕ ಪವರ್ ಕಾರ್ಪೊರೇಷನ್ ಲಿಮಿಟೆಡ್ ರವರಿಗೆ ಸರ್ಕಾರಿ ಆದೇಶ ಸಂಖ್ಯೆ ಇಎನ್ 388 ಎನ್‌ಸಿಇ 2007 ದಿನಾಂಕ 21.1.2010 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ನಿಡಿಯಮಲೆ ಗ್ರಾಮದ ಬಳಿ ನಿಡಿಯಮಲೆ ನದಿಗೆ ಅಡ್ಡಲಾಗಿ ಹಂಚಿಕೆ ಮಾಡಿರುವ 2 ಮೆ.ವ್ಯಾ.

ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಹಾಗೂ ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೌಸಲ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

PR. 2089

ಇಂಧನ ಸಚಿವಾಲಯ

ವಿಷಯ: ಮೆ॥ ಸರೋಜ್ ಎನರ್ಜಿ ಕಂಪನಿ ಪ್ರೈವೇಟ್ ಲಿಮಿಟೆಡ್ ಇವರ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಕಾಲಾವಕಾಶ ವಿಸ್ತರಣೆ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 212 ಎನ್‌ಸಿಇ 2005 ದಿನಾಂಕ: 22.8.2005.

2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 132 ಎನ್‌ಸಿಇ 2006 ದಿನಾಂಕ: 16.3.2006.

3) ಸರ್ಕಾರಿ ಆದೇಶ ಸಂಖ್ಯೆ: ಇಎನ್ 394 ಎನ್‌ಸಿಇ 2009 ದಿನಾಂಕ: 16.2.2010.

4) ಸರ್ಕಾರಿ ಆದೇಶ ಸಂಖ್ಯೆ: ಇಎನ್ 394 ಎನ್‌ಸಿಇ 2009 ದಿನಾಂಕ: 14.1.2011.

5) ಸರ್ಕಾರಿ ಆದೇಶ ಸಂಖ್ಯೆ: ಇಎನ್ 283 ಎನ್‌ಸಿಇ 2011 ದಿನಾಂಕ: 07.7.2011.

6) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ: ಕೆಆರ್‌ಇಡಿ/06/ಎಸ್‌ಹೆಚ್–208/ಇಗ್ಗಲೂರು–ಎಂಹೆಚ್‌ಎಸ್/2011/1802 ದಿನಾಂಕ: 20/22.6.2011.

ಪ್ರಸ್ತಾವನೆ:–

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಸರೋಜ್ ಎನರ್ಜಿ ಕಂಪನಿ ಪ್ರೈವೇಟ್ ಲಿಮಿಟೆಡ್ ಇವರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಇಗ್ಗಲೂರು ಗ್ರಾಮದ ಬಳಿ ಶಿಂಷಾ ನದಿಗೆ ಅಡ್ಡಲಾಗಿ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಸದರಿ ಯೋಜನೆಯ ಸಾಮರ್ಥ್ಯವನ್ನು 1.00 ಮೆಗಾ ವ್ಯಾಟ್‌ನಿಂದ 1.5 ಮೆಗಾ ವ್ಯಾಟ್‌ಗೆ ಹೆಚ್ಚಿಸಲಾಗಿತ್ತು. ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಾವಕಾಶವನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ದಿನಾಂಕ: 30.06.2010 ರವರೆಗೆ ವಿಸ್ತರಿಸಲಾಗಿತ್ತು. ನಂತರ ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ ಕಾಲಾವಕಾಶವನ್ನು ದಿನಾಂಕ: 01.7.2010ರಿಂದ 30.6.2011 ರವರೆಗೆ ವಿಸ್ತರಿಸಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಆದೇಶದಲ್ಲಿ ಮೆ॥ ಸರೋಜ್ ಎನರ್ಜಿ ಕಂಪನಿ ಪ್ರೈವೇಟ್ ಲಿಮಿಟೆಡ್ ಇವರಿಗೆ ರಾಮನಗರ ಜಿಲ್ಲೆಯ (ಹಿಂದಿನ ಬೆಂಗಳೂರು ಗ್ರಾಮಾಂತರ ಜಿಲ್ಲೆ) ಚನ್ನಪಟ್ಟಣ ತಾಲ್ಲೂಕಿನ ಇಗ್ಗಲೂರು ಗ್ರಾಮದ ಬಳಿ ಶಿಂಷಾ ನದಿಗೆ ಅಡ್ಡಲಾಗಿ ಹಂಚಿಕೆಯಾಗಿರುವ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಕಾಲಾವಕಾಶವನ್ನು ದಿನಾಂಕ: 01.07.2011 ರಿಂದ 30.06.2012ರವರೆಗೆ ವಿಸ್ತರಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು ಸದರಿ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಅಭಿವೃದ್ಧಿದಾರರು ಸಂಬಂಧಿಸಿದ ಇಲಾಖೆಗಳಿಂದ ಅನುಮೋದನೆಗಳನ್ನು ಪಡೆದು ಕಾಮಗಾರಿಯನ್ನು ಪ್ರಾರಂಭಿಸಿರುವುದರಿಂದ ಪ್ರತಿ ಮೆಗಾ ವ್ಯಾಟ್‌ಗೆ ರೂ. 3.00 ಲಕ್ಷಗಳ ನೆರವೇರಿಕೆ ಖಾತರಿ (performance guarantee) ಪಾವತಿಸುವ ಷರತ್ತಿಗೊಳಪಟ್ಟು ಕಾಲಾವಕಾಶವನ್ನು ದಿನಾಂಕ: 01.07.2012 ರಿಂದ 30.06.2014ರವರೆಗೆ ವಿಸ್ತರಿಸಲು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 266 ಎನ್‌ಸಿಇ 2012, ಬೆಂಗಳೂರು, ದಿನಾಂಕ : 18.09.2012

ಮೆ॥ ಸರೋಜ್ ಎನರ್ಜಿ ಕಂಪನಿ ಪ್ರೈವೇಟ್ ಲಿಮಿಟೆಡ್ ಇವರಿಗೆ ರಾಮನಗರ ಜಿಲ್ಲೆಯ (ಹಿಂದಿನ ಬೆಂಗಳೂರು ಗ್ರಾಮಾಂತರ ಜಿಲ್ಲೆ) ಚನ್ನಪಟ್ಟಣ ತಾಲ್ಲೂಕಿನ ಇಗ್ಗಲೂರು ಗ್ರಾಮದ ಬಳಿ ಶಿಂಷಾ ನದಿಗೆ ಅಡ್ಡಲಾಗಿ ಹಂಚಿಕೆಯಾಗಿರುವ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಅಂತಿಮವಾಗಿ ಕಾಲಾವಕಾಶವನ್ನು ದಿನಾಂಕ: 01.07.2012 ರಿಂದ 30.06.2014ರವರೆಗೆ ವಿಸ್ತರಿಸಿ ಆದೇಶಿಸಲಾಗಿದೆ.

ಅಭಿವೃದ್ಧಿದಾರರು ಕೆ.ಆರ್.ಇ.ಡಿ.ಎಲ್.ಗೆ ಮೆಗಾ ವ್ಯಾಟ್ ಒಂದಕ್ಕೆ ರೂ. 3.00 ಲಕ್ಷದಂತೆ ನೆರವೇರಿಕೆ ಖಾತರಿ (performance guarantee) ನೀಡತಕ್ಕದ್ದು

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೌಸಲ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

PR. 2103

ಇಂಧನ ಸಚಿವಾಲಯ

ವಿಷಯ: ಮೆ : ಚಿಕ್ಕಮಗಳೂರು ಎನರ್ಜಿ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ಹಂಚಿಕೆಯಾಗಿರುವ 50.00 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 3.6 ಮೆ.ವ್ಯಾ. ಸಾಮರ್ಥ್ಯವನ್ನು ಮೆ:: ವೈಘ್‌ಮನ್ ಘೊರೆಕ್ಸ್ ಲಿಮಿಟೆಡ್ ಕಂಪನಿಯವರಿಗೆ ವರ್ಗಾವಣೆ ಮಾಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 92 ಎನ್‌ಸಿಇ 2001 ದಿನಾಂಕ: 19.11.2001.

2) ಸರ್ಕಾರಿ ಆದೇಶ ಸಂಖ್ಯೆ: ಡಿಇ 9 ಎನ್‌ಸಿಇ 2004 ದಿನಾಂಕ: 21.6.2004.

3) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: KRED/08/WF-3.6 MW–CEPPL-50.HMM/2012/2309 ದಿನಾಂಕ: 08/18.8.2012.

ಪ್ರಸ್ತಾವನೆ:–

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರಿ ಆದೇಶದಲ್ಲಿ ಮೆ : ಮಿಲೇನಿಯಮ್ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಚಿಕ್ಕಮಗಳೂರು ಜಿಲ್ಲೆಯ ಸುಣ್ಣದಹಳ್ಳಿ, ಹೂವಿನಹಳ್ಳಿ ಮತ್ತು ಇತರ ಗ್ರಾಮಗಳಲ್ಲಿ 50.00 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರಿ ಆದೇಶದಲ್ಲಿ ಮೆ : ಮಿಲೇನಿಯಮ್ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್ ಹೆಸರನ್ನು ಮೆ : ಚಿಕ್ಕಮಗಳೂರು ಎನರ್ಜಿ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಲು ಅನುಮೋದನೆ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ ಮೆ : ಚಿಕ್ಕಮಗಳೂರು ಎನರ್ಜಿ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಅನುಮತಿಸಿರುವ 50.00 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 3.6 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ:: ವೈಘ್‌ಮನ್ ಘೊರೆಕ್ಸ್ ಲಿಮಿಟೆಡ್ ರವರಿಗೆ ವರ್ಗಾಯಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ ಹಾಗೂ ಈ ಯೋಜನಾ ಪ್ರದೇಶವು ಕಂದಾಯ ಜಮೀನಾಗಿದ್ದು, ಯೋಜನೆಯನ್ನು ವರ್ಗಾವಣೆ ಆದೇಶ ಹೊರಡಿಸಿದ ದಿನಾಂಕದಿಂದ ಒಂದು ವರ್ಷದೊಳಗಾಗಿ ಅನುಷ್ಠಾನಗೊಳಿಸಲಾಗುವುದು ಮತ್ತು ಉತ್ಪಾದನೆ ಆಗುವ ವಿದ್ಯುತ್ತನ್ನು ಸರಬರಾಜು ಮಾಡಲು ಸಂಬಂಧಿಸಿದ ಎಸ್ಕಾಂನೊಂದಿಗೆ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 249 ಎನ್‌ಸಿಇ 2012, ಬೆಂಗಳೂರು, ದಿನಾಂಕ: 20.9.2012.

ಮೆ : ಚಿಕ್ಕಮಗಳೂರು ಎನರ್ಜಿ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಚಿಕ್ಕಮಗಳೂರು ಜಿಲ್ಲೆಯ ಸುಣ್ಣದಹಳ್ಳಿ, ಹೂವಿನಹಳ್ಳಿ ಮತ್ತು ಇತರ ಗ್ರಾಮಗಳಲ್ಲಿ ಮಂಜೂರಾಗಿರುವ 50.00 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 3.6 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ:: ವೈಘ್‌ಮನ್ ಘೊರೆಕ್ಸ್ ಲಿಮಿಟೆಡ್ ಕಂಪನಿಗೆ ಈ ಕೆಳಕಂಡ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಈ ಕೆಳಕಂಡ ಷರತ್ತಿಗೊಳಪಟ್ಟು ವರ್ಗಾಯಿಸಲು ಅನುಮತಿ ನೀಡಲಾಗಿದೆ :–

SHEDULE

Village Name	Taluk & District	MW	Land Survey Number	No. of WTG's	Extent in Land (Acres)	WTG location Number	Latitude, Longitude and Ridge peaks
Bettadahalli	Tarikere / Chikkamagalur	0.6	48	1	1.00	BH-01	**Latitude**: 13°40'24.32"- N **Longitude**: 75°52'16"- " E
Bettadahalli	Tarikere/Chikkam-agalur	0.6	46	1	1.00	BH-02	**Latitude**: 13°40'24.32"- N **Longitude**: 75°52'26.5"- " E
Bettadahalli	Tarikere/ Chikkamagalur	0.6	46	1	1.00	BH-03	**Latitude**: 13°40'21.4"- N **Longitude**: 75°52'26"- E
Bettadahalli	Tarikere/ Chikkamagalur	0.6	46	1	1.00	BH-04	**Latitude**: 13°40'17.51"- N **Longitude**: 75°52'25.5"- E
Bettadahalli	Tarikere/ Chikkamagalur	0.6	46	1	1.00	BH-05	**Latitude**: 13°40'13.62"- N **Longitude**: 75°52'21"- E
Bettadahalli	Tarikere/ Chikkamagalur	0.6	46	1	1.00	BH-06	**Latitude**: 13°40'03"- N **Longitude**: 75°52'44"- E
		3.6					

1 **ಮೆ:: ವೈಘ್‌ಮನ್ ಘೊರೆಕ್ಸ್ ಲಿಮಿಟೆಡ್** ಕಂಪನಿಯವರು 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 2011 ದಿನಾಂಕ 06.1.2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

2 **ಮೆ:: ವೈಝ್‌ಮನ್ ಫೊರೆಕ್ಸ್ ಲಿಮಿಟೆಡ್** ಕಂಪನಿಯವರು ಉತ್ಪಾದನೆ ಆಗುವ ವಿದ್ಯುತ್ತನ್ನು ಸರಬರಾಜು ಮಾಡಲು ಸೆಸ್ಕ್‌ನೊಂದಿಗೆ ವಿದ್ಯುತ್ ಖರೀದಿ ಒಪ್ಪಂದವನ್ನು ಮಾಡಿಕೊಳ್ಳುವುದು.

3 ಸದರಿ ಯೋಜನೆಯನ್ನು ಆದೇಶ ಹೊರಡಿಸಿದ ದಿನಾಂಕದಿಂದ ಒಂದು ವರ್ಷದೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು. ಈ ಕುರಿತಂತೆ ಕ್ರೆಡಲ್ ಅಭಿವೃದ್ಧಿದಾರರಿಂದ ಒಪ್ಪಿಗೆ ಪತ್ರ ಪಡೆಯತಕ್ಕದ್ದು (committment letter).

4 ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೌಸಲ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

PR. 2101

ಇಂಧನ ಸಚಿವಾಲಯ

ವಿಷಯ: ಮೆ:: ಭಾವನ ಹೈಡ್ರೊ ಎಲೆಕ್ಟ್ರಿಕ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಗಂಗನಹಾಳ ಕಿರು ಜಲ ವಿದ್ಯುತ್ ಯೋಜನೆಗಾಗಿ ಕಾಲಾವಕಾಶ ವಿಸ್ತರಣೆ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಇಂಇ 298 ಎನ್‌ಸಿಇ 2004 ದಿನಾಂಕ: 13.9.2004.

2) ಸರ್ಕಾರಿ ಆದೇಶ ಸಂಖ್ಯೆ: ಇಂಇ 298 ಎನ್‌ಸಿಇ 2004 ದಿನಾಂಕ: 20.12.2004.

3) ಸರ್ಕಾರಿ ಆದೇಶ ಸಂಖ್ಯೆ: ಇನ್ 430 ಎನ್‌ಸಿಇ 2007 ದಿನಾಂಕ: 10.12.2007

4) ಸರ್ಕಾರಿ ಆದೇಶ ಸಂಖ್ಯೆ: ಇನ್ 52 ಎನ್‌ಸಿಇ 2008 ದಿನಾಂಕ: 13.2.2008.

5) ಸರ್ಕಾರಿ ಆದೇಶ ಸಂಖ್ಯೆ: ಇನ್ 293 ಎನ್‌ಸಿಇ 2011 ದಿನಾಂಕ: 16.11.2011.

6) ಸರ್ಕಾರಿ ಆದೇಶ ಸಂಖ್ಯೆ: ಇಎನ್ 293 ಎನ್‌ಸಿಇ 2011 ದಿನಾಂಕ: 28.12.2011.

7) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ: ಕೆಆರ್‌ಇಡಿ/06/ಎಸ್‌ಹೆಚ್–169/2012/2329 ದಿನಾಂಕ: 13/22.8.2011.

ಪ್ರಸ್ತಾವನೆ :–

ಮೇಲೆ ಓದಲಾದ ಕ್ರಮಾಂಕ (1) ರ ಆದೇಶದಲ್ಲಿ ಮೆ:: ಭಾವನ ಹೈಡ್ರೊ ಎಲೆಕ್ಟ್ರಿಕ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಗುಲ್ಬರ್ಗಾ ಜಿಲ್ಲೆಯ ಶಹಾಪುರ ತಾಲೂಕಿನ ಗಂಗನಹಾಳ ಗ್ರಾಮ ಶಹಾಪುರ ಬ್ರ್ಯಾಂಚ್ ಕೆನಾಲ್‌ನ ಡಿಸ್ಟ್ರಿಬ್ಯುಟರಿ–7 ಕ್ಕೆ ಅಡ್ಡಲಾಗಿ 800 ಕಿಲೊ ವ್ಯಾಟ್ ಸಾಮರ್ಥ್ಯದ ಗಂಗನಹಾಳ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (2) ರ ಆದೇಶದಲ್ಲಿ ಮೆ:: ಭಾವನ ಹೈಡ್ರೊ ಎಲೆಕ್ಟ್ರಿಕ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 800 ಕಿಲೊ ವ್ಯಾಟ್ ಸಾಮರ್ಥ್ಯದ ಗಂಗನಹಾಳ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 1.25 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಿ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (3) ರ ಆದೇಶದಲ್ಲಿ ಮೆ:: ಭಾವನ ಹೈಡ್ರೊ ಎಲೆಕ್ಟ್ರಿಕ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಗುಲ್ಬರ್ಗಾ ಜಿಲ್ಲೆಯ ಗಂಗನಹಾಳ ಗ್ರಾಮ ಶಹಾಪುರ ಬ್ರ್ಯಾಂಚ್ ಕೆನಾಲ್‌ನ ಡಿಸ್ಟ್ರಿಬ್ಯುಟರಿ–7 ಕ್ಕೆ ಅಡ್ಡಲಾಗಿ ಹಂಚಿಕೆ ಮಾಡಲಾಗಿದ್ದ 1.25 ಮೆ.ವ್ಯಾ. ಸಾಮರ್ಥ್ಯದ ಗಂಗನಹಾಳ ಕಿರು ಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ಕಾಲಾವಕಾಶವನ್ನು ದಿನಾಂಕ 10.12.2007 ರಿಂದ 3 ವರ್ಷಗಳ ಅವಧಿಗೆ ವಿಸ್ತರಿಸಲಾಗಿತ್ತು. ಮೇಲೆ ಓದಲಾದ ಕ್ರಮಾಂಕ (4) ರ ಆದೇಶದಲ್ಲಿ ಮೇಲಿನ 1.25 ಮೆ.ವ್ಯಾ. ಸಾಮರ್ಥ್ಯದ ಗಂಗನಹಳ್ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 2.00 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸಿ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (5) ರ ಆದೇಶದಲ್ಲಿ ಮೆ:: ಭಾವನ ಹೈಡ್ರೊ ಎಲೆಕ್ಟ್ರಿಕ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆಯಾಗಿದ್ದ **2.00 ಮೆಗಾ ವ್ಯಾಟ್** ಸಾಮರ್ಥ್ಯದ ಮೇಲ್ಕಂಡ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಕಾಲಾವಕಾಶವನ್ನು **ದಿನಾಂಕ: 31.12.2011 ರವರೆಗೆ** ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (6) ರ ಆದೇಶದಲ್ಲಿ ಮೆ:: ಭಾವನ ಹೈಡ್ರೊ ಎಲೆಕ್ಟ್ರಿಕ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ ಮೇಲಿನ **2.00 ಮೆಗಾ ವ್ಯಾಟ್** ಸಾಮರ್ಥ್ಯದ ಗಂಗನಹಾಳ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಾವಕಾಶವನ್ನು ದಿನಾಂಕ: 30.6.2012 ರವರೆಗೆ ವಿಸ್ತರಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು ಮೆ:: ಭಾವನ ಹೈಡ್ರೊ ಎಲೆಕ್ಟ್ರಿಕ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಗುಲ್ಬರ್ಗಾ ಜಿಲ್ಲೆಯ ಶಹಾಪುರ ತಾಲೂಕಿನ ಗಂಗನಹಾಳ ಗ್ರಾಮ ಶಹಾಪುರ ಬ್ರ್ಯಾಂಚ್ ಕೆನಾಲ್‌ನ ಡಿಸ್ಟ್ರಿಬ್ಯುಟರಿ–7 ಕ್ಕೆ ಅಡ್ಡಲಾಗಿ ಹಂಚಿಕೆ ಮಾಡಲಾಗಿರುವ **2.00 ಮೆಗಾ ವ್ಯಾಟ್** ಸಾಮರ್ಥ್ಯದ ಗಂಗನಹಾಳ ಕಿರು ಜಲ ವಿದ್ಯುತ್ ಯೋಜನೆಯ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಯೋಜನೆಯನ್ನು ಪರೀಕ್ಷಿಸಿ ಅನುಷ್ಠಾನಗೊಳಿಸಲು ಮಾತ್ರ ಬಾಕಿ ಉಳಿದಿರುವುದರಿಂದ ಪ್ರತಿ ಮೆಗಾ ವ್ಯಾಟ್‌ಗೆ ರೂ. 3.00 ಲಕ್ಷಗಳ ಬ್ಯಾಂಕ್ ಖಾತರಿ ಮತ್ತು ನೆರವೇರಿಕೆ ಖಾತರಿ (performance guarantee) ವಿಧಿಸುವ ಷರತ್ತಿಗೊಳಪಟ್ಟು ಕಾಲಾವಕಾಶವನ್ನು ದಿನಾಂಕ: 30.06.2013 ರವರೆಗೆ ವಿಸ್ತರಿಸಲು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 252 ಎನ್‌ಸಿಇ 2011, ಬೆಂಗಳೂರು, ದಿನಾಂಕ: 18.9.2012.

ಮೆ:: ಭಾವನ ಹೈಡ್ರೊ ಎಲೆಕ್ಟ್ರಿಕ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಗುಲ್ಬರ್ಗಾ ಜಿಲ್ಲೆಯ ಶಹಾಪುರ ತಾಲೂಕಿನ ಗಂಗನಹಾಳ ಗ್ರಾಮ ಶಹಾಪುರ ಬ್ರ್ಯಾಂಚ್ ಕೆನಾಲ್‌ನ ಡಿಸ್ಟ್ರಿಬ್ಯುಟರಿ–7 ಕ್ಕೆ ಅಡ್ಡಲಾಗಿ ಹಂಚಿಕೆ ಮಾಡಲಾಗಿರುವ **2.00 ಮೆಗಾ ವ್ಯಾಟ್** ಸಾಮರ್ಥ್ಯದ ಗಂಗನಹಾಳ ಕಿರು ಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕಾಗಿ ಇನ್ನು ಮುಂದೆ ಯಾವುದೇ ಕಾರಣಕ್ಕೂ ಕಾಲಾವಕಾಶವನ್ನು ವಿಸ್ತರಿಸುವುದಿಲ್ಲ ಹಾಗೂ ಪ್ರತಿ ಮೆಗಾವ್ಯಾಟ್‌ಗೆ ರೂ. 3.00 ಲಕ್ಷಗಳ ಬ್ಯಾಂಕ್ ಖಾತರಿ ಮತ್ತು ನೆರವೇರಿಕೆ ಖಾತರಿ (performance guarantee) ಯನ್ನು ಕೆ.ಆರ್.ಇ.ಡಿ.ಎಲ್.ಗೆ ನೀಡತಕ್ಕದ್ದೆಂಬ ಷರತ್ತಿಗೊಳಪಟ್ಟು ದಿನಾಂಕ: 01.7.2012 ರಿಂದ **ದಿನಾಂಕ : 30.6.2013 ರವರೆಗೆ** ವಿಸ್ತರಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೌಸಲ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

PR. 2102

ಇಂಧನ ಸಚಿವಾಲಯ

ವಿಷಯ: ಮೆ: ಎವರ್ ಗ್ರೀನ್ ಎನರ್ಜಿ ಎಂಟರ್ ಪ್ರೈಸಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್. ಇವರಿಗೆ 1.6 ಮೆಗಾ ವ್ಯಾಟ್ ಸಾಮರ್ಥ್ಯದ ಐಹೊಳೆ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ:
1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕ್ರೆಡಲ್/06/ SH-797/2011–12/514 ದಿನಾಂಕ: 13/15.02.2012.
2. ದಿನಾಂಕ: 26.04.2012ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.
3. ಮೆ: ಎವರ್ ಗ್ರೀನ್ ಎನರ್ಜಿ ಎಂಟರ್ ಪ್ರೈಸಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ರವರ ಪತ್ರ ದಿನಾಂಕ 03.7.2012.
4. ಸರ್ಕಾರಿ ಪತ್ರ ಸಂಖ್ಯೆ ಇಎನ್ 196 ಎನ್‌ಸಿಇ 2012 ದಿನಾಂಕ 10/11.7.2012.
5. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕ್ರೆಡಲ್/06/ SH 797/2012–13/2332 ದಿನಾಂಕ: 08/22.08.2012

ಪ್ರಸ್ತಾವನೆ :–

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ: ಎವರ್ ಗ್ರೀನ್ ಎನರ್ಜಿ ಎಂಟರ್ ಪ್ರೈಸಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್. ಇವರಿಗೆ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕು, ಐಹೊಳೆ ಗ್ರಾಮದಲ್ಲಿ ಮಲಪ್ರಭಾ ನದಿಗೆ ಅಡ್ಡಲಾಗಿ 1.6 ಮೆಗಾ ವ್ಯಾಟ್ ಸಾಮರ್ಥ್ಯದ ಐಹೊಳೆ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಮೆ: ಎವರ್ ಗ್ರೀನ್ ಎನರ್ಜಿ ಎಂಟರ್ ಪ್ರೈಸಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್. ಇವರಿಗೆ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕು ಐಹೊಳೆ ಗ್ರಾಮದಲ್ಲಿ ಈಗಾಗಲೇ ಮಲಪ್ರಭಾ ನದಿಗೆ ಅಡ್ಡಲಾಗಿ ನಿರ್ಮಾಣ ಮಾಡಿರುವ ಬ್ಯಾರೇಜನ್ನು ಉಪಯೋಗಿಸಿ 1.6 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಅರಣ್ಯ ಇಲಾಖೆಯ ಅನುಮತಿ ಪಡೆಯುವ ಷರತ್ತಿಗೊಳಪಟ್ಟು ಸ್ಥಾಪಿಸಲು ಅನುಮತಿ ನೀಡಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಮೆ: ಎವರ್ ಗ್ರೀನ್ ಎನರ್ಜಿ ಎಂಟರ್ ಪ್ರೈಸಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ರವರು ಉದ್ದೇಶಿತ ಯೋಜನೆಯ ಹಂಚಿಕೆಗಾಗಿ ಅರ್ಜಿ ಸಲ್ಲಿಸುವಾಗ ಹುನಗುಂದ ತಾಲ್ಲೂಕಿಗೆ ಬದಲಾಗಿ ಬಾದಾಮಿ ತಾಲ್ಲೂಕು ಎಂದು ತಪ್ಪಾಗಿರುವುದರಿಂದ ಆದೇಶಹೊರಡಿಸುವಾಗ ಹುನಗುಂದ ತಾಲ್ಲೂಕು ಎಂದು ನಮೂದಿಸಲು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಈ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಅಭಿಪ್ರಾಯವನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಸದರಿ ಕಂಪನಿಯವರು ಯೋಜನೆಯ ಅನುಷ್ಠಾನಕ್ಕಾಗಿ ಅವಶ್ಯವಿರುವ ಜಮೀನಿನ ಕುರಿತು ಸಲ್ಲಿಸಿದ ಆರ್‌ಟಿಸಿ ಪ್ರತಿಗಳಲ್ಲಿ ಸಂಬಂಧಪಟ್ಟ ಯೋಜನಾ ಸ್ಥಳ ಹುನಗುಂದ ತಾಲ್ಲೂಕಿನ ವ್ಯಾಪ್ತಿಗೆ ಬಂದಿರುವುದು ತಿಳಿದು ಬಂದಿರುವುದರಿಂದ ಈ ಕುರಿತು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವತಿಯಿಂದ ಸ್ಥಳ ಪರಿವೀಕ್ಷಣೆ ಮಾಡಲಾಗಿ ಯೋಜನೆಯ ಸ್ಥಳ ಹುನಗುಂದ ತಾಲ್ಲೂಕಿನಲ್ಲೇ ಬರುವುದು ಖಚಿತವಾಗಿದೆ ಎಂದು ವರದಿ ಮಾಡುತ್ತಾ ಸದರಿ ಕಂಪನಿಗೆ ಹಂಚಿಕೆ ಆದೇಶ ಹೊರಡಿಸುವಾಗ ಯೋಜನಾ ಸ್ಥಳ ಹುನಗುಂದ ತಾಲ್ಲೂಕಿನಲ್ಲಿ ಬರುವುದಾಗಿ ಆದೇಶ ಹೊರಡಿಸಬಹುದಾಗಿದೆ ಎಂದು ತಿಳಿಸಿರುತ್ತಾರೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ :–

ಸರ್ಕಾರದ ಆದೇಶ ಸಂಖ್ಯೆ: ಇಎನ್ 196 ಎನ್‌ಸಿಇ 2012,ಬೆಂಗಳೂರು, ದಿನಾಂಕ: 12.09.2012.

ಮೆ: ಎವರ್ ಗ್ರೀನ್ ಎನರ್ಜಿ ಎಂಟರ್ ಪ್ರೈಸಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್. ಇವರಿಗೆ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕು, ಐಹೊಳೆ ಗ್ರಾಮದಲ್ಲಿ ಮಲಪ್ರಭಾ ನದಿಗೆ ಅಡ್ಡಲಾಗಿ 1.6 ಮೆಗಾ ವ್ಯಾಟ್ ಸಾಮರ್ಥ್ಯದ ಐಹೊಳೆ ಕಿರು ಜಲ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ಭೌಗೋಳಿಕ ಸ್ಥಳದಲ್ಲಿ ಸ್ಥಾಪಿಸಲು ಕೆಳಕಂಡ ಷರತ್ತಿಗೊಳಪಟ್ಟು **ಸರ್ಕಾರದ ಅನುಮೋದನೆ ನೀಡಲಾಗಿದೆ :–**

	Latitude	Longitude
Weir	16°00 ’34 ’’	75°52 ’40 ’’
Power House	At the toe of the weir.	
FRL –503 Mtr TWL-496.5Mtr		

1 ಈ ಯೋಜನೆಯನ್ನು ಆದೇಶ ಹೊರಡಿಸಿದ ದಿನಾಂಕದಿಂದ 3 ವರ್ಷದ ಅವಧಿಯೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.

2 ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

3 ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ :ಇಎನ್ 435 ಎನ್‌ಸಿಇ 2011 ದಿನಾಂಕ: 06.1.2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

4 ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಪರಿಷ್ಕರಿಸಲು ಮೆಗಾ ವ್ಯಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

5 ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲ ಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ & ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್ ಪಡೆಯತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

6 ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

7 ಯೋಜನಾ ಅಭಿವೃದ್ಧಿದಾರರು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ನೀತಿ ನಿಯಮಗಳನುಸಾರ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳತಕ್ಕದ್ದು.

8 ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್ ನೀರಾವರಿ/ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದ್ದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

9 ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

10 ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಅಥವಾ ಸರ್ಕಾರದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

11 ವಿವರವಾದ ಯೋಜನಾ ವರದಿಯನ್ನು ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

12 ಸರ್ಕಾರಿ ಆದೇಶ ಸಂ: ಇಎನ್ 95 ಇಬಿಎಸ್ 2009 ದಿ:29.12.2009ರನ್ವಯ ವಿನಾಯಿತಿ ಸೌಲಭ್ಯಗಳು ಅನ್ವಯಿಸುವುದು.

13 ಸದರಿ ಯೋಜನೆಯನ್ನು ಅಭಿವೃದ್ಧಿದಾರರು ಕಾರ್ಯಗತ (implement) ಮಾಡದಹೊರತು, ವರ್ಗಾವಣೆ / ಮಾರಾಟಕ್ಕೆ ಅನುಮೋದನೆ ನೀಡಲಾಗುವುದಿಲ್ಲ.

14 ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೌಸಲ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

PR. 2100

ಇಂಧನ ಸಚಿವಾಲಯ

ವಿಷಯ: ರಾಜ್ಯದಲ್ಲಿರುವ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳ ಸಕ್ರಮೀಕರಣಕ್ಕಾಗಿ ನೋಂದಣಿ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ಇಎನ್ 9 ಪಿಎಸ್‌ಆರ್ 2011 ದಿ: 11–03–2011.

1. ಸುತ್ತೋಲೆ ಸಂಖ್ಯೆ: ಇಎನ್ 9 ಪಿಎಸ್‌ಆರ್ 2011 ದಿ:27–04–2011

2. ಸುತ್ತೋಲೆ ಸಂಖ್ಯೆ: ಇಎನ್ 9 ಪಿಎಸ್‌ಆರ್ 2011 ದಿ: 30–06–2011

3. ಸರ್ಕಾರಿ ಆದೇಶ ಸಂಖ್ಯೆ: ಇಎನ್ 9 ಪಿಎಸ್‌ಆರ್ 2011 ದಿ: 23–12–2011

4. ಸರ್ಕಾರಿ ಆದೇಶ ಸಂಖ್ಯೆ: ಇಎನ್ 9 ಪಿಎಸ್‌ಆರ್ 2011 ದಿ: 07–02–2011

ಪ್ರಸ್ತಾವನೆ:

ಅಕ್ರಮ ನೀರಾವರಿ ಪಂಪ್‌ಸೆಟ್‌ಗಳ ಸಕ್ರಮೀಕರಣಕ್ಕೆ ಅರ್ಜಿಗಳನ್ನು ನೋಂದಾಯಿಸಲು ದಿನಾಂಕ: 31–03–2012ರವರೆಗೆ ಗಡುವು ನೀಡಲಾಗಿತ್ತು ಆದರೆ ನಿಗದಿತ ಗಡುವಿನೊಳಗೆ ನೋಂದಾವಣೆಗೊಳ್ಳದೆ ಇನ್ನೂ ಬಾಕಿ ಉಳಿದಿರುವ ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮ ಮಾಡಲು ರೈತರು ಹಾಗೂ ಜನಪ್ರತಿನಿಧಿಗಳು ಮಾನ್ಯ ಇಂಧನ ಸಚಿವರನ್ನು ಕೋರಿದ್ದು, ಮಾನ್ಯ ಇಂಧನ ಸಚಿವರ ಸೂಚನೆಯಂತೆ, ರಾಜ್ಯದಲ್ಲಿ ಸಕ್ರಮೀಕರಣಕ್ಕೆ ಬಾಕಿ ಇರುವ ಅನಧಿಕೃತ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಅನುಕೂಲವಾಗಲೆಂದು ನೋಂದಣಿ ಅವಧಿಯನ್ನು ದಿನಾಂಕ: 31–07–2012ರವರೆಗೆ ವಿಸ್ತರಿಸಲಾಗಿದೆ.

ಅದರಂತೆ ಕೆಳಕಂಡ ಆದೇಶ:

ಸರ್ಕಾರಿ ಆದೇಶ ಸಂಖ್ಯೆ: ಇಎನ್ 09 ಪಿಎಸ್‌ಆರ್ 2011, ಬೆಂಗಳೂರು, ದಿನಾಂಕ: 03–07–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲಾ ವಿದ್ಯುತ್ ವಿತರಣಾ ಕಂಪನಿಗಳ ವ್ಯಾಪ್ತಿಯಲ್ಲಿ ಬರುವ ಅಕ್ರಮ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ರೈತರು ತಮ್ಮ ಅರ್ಜಿಗಳನ್ನು ನೋಂದಾಯಿಸಲು ಕಾಲಾವಧಿಯನ್ನು ದಿನಾಂಕ: 31–07–2012ರವರೆಗೆ ವಿಸ್ತರಿಸಿ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 09 ಪಿಎಸ್‌ಆರ್ 2011 ದಿನಾಂಕ: 11–03–2011 ರಲ್ಲಿ, ಮೂಲಭೂತ ಸೌಕರ್ಯ ಕಲ್ಪಿಸಿ ಸಕ್ರಮಗೊಳಿಸುವ ಕಾರ್ಯಕ್ಕೆ ದಿನಾಂಕ: 30–09–2011ರವರೆಗೆ ನೀಡಲಾಗಿದ್ದ ಗಡುವನ್ನು ತೆಗೆಯಲಾಗಿದ್ದು, ಸಕ್ರಮೀಕರಣದಡಿ ನೋಂದಾವಣೆಗೊಂಡು, ಠೇವಣಿ ಮತ್ತು ಸಕ್ರಮ ಶುಲ್ಕ ಪಾವತಿಸಿದ ಎಲ್ಲಾ ಪಂಪ್‌ಸೆಟ್‌ಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಿ, ಸಕ್ರಮಗೊಳಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೌಸಲ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

PR. 2077

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ: ಯಳಂದೂರು ಮತ್ತು ಕೊಳ್ಳೆಗಾಲ ತಾಲ್ಲೂಕಿನ ನಂಜನಗೂಡು–ಬಿಳಿಗಿರಿರಂಗನಬೆಟ್ಟ ರಾಜ್ಯ ಹೆದ್ದಾರಿ–80 ಮತ್ತು ಕೊಳ್ಳೆಗಾಲ–ಚೆಲ್ಲಂಪಾಳ್ಯ ಜಿಲ್ಲಾ ಮುಖ್ಯ ರಸ್ತೆಗಳ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಕುರಿತು

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ)ಬೆಂಗಳೂರುರವರ ಪತ್ರ ಸಂಖ್ಯೆ: ಮುಇಂ: ಸಂಕದ:ರಶಾ: ಸಂಇ2: 12–13 ದಿನಾಂಕ: 18–06–2012.

ಪ್ರಸ್ತಾವನೆ:

ಮೇಲೆ ಓದಲಾದ ಮುಖ್ಯ ಇಂಜಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಬೆಂಗಳೂರುರವರ ದಿನಾಂಕ: 18–06–2012ರ ಪತ್ರದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು ರವರು ದಿನಾಂಕ; 12–06–2012 ಮತ್ತು 13–06–2012 ಗಳಂದು, ಕೊಳ್ಳೆಗಾಲ ಮತ್ತು ಯಳಂದೂರು ತಾಲ್ಲೂಕುಗಳಲ್ಲಿ ಪ್ರವಾಸ ಕೈಗೊಂಡು ನಡೆಸಿದ ಪರಿವೀಕ್ಷಣೆ ಸಮಯದಲ್ಲಿ ಲೋಕೋಪಯೋಗಿ ವಿಭಾಗ, ಚಾಮರಾಜನಗರ ವ್ಯಾಪ್ತಿಯಲ್ಲಿ ಬರುವ ಯಳಂದೂರು ತಾಲ್ಲೂಕಿನ ರಾಜ್ಯ ಹೆದ್ದಾರಿ 80ರ ಬಿಳಿಗಿರಿರಂಗನಬೆಟ್ಟ–ನಂಜನಗೂಡು ರಸ್ತೆ ಮತ್ತು ಕೊಳ್ಳೆಗಾಲ ತಾಲ್ಲೂಕಿನ ಕೊಳ್ಳೆಗಾಲ –ಚೆಲ್ಲಂಪಾಳ್ಯ ಜಿಲ್ಲಾ ಮುಖ್ಯ ರಸ್ತೆಗಳು ತೀವ್ರವಾಗಿ ಶಿಥಿಲಾವಸ್ಥೆಗೆ ತಲುಪಿ ಸಂಚಾರಕ್ಕೆ ಯೋಗ್ಯವಲ್ಲದ ಪರಿಸ್ಥಿತಿಯಲ್ಲಿರುವುದರಿಂದ, ಸದರಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ವಿವರವಾದ ಅಂದಾಜು ಪಟ್ಟಿಯೊಂದಿಗೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದ್ದು, ಅದರಂತೆ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ವಿವರವಾದ ಅಂದಾಜು ಪಟ್ಟಿಯೊಂದಿಗೆ, ಸರ್ಕಾರದ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ:

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1.	ಯಳಂದೂರು ತಾಲ್ಲೂಕಿನ ನಂಜನಗೂಡು–ಬಿಳಿಗಿರಿರಂಗನ ಬೆಟ್ಟ ರಾಜ್ಯ ಹೆದ್ದಾರಿ–80 ರ ಸರಪಳಿ 83.80 ಕಿಮೀ ರಿಂದ 85.00 ಕಿಮೀ ರವರೆಗೆ ರಸ್ತೆಯ ಅಗಲ ವಿಸ್ತರಣೆ ಮತ್ತು ಅಭಿವೃದ್ಧಿ ಕಾಮಗಾರಿ	60.00
2.	ಕೊಳ್ಳೆಗಾಲ ತಾಲ್ಲೂಕಿನ ಕೊಳ್ಳೆಗಾಲ –ಚೆಲ್ಲಂಪಾಳ್ಯ ಜಿಲ್ಲಾ ಮುಖ್ಯ ರಸ್ತೆಯ ಸರಪಳಿ 98.20 ಕಿಮೀ ರಿಂದ 112.65 ಕಿಮೀ ರವರೆಗೆ ಆಯ್ದ ಭಾಗಗಳಲ್ಲಿ ಅಭಿವೃದ್ಧಿ ಕಾಮಗಾರಿ	300.00
	ಒಟ್ಟು	**360.00**

ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಲೋಇ 250 ಸಿಆರ್‌ಎಂ 2012, ಬೆಂಗಳೂರು, ದಿನಾಂಕ: 17ನೇ ಜುಲೈ, 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಯಳಂದೂರು ತಾಲ್ಲೂಕಿನ ನಂಜನಗೂಡು–ಬಿಳಿಗಿರಿರಂಗನಬೆಟ್ಟ ರಾಜ್ಯ ಹೆದ್ದಾರಿ–80ರ ಸರಪಳಿ 83.80 ಕಿಮೀ ರಿಂದ 85.00 ಕಿಮೀ ರವರೆಗೆ ರಸ್ತೆಯ ಅಗಲ ವಿಸ್ತರಣೆ ಮತ್ತು ಅಭಿವೃದ್ಧಿ ಕಾಮಗಾರಿಯನ್ನು ರೂ.60.00(ಅರವತ್ತು) ಲಕ್ಷಗಳ ಅಂದಾಜು ವೆಚ್ಚದಲ್ಲಿ, ಲೆಕ್ಕ ಶೀರ್ಷಿಕೆ 5054–03–337–0–17–160–ರಾಜ್ಯ ಹೆದ್ದಾರಿ ನವೀಕರಣದ ಅಡಿಯಲ್ಲಿ, 12–13ನೇ ಸಾಲಿನಲ್ಲಿ ಅಂದಾಜು ವೆಚ್ಚದ ಮೂರನೇ ಒಂದು ಭಾಗದ ಅನುದಾನ ಅಂದರೆ ರೂ.20.00 (ಇಪ್ಪತ್ತು) ಲಕ್ಷಗಳ ಅನುದಾನದಲ್ಲಿ ಹಾಗೂ ಕೊಳ್ಳೆಗಾಲ ತಾಲ್ಲೂಕಿನ ಕೊಳ್ಳೆಗಾಲ–ಚಲ್ಲಂಪಾಳ್ಯ ಜಿಲ್ಲಾ ಮುಖ್ಯ ರಸ್ತೆಯ ಸರಪಳಿ 98.20 ಕಿಮೀ ರಿಂದ 112.65 ಕಿಮೀ ರವರೆಗೆ ಆಯ್ದ ಭಾಗಗಳಲ್ಲಿ ಅಭಿವೃದ್ಧಿ ಕಾಮಗಾರಿಯನ್ನು ರೂ.300.00 (ಮೂರುನೂರು) ಲಕ್ಷಗಳ ಅಂದಾಜು ವೆಚ್ಚದಲ್ಲಿ, ಲೆಕ್ಕ ಶೀರ್ಷಿಕೆ 5054–04–337–0–17–160–ಜಿಲ್ಲಾ ಮುಖ್ಯ ರಸ್ತೆ ನವೀಕರಣದ ಅಡಿಯಲ್ಲಿ 12–13ನೇ ಸಾಲಿನಲ್ಲಿ ಅಂದಾಜು ವೆಚ್ಚದ ಮೂರನೇ ಒಂದು ಭಾಗದ ಅನುದಾನ ಅಂದರೆ ರೂ.100.00 (ಇಪ್ಪತ್ತು) ಲಕ್ಷಗಳ ಅನುದಾನದಲ್ಲಿ ಕೈಗೆತ್ತಿಗೊಳ್ಳಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಮೇಲಿನ ಅನುದಾನವನ್ನು 12–13ನೇ ಸಾಲಿನ ಆಯವ್ಯಯ ಅನುದಾನದಲ್ಲಿ ಈಗಾಗಲೇ ಎರಡು ವಲಯಗಳಿಗೆ ಹಂಚಿಕೆ ಮಾಡಿ, ಅದರಲ್ಲಿ ತುರ್ತು ಕಾಮಗಾರಿಗಳಿಗೆಂದು ಕಾಯ್ದಿರಿಸಲಾಗಿದ್ದ ಅನುದಾನದಲ್ಲಿ ಮೇಲಿನಂತೆ ಅನುದಾನ ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗಿದೆ.

ಮೇಲಿನ ಕಾಮಗಾರಿಗಳನ್ನು ಕರ್ನಾಟಕ ಪಾರದರ್ಶಕತೆ ಅಧಿನಿಯಮದನ್ವಯ ಕೈಗೊಳ್ಳತಕ್ಕದ್ದು ಮತ್ತು ಕಾಮಗಾರಿಗಳ ವೆಚ್ಚವು ಯಾವುದೇ ಕಾರಣಕ್ಕಾಗಿ ಅನುಮೋದಿತ ಅಂದಾಜು ಮೊತ್ತವನ್ನು ಮೀರತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಆರ್. ರೇವಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ(ಸಂಪರ್ಕ)
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.

PR. 1995

ಇಂಧನ ಸಚಿವಾಲಯ

ವಿಷಯ: ಮೆ: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಂಚಿಕೆಯಾಗಿರುವ 204 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 0.80 ಮೆ.ವ್ಯಾ ಸಾಮರ್ಥ್ಯವನ್ನು ಮೆ: ಜಯಲಕ್ಷ್ಮಿ ಎಕ್ಸ್‌ಪೋರ್ಟ್ಸ್ ಆಂಡ್ ಇಮ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ವರ್ಗಾವಣೆ ಮಾಡುವ ಬಗ್ಗೆ.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 42 ಎನ್‌ಸಿಇ 2006 ದಿನಾಂಕ: 20.4.2006.
2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 462 ಎನ್‌ಸಿಇ 2006 ದಿನಾಂಕ: 19.12.2006.
3) ಸರ್ಕಾರಿ ಆದೇಶ ಸಂಖ್ಯೆ: ಇಎನ್ 322 ಎನ್‌ಸಿಇ 2011 ದಿನಾಂಕ: 28.10.2011.
4) ಸರ್ಕಾರಿ ಆದೇಶ ಸಂಖ್ಯೆ: ಇಎನ್ 250 ಎನ್‌ಸಿಇ 2012 ದಿನಾಂಕ: 28.10.2012.
5) ಸರ್ಕಾರಿ ಆದೇಶ ಸಂಖ್ಯೆ: ಇಎನ್ 251 ಎನ್‌ಸಿಇ 2012 ದಿನಾಂಕ: 19.12.2012.
6) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/ JEIPL-0.8 MW (VWILLP-204 MW)/2012/3355 ದಿನಾಂಕ: 10/11.12.2012.

ಪ್ರಸ್ತಾವನೆ:–

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: Logaer Machines (I) Ltd. ಕಂಪನಿಗೆ ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ 150.66 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: Logaer Machines (I) Ltd. ಕಂಪನಿಯ ಹೆಸರನ್ನು ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಎಂದು ಬದಲಾಯಿಸಲು ಹಾಗೂ ಮೆ:: Logaer Machines (I) Ltd. ರವರಿಗೆ ಹಂಚಿಕೆಯಾಗಿರುವ ಎಲ್ಲಾ ಪವನ ವಿದ್ಯುತ್ ಯೋಜನೆಗಳನ್ನು ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಇವರಿಗೆ ವರ್ಗಾಯಿಸಲು ಅನುಮೋದನೆ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ, ಕಂಪನಿಗೆ ಮಂಜೂರಾಗಿದ್ದ 150.66 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅಂಶಿಕ ಸಾಮರ್ಥ್ಯವಾದ 69.63 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 200 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಿ ಆದೇಶಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ, ಕಂಪನಿಗೆ ಮಂಜೂರಾಗಿದ್ದ 200 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 204 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಈ ಕೆಳಕಂಡ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹೆಚ್ಚಿಸಿ ಆದೇಶಿಸಲಾಗಿತ್ತು.

Capacity in MW	Discription of area
79.20	A large plain area spread around the village of Timmapura, Kabnur, Ingalagi, Ramapura in Haveri and Dharwad District and it also consists of plains with higher elevations and has two main peaks. The proposed area is held by the following Geographical co-oridinates :- **Latitude**: 15°1'55"- 15°8'0" N

124.80	**Longitude**: 75°08’56”- 75°14’23” E **Ridge peaks:** 701, 714, 682, 717, 713, 698, 733, 722m AMSL. A very vast area encompasses high plains and small ridges spread around the villages Kongapura, Sisvinhal, Shanlipur, Huvinsigli, Sigli, Gudgeri and Ramgeri. A railway track runs into this area. This area has moderate evelations varying from 580 to 680 Mtrs and also consists of several peaks. The main places of this areas are Halgur, Gudgeri, Lakshmeshwar, Sigli, Karadgi, Nelgudda etc and the area is covered in the following Geographical co-oridinates :- Latitude: 15°0’0”- 15°10’30” N Longitude: 75°15’0”- 75°28’19” E Ridge peaks: 681, 671, 676, 638, 624, 698, 664, 611, 644, 701, 720, 663, 682, 664, 708, 665, 664m AMSL.
204 MW	

ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ : ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಾವೇರಿ ಮತ್ತು ಧಾರವಾಡ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 204 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 0.80 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ:: ಸ್ವಸ್ತಿಕ್ ಕನ್ಸಟ್ರಕ್ಷನ್ ಸರ್ವೀಸಸ್ ರವರಿಗೆ ಕೆಲವೊಂದು ಷರತ್ತಿಗೊಳಪಟ್ಟು ವರ್ಗಾಯಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (6)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ : ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಾವೇರಿ ಮತ್ತು ಧಾರವಾಡ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 204 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 0.80 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ: ಜಯಲಕ್ಷ್ಮಿ ಎಕ್ಸ್‌ಪೋರ್ಟ್ಸ್ ಆಂಡ್ ಇಮ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್, ರವರಿಗೆ ವರ್ಗಾಯಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ ಹಾಗೂ ಮಂಜೂರಾಗಿರುವ ಒಟ್ಟು 204 ಮೆ.ವ್ಯಾ. ಸಾಮರ್ಥ್ಯದಲ್ಲಿ 103.20 ಮೆ.ವ್ಯಾ. ಸಾಮರ್ಥ್ಯವನ್ನು ಈಗಾಗಲೇ ವಿವಿಧ ಹೂಡಿಕೆದಾರರಿಗೆ ವರ್ಗಾಯಿಸಿ ಯೋಜನೆಯನ್ನು ಅನುಷ್ಠಾನಗೊಳಿಸಿರುವುದಾಗಿ ತಿಳಿಸಿರುತ್ತಾರೆ. ಅಲ್ಲದೆ, ಸದರಿ ಯೋಜನೆಗೆ ಅವಶ್ಯಕವಾದ ಭೂಮಿಯು ಖಾಸಗಿ ಜಮೀನಾಗಿದ್ದು, ಈ ಯೋಜನೆಯನ್ನು ದಿನಾಂಕ 31.3.2013ರೊಳಗಾಗಿ ಅನುಷ್ಠಾನಗೊಳಿಸುವುದು ಹಾಗೂ ಉತ್ಪಾದನೆ ಆಗುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ 3ನೇ ವ್ಯಕ್ತಿಗೆ ಮಾರಾಟಮಾಡುವುದು ಮತ್ತು ಸ್ವಂತಕ್ಕೆ ಬಳಕೆಗಾಗಿ ಉಪಯೋಗಿಸಿಕೊಳ್ಳಲಾಗುವುದೆಂದು ತಿಳಿಸುತ್ತಾ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 375 ಎನ್‌ಸಿಇ 2012, ಬೆಂಗಳೂರು, ದಿನಾಂಕ: 27.12.2012.

ಮೆ : ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಯವರಿಗೆ ಹಾವೇರಿ ಮತ್ತು ಧಾರವಾಡ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 204 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ ಬಾಕಿ ಇರುವ ಸಾಮರ್ಥ್ಯದಿಂದ **0.80 ಮೆ.ವ್ಯಾ.** ಸಾಮರ್ಥ್ಯದ ಯೋಜನೆಯನ್ನು ಮೆ:: ಜಯಲಕ್ಷ್ಮಿ ಎಕ್ಸ್‌ಪೋರ್ಟ್ಸ್ ಆಂಡ್ ಇಮ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತಿಗೊಳಪಟ್ಟು **ವರ್ಗಾಯಿಸಲಾಗಿದೆ:–**

SHEDULE

Sl. No.	Village Name	Taluk/ District	MW	Land Survey number	WTG’s No.	Extent of Land per WTG (Acres)	Latitude, Longitude and Ridge peaks
1	Hulsogi	Shiggaon/ Haveri	0.80	211	216	1.10	Lat: 15°04’10.62” N Long: 75°10’49’’ E

1 **ಮೆ:: ಜಯಲಕ್ಷ್ಮಿ ಎಕ್ಸ್‌ಪೋರ್ಟ್ಸ್ ಆಂಡ್ ಇಮ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್** ರವರು 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 2011 ದಿನಾಂಕ 06.1.2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

2 **ಮೆ:: ಜಯಲಕ್ಷ್ಮಿ ಎಕ್ಸ್‌ಪೋರ್ಟ್ಸ್ ಆಂಡ್ ಇಮ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್** ರವರು ಉತ್ಪಾದಿಸುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮೂಲಕ 3ನೇ ವ್ಯಕ್ತಿಗೆ ಮಾರಾಟಮಾಡಲು ಮತ್ತು ಸ್ವಂತಕ್ಕೆ ಬಳಸಿಕೊಳ್ಳಲು ಅನುಮತಿಸಿದೆ.

3 ಸದರಿ ಯೋಜನೆಯನ್ನು ದಿನಾಂಕ 31.3.2013ರೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು. ಈ ಕುರಿತಂತೆ ಕ್ರೆಡಲ್ ಅಭಿವೃದ್ಧಿದಾರರಿಂದ ಒಪ್ಪಿಗೆ ಪತ್ರ ಪಡೆಯತಕ್ಕದ್ದು (committment letter)

4 ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೌಸಲ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ,

PR. 17

ಇಂಧನ ಸಚಿವಾಲಯ

ವಿಷಯ: ರಾಜ್ಯ ಇಂಧನ ಉಳಿತಾಯ ನಿಧಿಯಲ್ಲಿನ ಹಣವನ್ನು ಬಳಸಿಕೊಂಡು ಇಂಧನ ಸಂರಕ್ಷಣಾ ಕಾರ್ಯಕ್ರಮಗಳನ್ನು ಏರ್ಪಡಿಸಲು ಮೇಲುಸ್ತುವಾರಿಗಾಗಿ ರಾಜ್ಯ ಮಟ್ಟದ ಚಾಲನಾ ಸಮಿತಿ (State Level Steering Committee) ಯನ್ನು ರಚಿಸುವ ಬಗ್ಗೆ.

ಓದಲಾಗಿದೆ ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ರವರ ಪತ್ರ ಸಂಖ್ಯೆ : EC&EE :SECF :F- 24 :VSK :2012/2949, ದಿನಾಂಕ : 13.11.2012.

ಪ್ರಸ್ತಾವನೆ:–

ವಿವಿಧ ಇಂಧನ ಸಂರಕ್ಷಣಾ ಕಾರ್ಯಕ್ರಮಗಳನ್ನು ಏರ್ಪಡಿಸಲು ಪ್ರಸ್ತಾವನೆಯನ್ನು ಕ್ರೆಡಲ್ ಕೇಂದ್ರ ಸರ್ಕಾರದ ಬ್ಯೂರೋ ಆಫ್ ಎನರ್ಜಿ ಎಫಿಷಿಯನ್ಸಿ ಮಂತ್ರಾಲಯಕ್ಕೆ ದಿನಾಂಕ :25.02.2010ರ ಪತ್ರದಲ್ಲಿ ಸಲ್ಲಿಸಿದ್ದು, ಸದರಿ ಮಂತ್ರಾಲಯವು "Contribution to SECF by the Bureau of Energy Efficiency" ಯೋಜನೆಯಡಿ ರೂ.200 ಲಕ್ಷಗಳನ್ನು ದಿನಾಂಕ :26.03.2010ರ ಪತ್ರದಲ್ಲಿ ಹಾಗೂ ರಾಜ್ಯ ಸರ್ಕಾರವು ರಾಜ್ಯ ಸರ್ಕಾರದ ಕಂತಿನ ಹಣವಾದ ರೂ.200 ಲಕ್ಷಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತಕ್ಕೆ ದಿನಾಂಕ :21.07.2011ರ ಆದೇಶದಲ್ಲಿ ಬಿಡುಗಡೆಗೊಳಿಸಿದೆ. ಕ್ರೆಡಲ್ ಈ ಹಿಂದೆ ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದ ಇಂಧನ ಸಂರಕ್ಷಣಾ ಕಾರ್ಯಕ್ರಮಗಳನ್ನು ಈಗಾಗಲೇ ಬಹುತೇಕ ಇಲಾಖೆಗಳು ಅನುಷ್ಠಾನಗೊಳಿಸಿರುವುದು ಕಂಡುಬಂದಿದ್ದರಿಂದ ಕ್ರೆಡಲ್ ಕೇಂದ್ರ ಸರ್ಕಾರವು ಬಿಡುಗಡೆಗೊಳಿಸಿದ ಹಣವನ್ನು ಇಂಧನ ಸಂರಕ್ಷಣೆ ಕುರಿತ ಇತರೆ ಕಾರ್ಯಕ್ರಮಗಳಿಗೆ ವಿನಿಯೋಗಿಸಲು ಪರಿಷ್ಕೃತ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದು, ಕೇಂದ್ರ ಸರ್ಕಾರವು ದಿನಾಂಕ :23.10.2012ರ ಪತ್ರದಲ್ಲಿ ಈ ಪ್ರಸ್ತಾವನೆಗೆ ಅನುಮೋದನೆಯನ್ನು ನೀಡುತ್ತಾ ಇತ್ತೀಚೆಗೆ Bureau of Energy Efficiency ಮಂತ್ರಾಲಯವು ಹೊರಡಿಸಿರುವ ಮಾರ್ಗಸೂಚಿಯನ್ವಯ ರಾಜ್ಯ ಇಂಧನ ಸಂರಕ್ಷಣಾ ನಿಧಿಯಲ್ಲಿನ ಹಣವನ್ನು ಈಗಾಗಲೇ ಉದ್ದೇಶಿಸಿದ್ದ ಕಾರ್ಯಕ್ರಮಗಳಿಗೆ ಬದಲಾಗಿ ಪರಿಷ್ಕೃತ ಕಾರ್ಯಕ್ರಮಗಳಿಗೆ ಬಳಸಲು ರಾಜ್ಯ ಮಟ್ಟದ ಚಾಲನಾ ಸಮಿತಿಯು ಅಧಿಕಾರ ಹೊಂದಿರುವುದರಿಂದ ಸದರಿ ಸಮಿತಿಯ ಅನುಮೋದನೆಯನ್ನು ಪಡೆಯಲು ಸೂಚಿಸಿರುವುದರಿಂದ ಈ ಕೆಳಕಂಡ ಸದಸ್ಯರನ್ನೊಳಗೊಂಡ ರಾಜ್ಯ ಮಟ್ಟದ ಚಾಲನಾ ಸಮಿತಿ (State Level Steering Committee) ಯನ್ನು ರಚಿಸುವಂತೆ ಕೋರಿ ಮೇಲೆ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

1	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಇಂಧನ ಇಲಾಖೆ	ಅಧ್ಯಕ್ಷರು
2	ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್.	ಸದಸ್ಯ ಸಂಚಾಲಕರು
3	ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ.	ಸದಸ್ಯರು
4	ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.	ಸದಸ್ಯರು
5	ಪ್ರಧಾನ ಮುಖ್ಯ ವಿನ್ಯಾಸಕರು (Architect), ಲೋಕೋಪಯೋಗಿ ಇಲಾಖೆ.	ಸದಸ್ಯರು
6	ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ	ಸದಸ್ಯರು
7	ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ	ಸದಸ್ಯರು
8	ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.	ಸದಸ್ಯರು
9	ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.	ಸದಸ್ಯರು

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ :

ಸರ್ಕಾರಿ ಆದೇಶ ಸಂಖ್ಯೆ: ಇಎನ್ 348 ಎನ್‌ಸಿಇ 2012, ಬೆಂಗಳೂರು, ದಿನಾಂಕ: 17.12.2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಇಂಧನ ಸಂರಕ್ಷಣಾ ಕಾರ್ಯಕ್ರಮಗಳ ಮೇಲುಸ್ತುವಾರಿಗಾಗಿ ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡ ರಾಜ್ಯಮಟ್ಟದ ಚಾಲನಾ ಸಮಿತಿ (State Level Steering Committee)ಯನ್ನು ರಚಿಸಿ ಆದೇಶಿಸಿದೆ.

1	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಇಂಧನ ಇಲಾಖೆ	ಅಧ್ಯಕ್ಷರು
	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಆರ್ಥಿಕ ಇಲಾಖೆ	ಸದಸ್ಯರು
2	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.	ಸದಸ್ಯರು
3	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.	ಸದಸ್ಯರು
4	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.	ಸದಸ್ಯರು
5	ವ್ಯವಸ್ಥಾಪಕ ನಿರ್ದೇಶಕರು, ಕೆ.ಪಿ.ಟಿ.ಸಿ.ಎಲ್.	ಸದಸ್ಯರು
6	ಪ್ರಧಾನ ಮುಖ್ಯ ವಿನ್ಯಾಸಕರು (Principal Chief Architect), ಲೋಕೋಪಯೋಗಿ ಇಲಾಖೆ.	ಸದಸ್ಯರು
7	ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ	ಸದಸ್ಯರು
8	ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ	ಸದಸ್ಯರು
9	ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್.	ಸದಸ್ಯ ಸಂಚಾಲಕರು

ಸದರಿ ಸಮಿತಿಯು ರಾಜ್ಯ ಇಂಧನ ಸಂರಕ್ಷಣಾ ನಿಧಿಯಲ್ಲಿನ ಹಣ ಬಳಕೆಯ ಬಗ್ಗೆ ಎಂ.ಎನ್.ಆರ್.ಇ. ಯ ಮಾರ್ಗಸೂಚಿಯಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನೋಡಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೌಸಲ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ,

PR. 18

ಇಂಧನ ಸಚಿವಾಲಯ

ವಿಷಯ: ಮೆ:: ಗದಗ ಕೋ–ಆಪರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್ ಲಿಮಿಟೆಡ್ ರವರ ರದ್ದು ಪಡಿಸಿರುವ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಕಾಲಾವಕಾಶ ವಿಸ್ತರಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 39 ಎನ್‌ಸಿಇ 95 ದಿನಾಂಕ: 7.2.1997.

2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 490 ಎನ್‌ಸಿಇ 2008 ದಿನಾಂಕ: 23.3.2009.

3) ಸರ್ಕಾರಿ ಆದೇಶ ಸಂಖ್ಯೆ: ಇಎನ್ 490 ಎನ್‌ಸಿಇ 2008 ದಿನಾಂಕ: 05.12.2009.

4) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಪತ್ರ ಸಂಖ್ಯೆ: ಕೆಆರ್‌ಇಡಿ/08/ಜಿಸಿಐಇಎಲ್/5.00ಮೆ.ವ್ಯಾ./ಹೆಚ್‌ಎಂಎಂ/2012/2354 ದಿನಾಂಕ: 23/24.08.2012.

ಪ್ರಸ್ತಾವನೆ:–

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ:: ಗದಗ ಕೋ–ಆಪರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್ ಲಿಮಿಟೆಡ್ ಇವರಿಗೆ ಧಾರವಾಡ ಜಿಲ್ಲೆಯ ಕಪ್ಪತಗುಡ್ಡ ಎಂಬಲ್ಲಿ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಯೋಜನೆಯು ಹಂಚಿಕೆಯಾಗಿ 12 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿಯನ್ನು ಸಾದಿಸದೇ ಇರುವುದನ್ನು ಗಮನಿಸಿ ಸದರಿ ಸಂಸ್ಥೆಗೆ ಯೋಜನೆಯ ಅನುಷ್ಠಾನದಲ್ಲಿ ಆಸಕ್ತಿ ಇರುವುದಿಲ್ಲವೆಂದು ತೀರ್ಮಾನಿಸಿ ಮೆ:: ಗದಗ ಕೋ–ಆಪರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್ ಲಿಮಿಟೆಡ್ ಇವರಿಗೆ ಹಂಚಿಕೆ ಮಾಡಿದ್ದ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ರದ್ದುಪಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಮೆ:: ಗದಗ ಕೋ–ಆಪರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್ ಲಿಮಿಟೆಡ್ ಇವರಿಗೆ ಧಾರವಾಡ ಜಿಲ್ಲೆಯ ಕಪ್ಪತಗುಡ್ಡ (ಈಗ ಗದಗ್ ಜಿಲ್ಲೆ) ಎಂಬಲ್ಲಿ ಹಂಚಿಕೆಯಾಗಿದ್ದ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದು ಪಡಿಸಿದ್ದ ಸರ್ಕಾರಿ ಆದೇಶ ಸಂಖ್ಯೆ: ಇಎನ್ 490 ಎನ್‌ಸಿಇ 2008 ದಿನಾಂಕ: 23.3.2009ನ್ನು ಹಿಂದಕ್ಕೆಪಡೆದು ಯೋಜನೆಯನ್ನು ಅನುಷ್ಠಾನಗೊಳಿಸಲು ಡಿಸೆಂಬರ್ 2010ರವರೆಗೆ ಕಾಲಾವಕಾಶವನ್ನು ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ಇವರು ಮೆ:: ಗದಗ ಕೋ–ಆಪರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್ ಲಿಮಿಟೆಡ್ ಇವರ ಯೋಜನೆಗೆ ಅರಣ್ಯ ಇಲಾಖೆಯ ಮಂಜೂರಾತಿಯು ಅಂತಿಮ ಹಂತದಲ್ಲಿರುವುದಾಗಿ ತಿಳಿಸುತ್ತಾ, ಪ್ರತಿ ಮೆಗಾ ವ್ಯಾಟ್‌ಗೆ ರೂ. 1.00 ಲಕ್ಷಗಳ ಕಾಲಾವಕಾಶ ವಿಸ್ತರಣಾ ಶುಲ್ಕ ಪಾವತಿಸುವ ಷರತ್ತಿಗೊಳಪಟ್ಟು 2 ವರ್ಷಗಳ ಕಾಲವಕಾಶವನ್ನು ವಿಸ್ತರಿಸಲು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 224 ಎನ್‌ಸಿಇ 2012, ಬೆಂಗಳೂರು, ದಿನಾಂಕ: 18.10.2012.

ಮೆ:: ಗದಗ ಕೋ–ಆಪರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್ ಲಿಮಿಟೆಡ್ ಇವರಿಗೆ ಗದಗ್ ಜಿಲ್ಲೆಯ ಕಪ್ಪತಗುಡ್ಡ ಪ್ರದೇಶದಲ್ಲಿ ಮಂಜೂರಾಗಿರುವ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕಾಗಿ ಅಂತಿಮವಾಗಿ ಕಾಲಾವಕಾಶವನ್ನು ಪ್ರತಿ ಮೆಗಾ ವ್ಯಾಟ್‌ಗೆ ರೂ. 3.00 ಲಕ್ಷಗಳ ನೆರವೇರಿಕೆ ಖಾತರಿ (performance guarantee) ಪಾವತಿಸುವ ಮತ್ತು ಪ್ರತಿ ಮೆಗಾ ವ್ಯಾಟ್‌ಗೆ ಸರ್ಕಾರದ ಆದೇಶಾನುಸಾರ ಪಾವತಿಸಬೇಕಾಗುವ ಕಾಲಾವಕಾಶ ವಿಸ್ತರಣಾ ಶುಲ್ಕವನ್ನು ಪಾವತಿಸತಕ್ಕದ್ದೆಂಬ ಷರತ್ತಿಗೊಳಪಟ್ಟು ದಿನಾಂಕ 01.1.2011 ರಿಂದ **31.12.2014ರವರೆಗೆ** ಕಾಲಾವಕಾಶವನ್ನು ವಿಸ್ತರಿಸಿ ಆದೇಶಿಸಿದೆ.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೌಸಲ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

PR. 2186

ಇಂಧನ ಸಚಿವಾಲಯ

ವಿಷಯ: ಮೆ: ಸುಭಾಷ್ ಕಬಿನಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ: 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕ್ರೆಡಲ್/06/SH-436/Varuna MHS/2012/1779 ದಿನಾಂಕ: 29.06.2012.

2. ದಿನಾಂಕ: 07.07.2012ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ: ಸುಭಾಷ್ ಕಬಿನಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ಇವರಿಗೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕು, ಕನ್ನಂಬಾಡಿ/ಹೋಂಗಳ್ಳಿ ಗ್ರಾಮದ

ಬಳಿ, ವರುಣಾ ನಾಲೆಗೆ ಅಡ್ಡಲಾಗಿ ವರುಣಾ ಎಂ.ಹೆಚ್.ಎಸ್ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಮೆ: ಸುಭಾಷ್ ಕಬಿನಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು ನೀರಾವರಿ ಇಲಾಖೆಯ ಅನುಮತಿ ಪಡೆಯುವ ಷರತ್ತಿಗೊಳಪಟ್ಟು ಅನುಮತಿ ನೀಡಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ :–

ಸರ್ಕಾರದ ಆದೇಶ ಸಂಖ್ಯೆ: ಇಎನ್ 209 ಎನ್‌ಸಿಇ 2012,ಬೆಂಗಳೂರು, ದಿನಾಂಕ: 29.08.2012.

ಮೆ: ಸುಭಾಷ್ ಕಬಿನಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ಇವರಿಗೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕು, ಕನ್ನಂಬಾಡಿ/ಹೋಂಗಳ್ಳಿ ಗ್ರಾಮದ ಬಳಿ, ವರುಣಾ ನಾಲೆಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ಭೌಗೋಳಿಕ ಸ್ಥಳದಲ್ಲಿ ಸ್ಥಾಪಿಸಲು ಕೆಳಕಂಡ ಷರತ್ತಿಗೊಳಪಟ್ಟು **ಸರ್ಕಾರದ ಅನುಮೋದನೆ ನೀಡಲಾಗಿದೆ** :–

	Latitude	**Longitude**
Weir	12°24'48 "	76°34'40 "
Power House	Toe of the weir	
FRL – 752.68Mts TWL- 735.25 Mts		

1 ಈ ಯೋಜನೆಯನ್ನು ಆದೇಶ ಹೊರಡಿಸಿದ ದಿನಾಂಕದಿಂದ 3 ವರ್ಷದ ಅವಧಿಯೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.

2 ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

3 ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ :ಇಎನ್ 435 ಎನ್‌ಸಿಇ 2011 ದಿನಾಂಕ : 06.1.2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

4 ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಪರಿಷ್ಕರಿಸಲು ಮೆಗಾ ವ್ಯಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣಾ ಶುಲ್ಕವನ್ನು ತುಂಬುವುದು.

5 ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲ ಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ & ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್ ಪಡೆಯತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

6 ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

7 ಯೋಜನಾ ಅಭಿವೃದ್ಧಿದಾರರು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ನೀತಿ ನಿಯಮಗಳನುಸಾರ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳತಕ್ಕದ್ದು.

8 ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್ ನೀರಾವರಿ/ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದ್ದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

9 ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

10 ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಅಥವಾ ಸರ್ಕಾರದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

11 ವಿವರವಾದ ಯೋಜನಾ ವರದಿಯನ್ನು ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

12 ಸರ್ಕಾರಿ ಆದೇಶ ಸಂ: ಇಎನ್ 95 ಇಬಿಎಸ್ 2009 ದಿ:29.12.2009ರನ್ವಯ ವಿನಾಯಿತಿ ಸೌಲಭ್ಯಗಳು ಅನ್ವಯಿಸುವುದು.

13 ಸದರಿ ಯೋಜನೆಯನ್ನು ಅಭಿವೃದ್ಧಿದಾರರು ಕಾರ್ಯಗತ (implement) ಮಾಡದಹೊರತು, ವರ್ಗಾವಣೆ / ಮಾರಾಟಕ್ಕೆ ಅನುಮೋದನೆ ನೀಡಲಾಗುವುದಿಲ್ಲ.

14 ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೌಸಲ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ,

PR. 2292

ಇಂಧನ ಸಚಿವಾಲಯ

ವಿಷಯ: ಮೆ : ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ರವರಿಗೆ ಹಂಚಿಕೆಯಾಗಿರುವ 30.60 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 3.4 ಮೆ.ವ್ಯಾ. ಸಾಮರ್ಥ್ಯವನ್ನು ಮೆ:: ಸರಾಯು ಕ್ಲೀನ್‌ಜೆನ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ವರ್ಗಾವಣೆ ಮಾಡುವ ಬಗ್ಗೆ.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 337 ಎನ್‌ಸಿಇ 2006 ದಿನಾಂಕ: 16.10.2006.
2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 9 ಎನ್‌ಸಿಇ 2007 ದಿನಾಂಕ: 12.1.2007.
3) ಸರ್ಕಾರಿ ಆದೇಶ ಸಂಖ್ಯೆ: ಇಎನ್ 432 ಎನ್‌ಸಿಇ 2010 ದಿನಾಂಕ: 16.12.2010
4) ಸರ್ಕಾರಿ ಆದೇಶ ಸಂಖ್ಯೆ: ಇಎನ್ 318 ಎನ್‌ಸಿಇ 2011 ದಿನಾಂಕ: 26.7.2011.
5) ಸರ್ಕಾರಿ ಆದೇಶ ಸಂಖ್ಯೆ: ಇಎನ್ 166 ಎನ್‌ಸಿಇ 2011 ದಿನಾಂಕ: 25.7.2011
6) ಸರ್ಕಾರಿ ಆದೇಶ ಸಂಖ್ಯೆ: ಇಎನ್ 89 ಎನ್‌ಸಿಇ 2012 (4) ದಿನಾಂಕ: 05.3.2012.
7) ಸರ್ಕಾರಿ ಆದೇಶ ಸಂಖ್ಯೆ: ಇಎನ್ 225 ಎನ್‌ಸಿಇ 2012 ದಿನಾಂಕ: 06.08.2012
8) ಸರ್ಕಾರಿ ಆದೇಶ ಸಂಖ್ಯೆ: ಇಎನ್ 227 ಎನ್‌ಸಿಇ 2012 ದಿನಾಂಕ: 13.08.2012
9) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: KRED/08/SRR/SCPL-3.4 MW (GNS-10-13)/RSR/2012/3374 ದಿನಾಂಕ: 12.12.2012.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರಿ ಆದೇಶದಲ್ಲಿ ಮೆ : ಆರ್. ಶ್ರೀ ರಾಮುಲು ರೆಡ್ಡಿ ಮತ್ತು ಕೋ ಕಂಪನಿಗೆ ದಾವಣಗೆರೆ, ಬಳ್ಳಾರಿ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ 63 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರಿ ಆದೇಶದಲ್ಲಿ ಮೆ : ಆರ್. ಶ್ರೀ ರಾಮುಲು ರೆಡ್ಡಿ ಮತ್ತು ಕೋ ಹೆಸರನ್ನು ಮೆ : ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಲು ಅನುಮೋದನೆ ನೀಡಲಾಗಿತ್ತು.

ಮೇಲೆ (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ:: ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ರವರಿಗೆ ಮೇಲ್ಕಂಡಂತೆ ಹಂಚಿಕೆಯಾಗಿರುವ ಒಟ್ಟು ಸಾಮರ್ಥ್ಯದಲ್ಲಿ, ಬೆಳಗಾವಿ ಜಿಲ್ಲೆಯಲ್ಲಿ ಅನುಮತಿಸಿರುವ ಅಂಶಿಕ ಸಾಮರ್ಥ್ಯವಾಗಿರುವ 7 ಮೆ.ವ್ಯಾ. ಸಾಮರ್ಥ್ಯವನ್ನು 30.60 ಮೆ.ವ್ಯಾ.ಗೆ ಹೆಚ್ಚಿಸಿ ಈ ಸಾಮರ್ಥ್ಯದಲ್ಲಿ 25 ಮೆ.ವ್ಯಾ. ವಿದ್ಯುತ್ತನ್ನು ರಾಜ್ಯದ ಗ್ರಿಡ್‌ಗೆ ಸರಬರಾಜು ಮಾಡುವಂತೆ ಹಾಗೂ ಈ ಯೋಜನೆಯನ್ನು ದಿನಾಂಕ 31.3.2011ರೊಳಗೆ ಅನುಷ್ಠಾನಗೊಳಿಸತಕ್ಕದೆಂದು ಆದೇಶಿಸಲಾಗಿತ್ತು. ಮೇಲೆ (4)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ 31.12.2011ರವರೆಗೆ ವಿಸ್ತರಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ಆದೇಶದಲ್ಲಿ ಮೆ : ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಬೆಳಗಾವಿ ಜಿಲ್ಲೆಯ ನೆಲಗಂಟಿ ಗ್ರಾಮದಲ್ಲಿ ಮಂಜೂರಾಗಿರುವ ಅಂಶಿಕ ಸಾಮರ್ಥ್ಯವನ್ನು 15 ಮೆ.ವ್ಯಾ ನಿಂದ 40 ಮೆ.ವ್ಯಾ.ಗೆ ಹಾಗೂ ಉಮ್ರಾಣಿ ಗ್ರಾಮದಲ್ಲಿ ಮಂಜೂರಾಗಿರುವ ಅಂಶಿಕ ಸಾಮರ್ಥ್ಯವನ್ನು 15 ಮೆ.ವ್ಯಾ. ನಿಂದ 100 ಮೆ.ವ್ಯಾ.ಗೆ ಹೆಚ್ಚಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6) ರ ಆದೇಶದಲ್ಲಿ ಮೆ:: ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಬೆಳಗಾವಿ ಜಿಲ್ಲೆಯಲ್ಲಿ ಅನುಮತಿಸಿರುವ 7.00 ಮೆಗಾ ವ್ಯಾಟ್ ಸಾಮರ್ಥ್ಯವನ್ನು 30.60 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸಿ ಈ ಸಾಮರ್ಥ್ಯದಲ್ಲಿ 25 ಮೆ.ವ್ಯಾ. ಸಾಮರ್ಥ್ಯವನ್ನು ರಾಜ್ಯದ ಗ್ರಿಡ್‌ಗೆ ಸರಬರಾಜು ಮಾಡುವಂತೆ ಹಾಗೂ ಸರ್ಕಾರಿ ಆದೇಶ ಸಂ:ಇಎನ್ 432 ಎನ್‌ಸಿಇ 2010 ದಿ:16.12.2010 ರಲ್ಲಿ ವಿಧಿಸಿರುವ ಷರತ್ತನ್ನು ತೆಗೆಯಲು ಆದೇಶಿಸಲಾಗಿತ್ತು ಹಾಗೂ ಮೆ:: ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪೆನಿಯು ಬೆಳಗಾವಿ ಜಿಲ್ಲೆಯಲ್ಲಿ ಕೈಗೊಳ್ಳುತ್ತಿರುವ 40 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 25 ಮೆ.ವ್ಯಾ. ಸಾಮರ್ಥ್ಯವನ್ನು ರಾಜ್ಯದ ಗ್ರಿಡ್‌ಗೆ ಸರಬರಾಜು ಮಾಡತಕ್ಕದೆಂದ್ದು ಮತ್ತು ಮೆ:: ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ಅನುಷ್ಠಾನ ಮಾಡಲು ಬಾಕಿ ಇರುವ 17.00 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ: 30.06.2012 ರವರೆಗೆ ವಿಸ್ತರಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (7) ರ ಆದೇಶದಲ್ಲಿ ಮೆ:: ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಬೆಳಗಾವಿ ಜಿಲ್ಲೆಯಲ್ಲಿ ಅನುಮತಿಸಿರುವ 30.60 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ, ಬಾಕಿ ಉಳಿದಿರುವ 15.3 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ಅಂತಿಮವಾಗಿ ಕಾಲಾವಕಾಶವನ್ನು ದಿನಾಂಕ: 31.03.2013ರ ವರೆಗೆ ವಿಸ್ತರಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (8) ರ ಆದೇಶದಲ್ಲಿ ಮೆ:: ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಬೆಳಗಾವಿ ಜಿಲ್ಲೆಯಲ್ಲಿ ಅನುಮತಿಸಲಾದ 30.60 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 0.85 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೊಜನೆಯನ್ನು ಮೆ:: ಚಾಮುಂಡೇಶ್ವರಿ ಬಿಲ್ಡ್ ಟೆಕ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಕೆಲವೊಂದು ಷರತ್ತಿಗೊಳಪಟ್ಟು ವರ್ಗಾಯಿಸಿ ಆದೇಶಿಸಲಾಗಿತ್ತು.

ಮೆ : ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಅನುಮತಿಸಿರುವ 30.60 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 16.15 ಮೆ.ವ್ಯಾ. ಸಾಮರ್ಥ್ಯವನ್ನು ವಿವಿಧ ಹೂಡಿಕೆದಾರರಿಗೆ ವರ್ಗಾಯಿಸಿ ಅನುಷ್ಠಾನಗೊಳಿಸಿರುತ್ತಾರೆಂದು ವರದಿಮಾಡಿರುತ್ತಾರೆ, ಬಾಕಿ ಇರುವ ಸಾಮರ್ಥ್ಯದಿಂದ 3.4 ಮೆ.ವ್ಯಾ. ಸಾಮರ್ಥ್ಯವನ್ನು ಮೆ:: ಸರಾಯು ಕ್ಲೀನ್‌ಜೆನ್ ಪ್ರೈವೇಟ್ ಲಿಮಿಟೆಡ್ ರವರಿಗೆ ವರ್ಗಾಯಿಸುವಂತೆ ಕೋರಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (9) ರ ಪತ್ರದಲ್ಲಿ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಅಲ್ಲದೆ, ಸದರಿ ಯೋಜನೆಗೆ ಅವಶ್ಯವಾದ ಭೂಮಿಯು ಖಾಸಗಿ ಜಮೀನಗಿದ್ದು, ಈ

ಯೋಜನೆಯನ್ನು ದಿನಾಂಕ 31.03.2013ರೊಳಗೆ ಅನುಷ್ಠಾನಗೊಳಿಸಲಾಗುವುದು ಮತ್ತು ಉತ್ಪಾದನೆ ಆಗುವ ವಿದ್ಯುತ್ತನ್ನು 3ನೇ ವ್ಯಕ್ತಿಗೆ ವೀಲಿಂಗ್ ಮತ್ತು ಬ್ಯಾಂಕಿಂಗ್ ಮೂಲಕ ಮಾರಾಟ ಮಾಡಲಾಗುವುದು ಮತ್ತು ಸ್ವಂತಕ್ಕೆ ಬಳಸಿಕೊಳ್ಳಲಿರುವುದಾಗಿ (Group Captive Consumption) ತಿಳಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 374 ಎನ್‌ಸಿಇ 2012, ಬೆಂಗಳೂರು, ದಿನಾಂಕ: 24.12.2012.

ಮೆ:: ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಬೆಳಗಾವಿ ಜಿಲ್ಲೆಯಲ್ಲಿ ಅನುಮತಿಸಲಾದ 30.60 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ ಬಾಕಿ ಇರುವ ಸಾಮರ್ಥ್ಯದಿಂದ **3.4 ಮೆ.ವ್ಯಾ.** ಸಾಮರ್ಥ್ಯದ ಪವನ ವಿದ್ಯುತ್ ಯೊಜನೆಯನ್ನು ಮೆ:: ಸರಾಯು ಕ್ಲೀನ್‌ಜೆನ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಈ ಕೆಳಕಂಡ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಈ ಕೆಳಕಂಡ ಷರತ್ತಿಗೊಳಪಟ್ಟು ವರ್ಗಾಯಿಸಲು ಅನುಮತಿ ನೀಡಲಾಗಿದೆ :–

SHEDULE

Location and District	Geographical description of the project
Shirgaon village, Chikkodi Taluk, **Belgaum District.**	The identified potential comprises of two areas and is a mixture of hill and plains. Area-A is spread N-E direction of Shirgaon. Whereas Area-B is located in South of Girgaon and is spread in E-W directions. The Geographical co-ordinates of Area-A & Area-B are as follows: **Area-A: Latitude**: 16°27'32"- 16°30'0" N **Longitude**: 74°31'06"- 74°32'57" E **Ridge peaks:** 620 and 647 M Amsl **Area-B: Latitude**: 16°25'52"- 16°26'41" N **Longitude**: 74°30'52"- 74°32'41" E**Ridge peaks:** 720 M Amsl **Topo Sheet**: 47 L/11

Village Name	Taluk/ District	MW	Land Survey Number	No. of WTG's	Extent in Land (Acres)	Wind Turbine Generator location No.	Latitude, Longitude & Ridge Peaks
Nej	Chikkodi / Belgaum	0.85	418/6C+8A, 418/6C+8B, 418/6C+8C	1 No.	2 Acres	GNS-10	**Latitude**: 16°28'33.67"-N **Longitude**:74°32'27.15"- E
Nej	Chikkodi / Belgaum	0.85	418/2B+4A, 418/2B+4B, 418/2B+4C	1 No.	2 Acres	GNS-11	**Latitude**: 16°28'39.10"-N **Longitude**:74°32'25.04"- E
Nej	Chikkodi / Belgaum	0.85	416/3B	1 No.	2 Acres	GNS-12	**Latitude**: 16°28'44.31"-N **Longitude**:74°32'22.67"- E
Nej	Chikkodi / Belgaum	0.85	416/2A	1 No.	2 Acres	GNS-13	**Latitude**: 16°28'52.57"-N **Longitude**:74°32'22.75"- E
Total		**3.4**					

1 **ಮೆ:: ಸರಾಯು ಕ್ಲೀನ್‌ಜೆನ್ ಪ್ರೈವೇಟ್ ಲಿಮಿಟೆಡ್** ಕಂಪನಿಯವರು 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 2011 ದಿನಾಂಕ 06.1.2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

2 **ಮೆ:: ಸರಾಯು ಕ್ಲೀನ್‌ಜೆನ್ ಪ್ರೈವೇಟ್ ಲಿಮಿಟೆಡ್** ರವರು ಉತ್ಪಾದಿಸುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮೂಲಕ 3ನೇ ವ್ಯಾಕ್ತಿಗೆ ಮಾರಾಟ ಮಾಡಲು ಮತ್ತು ಸ್ವಂತಕ್ಕೆ ಬಳಸಿಕೊಳ್ಳಲು (Group Captive Consumption) ಅನುಮತಿಸಿದೆ.

3 ಸದರಿ ಯೋಜನೆಯನ್ನು ದಿನಾಂಕ 31.3.2013ರೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು. ಈ ಕುರಿತಂತೆ ಕ್ರೆಡಲ್ ಅಭಿವೃದ್ಧಿದಾರರಿಂದ ಒಪ್ಪಿಗೆ ಪತ್ರ ಪಡೆಯತಕ್ಕದ್ದು (committment letter)

4 ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೌಸಲ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

PR. 11